ಅಧ್ಯಕ್ಷರು: ನೀವು ಏಕೆ ಕೂಗುತ್ತೀರಿ ಎಂಬುದೇ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಅವರು ಆ ರೀತಿ ಹೇಳಿರುವುದು ತಪ್ಪಾಗುವುದಿಲ್ಲವೇ? ಆದರೆ ಈಗ ಮಾನ್ಯ ಸಿಂಧ್ಯರವರು ಹೇಳಿದ್ದು ತಪ್ಪಾಗುತ್ತದೆ. ನೀವು ಮಾಡಿದ್ದೆಲ್ಲಾ ಸರಿ.

ಶ್ರೀ ಡಿ.ಬಿ. ಚಂದ್ರೇಗೌಡ: ಕರ್ನಾಟಕದ ಶಾಸನ ಸಭೆಯೊಳಗೆ ಇವೆಲ್ಲಾ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ವಿರೋಧ ಪಕ್ಷದ ನಾಯಕರಿಗೆ ಈ ಶಬ್ದಗಳು ಸರಿ ಎಂದು ಅನ್ನಿಸಿದರೆ ಹಾಗೆಯೇ ಬಿಟ್ಟುಬಿಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಿಮ್ಮ ಚೇಂಬರಿನಲ್ಲಿ ಈ ರೀತಿ ಚರ್ಚೆಯಾಗಿದೆ. ಆ ರೀತಿ ಚರ್ಚೆ ಮಾಡಿದ್ದಕ್ಕೆ ಇದೇನಾದರೂ ಸ್ಯಾಂಟಿಟಿ ಇದೆಯೇ?

ಅಧ್ಯಕ್ಷರು: ಅದರ ಬಗ್ಗೆ ಮುಂದೆ ಆಲೋಚನೆ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ: ನಿಮಗೇನೂ ಗೊತ್ತಿಲ್ಲದೇ ಇದ್ದಾಗ, ದಯವಿಟ್ಟು ನೀವು ಇದನ್ನು ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ನಿಮ್ಮ ನಿಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ, ರಾಮಯ್ಯನವರೇ, ನೀವು ಮಾತನಾಡಿ ಯಾರಿಗೂ ಯೀಲ್ಡ್ ಆಗಬೇಡಿ.

ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರು ದುರ್ಗ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಫೆಬ್ರವರಿ ಫೆಬ್ರವರಿ 26 ನೇ ತಾರೀಖು ಈ ಸದನದಲ್ಲಿ ಮಾಡಿರುವಂಥ ಭಾಷಣಕ್ಕೆ ವಂದನೆಯನ್ನು ಅರ್ಪಿಸುವಂಥ ನಿರ್ಣಯವನ್ನು ನಾನು ಈಗಾಗಲೇ ಸದನದ ಮುಂದೆ ಮಂಡಿಸಿದ್ದೇನೆ. ಈ ನಿರ್ಣಯವನ್ನು ಮಂಡಿಸುತ್ತಾ, ರಾಜ್ಯಪಾಲರು ದಯಪಾಲಿಸಿರುವಂಥ ಭಾಷಣದ ಬಗ್ಗೆ ನಾಲ್ಕು ಮಾತುಗಳನ್ನು ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣ ನಮ್ಮ ಸರ್ಕಾರದ ಎಲ್ಲ ಕಾರ್ಯಕ್ರಮಗಳ ಪಟ್ಟಿ ಅಲ್ಲ. ಈ ಸರ್ಕಾರ ಆಡಳಿತ ದೃಷ್ಟಿಯಿಂದ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಯಾವ ದಿಕ್ಕಿನಲ್ಲಿ ಸಾಗುತ್ತಾ ಇದೆ ಎನ್ನುವುದಕ್ಕೆ ಒಂದು ದಿಕ್ಸೂಚಿ ಅಷ್ಟೆ. ರಾಜ್ಯಪಾಲರ ಭಾಷಣದ ಪ್ರಕಾರ, ಕಳೆದ ವರ್ಷ ಎಲ್ಲವನ್ನೂ ಮಾಡಿದ್ದೇವೆ ಎನ್ನುವ ಹೆಮ್ಮೆಯಾಗಲೀ ಒಂದೇ ವರ್ಷ ಎಲ್ಲವನ್ನೂ ಮಾಡಿಯೇ ಮುಗಿಸುತ್ತೇವೆ ಎನ್ನುವಂಥ ಹುಂಬತನವಾಗಲೀ, ನನ್ನ ಪ್ರಕಾರ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರುವ ವಿಷಯವನ್ನು ಎರಡು ಭಾಗವಾಗಿ ಮಾಡಿಕೊಂಡು ಆಡಳಿತಾತ್ಮಕವಾದ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಿದ್ದನ್ನು ವಿಶ್ಲೇಷಣೆ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಕಾರಣ ಇಷ್ಟೆ; ಯಾವ ಆಡಳಿತದಲ್ಲಿ ಬಿಗಿ ಇರುವುದಿಲ್ಲವೋ, ಯಾವ ಆಡಳಿತ ಸರಿ ಇರುವುದಿಲ್ಲವೋ, ಯಾವ ಆಡಳಿತದಲ್ಲಿ ಕಾಠಿಣ್ಯವಾದಂಥ ತೀರ್ಮಾನಗಳನ್ನು ತೆಗೆದುಕೊಳ್ಳುವುದಿಲ್ಲವೋ, ಅಂತಹ ಒಂದು ಆಡಳಿತದಲ್ಲಿ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯ ಇಲ್ಲ. ಒಂದು ವೇಳೆ ಮಾಡಿದರೂ ಕೂಡ ಉತ್ತಮವಾದಂಥ ಅಭಿವೃದ್ಧಿಯನ್ನು

ಸಾಧಿಸಲಿಕ್ಕೆ ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ ಇರುವುದರಿಂದ, ಆಡಳಿತಕ್ಕೆ ಆದ್ಯತೆ ಕೊಟ್ಟು ಮೊದಲು ಆಡಳಿತವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಈ ಸರ್ಕಾರಕ್ಕೆ ಅನೇಕ ಸವಾಲುಗಳನ್ನು ಎದುರಿಸುವಂಥ ಸಂದರ್ಭ ಬಂತು. ಆಡಳಿತಕ್ಕತೆ ಸಂಬಂಧಿಸಿದ ಸವಾಲುಗಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸವಾಲುಗಳನ್ನು ಸರ್ಕಾರ ಎದುರಿಸುವಂಥ ಸಂದರ್ಭ ಬಂತು. ರಾಜ್ಯಪಾಲರ ಭಾಷಣದಲ್ಲಿ ಎಲ್ಲವನ್ನೂ ಬಿಟ್ಟು ನಾನು ಕೊನೆಯಿಂದ ಪ್ರಾರಂಭ ಮಾಡುತ್ತಿದ್ದೇನೆ. ಅದಕ್ಕೆ ಕಾರಣ, ಈಗಾಗಲೇ ನಾನು ಹೇಳಿದಂತ ಕಾರಣ. ಒಂದು ರಾಷ್ಟ್ರದ, ಒಂದು ರಾಜ್ಯದ ಅಥವಾ ಒಂದು ನಾಡಿನ ಅಭಿವೃದ್ಧಿಗೆ ಆಡಳಿತ ಕಟ್ಟುನಿಟ್ಟಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಕಠಿಣವಾದಂಥ, ನಿರ್ದಾಕ್ಷಿಣ್ಯವಾದಂಥ ನಿಲುವನ್ನು ತಾಳಬೇಕು. ಆಗ ಮಾತ್ರ ಒಳ್ಳೆಯ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯ ಎಂದು ತಿಳಿದುಕೊಂಡಿದ್ದೇನೆ. ರಾಜ್ಯಪಾಲರು ಭಾಷಣದಲ್ಲಿ 71 ಮತ್ತು 72 ನೇ ಪ್ಯಾರಾಸಿವಿಲ್ ಸೇವೆಯಲ್ಲಿ ಸುಧಾರಣೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ. ಇವುಗಳ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ. ಯಾವುದು ಉತ್ತಮವಾದಂಥ ಆಡಳಿತ? ಉತ್ತಮವಾದಂಥ ಆಡಳಿತ ಪಾರದರ್ಶಕತೆ ಮತ್ತು ಹೊಣೆಗಾರಿಕೆ; ಈ ಪಾರದರ್ಶಕತೆ ವಿಷಯ ಬಂದಾಗ ಭ್ರಷ್ಟತನ ಬರುತ್ತೆ ಹೊಣೆಗಾರಿಕೆ ವಿಷಯ ಬಂದಾಗ ಸೋಗಲಾಡಿತನ ಬರುತ್ತೆ: ನೌಕರಶಾಹಿಯ ನಿರ್ಲಕ್ಷ್ಯ ಬರುತ್ತೆ. ಕಾಠಿಣ್ಯವಿಲ್ಲದ ನಿಲುವು ಬರುತ್ತೆ. ನನಗೆ ಪ್ರಾಮಾಣಿಕವಾಗಿ ಅನಿಸುತ್ತದೆ. ಇವತ್ತು ರಾಜ್ಯದ, ರಾಷ್ಟ್ರದ ಆಡಳಿತದಲ್ಲಿ ಇವತ್ತಿನ ಎಲ್ಲಾ ಪಕ್ಷಗಳೂ ಕಾಠಿಣ್ಯವಾದ, ನಿರ್ದಾಕ್ಷಿಣ್ಯವಾದ ನಿಲುವನ್ನು ತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ಒದಗಿ ಬಂದಿದೆ. It is true. I also honestly feel that an element of authority is required to achiege the target. Otherwise, we will not be able to achieve anything. ಆದ್ದರಿಂದ, ನಾನು ತಮ್ಮಲ್ಲಿ ಈ ಸದನದ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಕಾಠಿಣ್ಯದ ಅವಶ್ಯಕತೆ ನನಗೂ ಕಾಣಿಸುತ್ತದೆ. That is why I said for an administratr an element of authority is certainly required. ಸ್ವಾಮಿ, ಏನು ಕಷ್ಟವಾಗಿದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಅದರಲ್ಲೂ ಪಕ್ಷ ರಾಜಕೀಯದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೇ ಅವರಿಗೂ, ನಮಗೂ ಇರುವುದರಿಂದ ಅನೇಕ ಸಂದರ್ಭಗಳಲ್ಲಿ ಈ ಕಾಠಿಣ್ಯವಾದಂಥ, ನಿರ್ದಾಕ್ಷಿಣ್ಯ ವಾದಂಥ ಆಡಳಿತ ಮಾಡುವುದು ಅಸಾಧ್ಯವಲ್ಲದಿದ್ದರೂ ಕೂಡ ಕಷ್ಟವಾದ ಕೆಲಸವೆಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಆಡಳಿತದಲ್ಲಿ ಬಿಗಿ ಇಲ್ಲ, ಕಠಿಣವಾದಂಥ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾ ಇಲ್ಲ, ಇದು ಆಡಳಿತ ಮಾಡುವಂಥ ಎಲ್ಲರಿಗೂ ಒಂದು ಪ್ರಶ್ನೆಯಾಗಿದೆ. ಇದಕ್ಕೆ ಕಾರಣ, ನನ್ನ ಪ್ರಕಾರ ಯಾವುದೋ ಒಂದು ಪಕ್ಷವನ್ನು, ಯಾವುದೋ ಒಬ್ಬ ವ್ಯಕ್ತಿಯನ್ನು, ಯಾವುದೋ ಒಂದು ಆಡಳಿತವನ್ನು ದೂಷಣೆ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾವೇ ಸೃಷ್ಟಿಸಿದಂಥ ವ್ಯವಸ್ಥೆಯಲ್ಲಿ ಈ ಅನಿವಾರ್ಯತೆಗಳ ಮಧ್ಯದಲ್ಲಿ ಆಳುವಂಥ, ಬದುಕುವಂಥ ಒಂದು ಸಂದರ್ಭ ಮೂಡಿ ಬಂದಿದೆ. ಈ ದಾಕ್ಷಿಣ್ಯಗಳಿಗೆ, ಕಾಠಿಣ್ಯವಿಲ್ಲದ ನಿಲುವಿಗೆ ತೆಗೆದುಕೊಳ್ಳುವಂಥ ಸಂದರ್ಭ ಆಡಳಿತ ಮಾಡುವಂಥ ಕೇಂದ್ರಸರ್ಕಾರಕ್ಕೂ ಇದೆ, ಆಡಳಿತ ಮಾಡುವಂಥ ರಾಜ್ಯಸರ್ಕಾರಕ್ಕೂ ಇದೆ.

3.40 ಪಿ.ಎಂ.

ಶಾಸಕರಾದಂಥ ನಮಗೂ ಇದೆ. ರಾಜ್ಯ ಸರ್ಕಾರ ಕಠಿಣವಾದ ನಿಲುವನ್ನು ತೆಗೆದುಕೊಳ್ಳದಿರಲು ನಾವೂ ಕಾರಣರಾಗಿದ್ದೇವೆ. ನೌಕರ ಶಾಹಿರಗಳ ಸೋಗಲಾಡಿತನವಿರಬಹುದು. ಹೊಣೆಗೇಡಿತನವಿರಬಹುದು ಇದರ ಬಗ್ಗೆ ಕಠಿಣ ವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದು ನಮ್ಮೆಲ್ಲರ ಒಕ್ಕೊರಲಿನ ಕೂಗಾಗಿದೆ. ಈ ನೌಕರಶಾಹಿಗಳು ಯಾರ‍್ಯಾರು? ನನ್ನ ಅಳಿಯ ಒಬ್ಬನಿದ್ದಾನೆ. ಅವರ ಅಕ್ಕನ ಮಗ ಒಬ್ಬನಿದ್ದಾನೆ. ಚಿಕ್ಕವ್ವನ ಮಗ ಒಬ್ಬನಿದ್ದಾನೆ. ಇವರುಗಳ ಮೇಲೆ ಕ್ರಮ ತೆಗೆದುಕೊಳ್ಳಲು ಹೋದಾಗ ಸಹಜವಾಗಿ ನಾವೇ ಅನೇ ಕ ಸಂದರ್ಭಗಳಲ್ಲಿ ಅಡ್ಡಿ ಮಾಡತಕ್ಕ ಸಂದರ್ಭ ಬಂದಾಗ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಕಠಿಣವಾದ ನಿರ್ದಾಕ್ಷಿಣ್ಯವಾದ ಆಡಳಿತ ಸಾಧ್ಯವಲ್ಲದಿದ್ದರೂ ಪಕ್ಷ ರಾಜಕಾರಣವನ್ನು ಆಡಳಿತ ಮಾಡುವ ಸಂದರ್ಭದಲ್ಲಿ ಇದು ಕಷ್ಟಸಾಧ್ಯವಾದ ಕೆಲಸವಾಗಿದೆ. ಯಾವ ಅಧಿಕಾರಿಗಳಿಗೆ ದೂರವಾಣಿ ಮಾಡಿದರೂ ಸಭೆಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಬೇರೆಯವರಿಗೆ ಹೇಗೆ ಅನುಭವವಾಗಿದೆಯೋ ನನಗೆ ಗೊತ್ತಿಲ್ಲ, ಬೆಂಗಳೂರಿಗೆ ಹತ್ತಿರವಿರುವ ನಮ್ಮಂಥ ಶಾಸಕರಿಗೆ ಆಗಿರುವ ಅನುಭವ ಇದಾಗಿದೆ. ಒಂದು ವಾರದಲ್ಲಿ ಇವರು ನಾಲ್ಕು ದಿವಸಗಳು ಸಭೆ ಸಮಾರಂಭಗಳಿಗೆ ಹೋಗುತ್ತಾರೆ. ಡಿ.ಸಿ, ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ವಿಭಾಗಾಧಿಕಾರಿಯವರು ಸಭೆಯನ್ನು ಕರೆಯುತ್ತಾರೆ. ಒಂದು ವಾರದಲ್ಲಿ ಐದು ದಿವಸಗಳು ಸಭೆ ಕರೆಯುವುದೇ ಆಗಿಬಿಡುತ್ತದೆ. ಸಭೆಯ ಕಾಟ ತಪ್ಪಿತು ಎನ್ನುವದರೊಳಗೆ ತರಬೇತಿಗಾಗಿ ಹಾಕುತ್ತಾರೆ. ಇವರಿಗೆ ಏತಕ್ಕಾಗಿ ತರಬೇತಿ ಸ್ವಾಮಿ? ಈ ರಾಷ್ಟ್ರದಲ್ಲಿ ಬುದ್ಧಿಗೆ ಕಡಿಮೆಯೇನಿಲ್ಲ. ಕಡಿಮೆ ಇರುವುದಿದ್ದರೆ ನಿಯತ್ತಿಗೆ ಇದೆ. ಬದ್ಧತೆಗೆ, ಪ್ರಾಮಾಣಿಕತೆಗೆ ಕಡಿಮೆ ಇದೆ. ಆದ್ದರಿಂದ ಯಾರಿಗೂ ತರಬೇತಿ ಕೊಡಬೇಕಾಗಿಲ್ಲ. ಆಟಂಬಾಂಬ್, ಐ.ಟಿ.ಗೆ ತರಬೇತಿ ಬೇಕಾಗುತ್ತದೆ. ಆದರೆ ಪಹಣಿ ಎಂಟ್ರಿ ಮಾಡುವುದಕ್ಕೆ ಏಕೆ ಗ್ರಾಮಸೇವಕರಿಗೆ ತರಬೇತಿ ಕೊಡಬೇಕು? ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಏಕೆ ತರಬೇತಿ? ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜನಿಯರ್ ರಸ್ತೆಯ ಕೆಲಸವನ್ನು ಹ್ಯಾಟ್, ಬೂಟ್ ಹಾಕಿಕೊಂಡು ಮಾಡಿಸಲಿ. ಎಂದರೆ ದಿನನಿತ್ಯ ಕಂಕುಳಲ್ಲಿ ಕಡತವನ್ನು ಹಿಡಿದುಕೊಂಡು ಸಭೆಗಳಿಗೆ ಹೋಗುವುದಾದರೆ ಆಡಳಿತ ಏನು ಸುಧಾರಣೆಯಾಗುತ್ತದೆ? ಆದ್ದರಿಂದ ಎಲ್ಲರ ಪರವಾಗಿ ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ಒಂದು ವಾರದಲ್ಲಿ ಐದು ದಿವಸಗಳು ಸಭೆಯಾಗುತ್ತಿರುವುದಕ್ಕೆ ಕಡಿವಾಣವನ್ನು ಹಾಕದಿದ್ದರೆ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತದೆ ಎನ್ನತಕ್ಕ ಪ್ರಾಮಾಣಿಕವಾದ ಅನಿಸಿಕೆಯನ್ನು ನಾನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಕಠಿಣವಾದಂಥ, ನಿರ್ದಾಕ್ಷಿಣ್ಯವಾದಂಥ ಆಡಳಿತವನ್ನು ಮಾಡಲು ಇರುವ ಮತ್ತೊಂದು ತೊಂದರೆ ಏನೆಂದರೆ, ರಾಜಕಾರಣ ಎಲ್ಲಾ ಪಕ್ಷಕ್ಕೆ ಎಲ್ಲಾ ರಾಜ್ಯದಲ್ಲಿ ನಮ್ಮೆಲ್ಲರಿಗೆ ಅಧಿಕಾರವನ್ನು ಹಿಡಿಯಲು ಒಂದು ಸಾಧ್ಯವಾಗಿರುವುದು. ಇದನ್ನು ಬೇರೆಯವರು ಒಪ್ಪುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ, ಆದರೆ ರಾಜಕಾರಣ ಅಧಿಕಾರವನ್ನು ಹಿಡಿಯುವುದಕ್ಕೆ ಒಂದು ಸಾಧನ ಎಂಬುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಸ್ವಾತಂತ್ರ್ಯಪೂರ್ವದಲ್ಲಿ ರಾಜಕಾರಣವೆಂದರೆ, ಸ್ವಾತಂತ್ರ್ಯ ಹೋರಾಟಕ್ಕೆ, ದೇಶಸೇವೆಗೆ ಎಂದು ಇತ್ತು. ಆದರೆ ಇಂದು ನನ್ನ ಅನುಭವದ ಪ್ರಕಾರ ರಾಜಕಾರಣವೆಂದರೆ ಅಧಿಕಾರವನ್ನು ಹಿಡಿಯಲು ಬಳಸುವಂಥ ಒಂದು ಆಯುಧವಾಗಿದೆ, ದಾರಿಯಾಗಿದೆ. ಅಷ್ಟು ಮಾತ್ರವಲ್ಲ. ಅಧಿಕಾರಕ್ಕೆ ಬಂದ ಮೇಲೆ ಅದನ್ನು ಉಳಿಸಿಕೊಳ್ಳಲು ಮಾಡುವಂಥ ಒಂದು ಪ್ರಯತ್ನವೂ ಆಗಿದೆ. ಈ ಅಧಿಕಾರವನ್ನು ಉಳಿಸಿಕೊಳ್ಳಲು ಮಾಡುವಂಥ ಒಂದು ಪ್ರಯತ್ನವೂ

ಆಗಿದೆ. ಈ ಅಧಿಕಾರವನ್ನು ಉಳಿಸಿಕೊಳ್ಳಲು ಮಾಡುವಂಥ ಪ್ರಯತ್ನವೇನಿದೆ ಅದು ಎಲ್ಲಾ ಪಕ್ಷದ, ಎಲ್ಲಾ ಸರ್ಕಾರಗಳಿಗೂ ಕಠಿಣವಾದ, ನಿರ್ಧಾಕ್ಷಿಣ್ಯವಾದ ನಿರ್ಧಾರವನ್ನು ತೆಗೆದುಕೊಳ್ಳಲು ಅಡ್ಡಿ ಬರುತ್ತಿದೆ. ಆದ್ದರಿಂದಲೇ ಡಿ.ವಿ.ಜಿಯವರು ' ಅನ್ನದಾತನಿಗಿಂತ ಚಿನ್ನದಾತರು ತೀಕ್ಷ್ಣ ಎಂದದ್ದು ಚಿನ್ನದಾತರಿಗಿಂತ ಹೆಣ್ಣು ಗಂಡಿನ ಒಲುಮೆ ಬಲೂ ತೀಕ್ಷ್ಣ. ಎಂದದ್ದು ಡಿ.ವಿ.ಜಿ. ಯವರು ಅಲ್ಲಿಗೇ ನಿಲ್ಲದೆ ಮನ್ನಣೆಯದಾಹ ಇವೆಲ್ಲಕ್ಕಿಂತಲೂ ತೀಕ್ಷ್ಣ ಎಂಉದ ಹೇಳಿದ್ದಾರೆ. ಅದು ಎಷ್ಟು ತೀಕ್ಷ್ಣವೆಂದರೆ ನಿನ್ನಾತ್ಮವನ್ನೆ ಸುಡುವುದು ಮಂಕುತಿಮ್ಮ ' ಎಂದು ಹೇಳಿದ್ದಾರೆ. ಕಠಿಣವಾದ ನಿಲುವು, ನಿರ್ಧಾಕ್ಷಿಣ್ಯವಾದ ನಿರ್ಧಾರ, ಇಂಪಾರ್ಶಿಯಲ್ ತೀರ್ಮಾನಗಳಾಗುವುದಿಲ್ಲ. ಎನ್ನತಕ್ಕಂಥ ಮಾತು ಕರ್ನಾಟಕ ಸರ್ಕಾರಕ್ಕೆ, ಬಿಹಾರ್ ಸರ್ಕಾರಕ್ಕೆ, ಕೇಂದ್ರ ಸರ್ಕಾರಕ್ಕೆ ಒಪ್ಪುವಂಥದಲ್ಲ. ಬಹುಶಃ ಪ್ರಪಂಚದಲ್ಲಿ ಆಡಳಿತವನ್ನು ಮಾಡುವುದಕ್ಕೆ ಎಲ್ಲಾ ಪಕ್ಷಗಳಿಗೆ ಆಗುವಂಥಹ ಒಂದು ಅನಿವಾರ್ಯತೆಯಾಗಿದೆ. ಎಲ್ಲಾ ಆಡಳಿತ ಪಕ್ಷಗಳಿಗೆ irrespective of the party, irrespective of the State, irrespective of the Nation, thios is the compulsion. ಎಲ್ಲಾ ಆಡಳಿತ ಪಕ್ಷಗಳಿಗೆ, ಸರ್ಕಾರಗಳಿಗೆ ಅಧಿಕಾರವನ್ನು ಪಡೆದುಕೊಳ್ಳಲು ದಾಹ, ಪಡೆದಂಥ ಅಧಿಕಾರವನ್ನು ಉಳಿಸಿಕೊಳ್ಳು ಮನ್ನಣೆಯ ದಾಹ, ಇದು ತನ್ನ ಆತ್ಮವನ್ನೇ ಸುಡುವಷ್ಟು ತೀಕ್ಷ್ಣವಾಗಿದೆ. ಈ ಕಾರಣಕ್ಕಾಗಿ ನಾವು ಬಹುಶಃ ಉತ್ತಮವಾದ ಆಡಳಿತವನ್ನು ಕೊಡಲು ಸಾಧ್ಯವಾಗುತ್ತಿಲ್ಲವೇನೋ ಎಂದು ನನ್ನ ಅಭಿಪ್ರಾಯ. ಎಲ್ಲಿ ಆಡಳಿತ ವ್ಯವಸ್ಥೆ ಬಿಗಿಯಾಗಿರುವುದಿಲ್ಲವೋ ಅಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಆಗುವುದಿಲ್ಲ. ಆಡಳಿತ ಸರಿಯಾಗಿರಬೇಕಾದರೆ ಆಡಳಿತ ಯಂತ್ರದ ಚುಕ್ಕಾಣಿಯನ್ನು ಹಿಡಿದಿರುವಂಥ ಅಧಿಕಾರಿ ಶಾಹಿಗಳಲ್ಲಿ ಅತ್ಯಂತ ಅಮೂಲಾಗ್ರವಾದ ಬದಲಾವಣೆಯಾಗಬೇಕು ಎಂಬುದು ನನ್ನ ಇಚ್ಚೆ. ರಾಜ್ಯಪಾಲರ ಭಾಷಣದಲ್ಲಿ ಆಡಳಿತದಲ್ಲಿ ಸುಧಾರಣೆ ಮಾಡುವ ದೃಷ್ಟಿಯಿಂದ ಸಿವಿಲ್ ಸೇವೆಗಳಲ್ಲಿ ಸುಧಾರಣೆಯನ್ನು ತಂದು ಆ ಮೂಲಕ ಸರ್ಕಾರದ ಎಲ್ಲಾ ಮಟ್ಟದಲ್ಲಿ ಜನಪರ ಆಡಳಿತವನ್ನು ಕೊಡಲು ನನ್ನ ಸರ್ಕಾರ ಪ್ರಯತ್ನಿಸುತ್ತದೆ ಎಂದು ತಿಳಿಸಲಾಗಿದೆ. ನಾನು ಈ ಅಭಿಪ್ರಾಯವನ್ನು ಗೌರವಿಸುತ್ತೇನೆ. ನಮ್ಮ ಸಿವಿಲ್ ಸೇವೆ ಸುಧಾರಣೆಯಿಂದ ಸರಿಮಾಡಲು ಸಾಧ್ಯವಿಲ್ಲದಿರುವಷ್ಟರಮಟ್ಟಿಗೆ ಕೆಟ್ಟುಹೋಗಿದೆ. ನಾವು ಸುಧಾರಣೆಯನ್ನು ಮಾಡುವ ಹಂತವನ್ನು ತಲುಪಿಯಾಗಿದೆ. ಆದ್ದರಿಂದ ನಾವು ಇದರಲ್ಲಿ ಆಮೂಲಾಗ್ರವಾಗಿ ಬದಲಾವಣೆಯನ್ನು ಮಾಡಬೇಕೆಂಬುದು ನನ್ನ ಸ್ಪಷ್ಟವಾದ ಭಾವನೆ. ಮಾನ್ಯ ಮುಖ್ಯಮಂತ್ರಿಯವರು ಇತ್ತೀಚಿನ ಸಾರ್ವಜನಿಕ ಸಭೆಯೊಂದರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಈ ಹದಿನಾಲ್ಕು ತಿಂಗಳ ನನ್ನ ಅಧಿಕಾರದ ಅವಧಿಯಲ್ಲಿ ನಾನು ಕಂಡ ಕಟುಸತ್ಯವೇನೆಂದರ ನಮ್ಮ ನೌಕರ ಶಾಹಿಯ ಅವಸ್ಥೆ ಬನ್ನ ವೇಗಕ್ಕೆ ಸ್ಪಂದಿಸುವ ಸ್ಥಿತಿಯಲ್ಲಿ ಇಲ್ಲ. ಇದು ಕೇವಲ ಅವರ ಅಭಿಪ್ರಾಯವಲ್ಲ, ನಮ್ಮೆಲ್ಲರ ಅಭಿಪ್ರಾಯವೂ ಆಗಿದೆ. ಈ ಮಾತನ್ನು ಹೇಳುವಾಗ ಉತ್ತಮವಾಗಿ ಕೆಲಸ ಮಾಡುವಂಥ ಅಧಿಕಾರಿಗಳೂ ನನ್ನ ಗಮನದಲ್ಲಿದ್ದಾರೆ. ನಿನ್ನೆ ಭಾನುವಾರ, ನಾನು ಹೇಮಾವತಿ ಕಾಲುವೆಯ ಮೇಲೆ ಬೆಳಿಗ್ಗೆ ಏಳೂವರೆ ಗಂಟೆಗೆ ಹೋದರೆ ಅಲ್ಲಿದ್ದವರೆಲ್ಲ. ನಾನ್‌ವೆಜಿಟೇರಿಯನ್ಸ್ ಇಂಜನಿಯರ್ಸ್, ಕ್ರಿಕೇಟ್ ಮ್ಯಾಚ್ ಆಡುತ್ತಿದ್ದರು. ನನನಗೆ ಅದನ್ನು ನೋಡಿ ಆಶ್ಚರ್ಯವಾಯಿತು ಚಿಕ್ಕ ಚಿಕ್ಕ ವಯಸ್ಸಿನ ಇಂಜನಿಯರ್‌ಗಳು ಸುಡು ಬಿಸಿಲಿನಲ್ಲಿ ಒಂದು ಹರಿದುಹೋಗಿರುವ ಹ್ಯಾಟನ್ನು ಹಾಕಿಕೊಂಡು ಕಾಲುವೆಯ ಕೆಲಸವನ್ನು ಧೂಳಿನಲ್ಲಿ ಮಾಡುಸುತ್ತಿದ್ದರು. ಅಂಥ ಒಳ್ಳೆಯ ತಾಯಿ ಹೆತ್ತಂಥ ಮಕ್ಕಳೂ ಈ ದೇಶದಲ್ಲಿದ್ದಾರೆ. ಈ ದೇಶದ, ನಾಡಿನ ದುಃಖದುಮ್ಮಾನಗಳ ಬಗ್ಗೆ ಅರಿವುಳ್ಳಂಥ ಎಲ್ಲಕ್ಕಿಂತ ಹೆಚ್ಚಾಗಿ ಡಿ.ವಿ.ಜಿ. ಯವರು ಹೇಳಿರುವಂತೆ

ನಿನ್ನಾತ್ಮ ಋಣವದೋ ತಾಯಿಯವರು ಕೋಳಿ ಮೊಟ್ಟೆ ಮಾರಿ ನಮ್ಮನ್ನು ಓದಿಸಿದ್ದಾರೆ. ಕಿವಿಯಲ್ಲಿದ್ದ ಅತ್ತಡಕವನ್ನು ಅಡವಿಟ್ಟು ಎಂ.ಬಿ.ಬಿ.ಎಸ್. ಅನ್ನು ಮಾಡಿಸಿದ್ದಾರೆ, ಅವರ ಋಣವನ್ನು ತೀರಿಸಬೇಕೆಂದು ಹೇಳುವ ಒಳ್ಳೆಯ ತಾಯಿಯ ಮಕ್ಕಳು ಇಂದಿಗೂ ಇದ್ದಾರೆ. ಆದರೆ ಅತೀ ಹೆಚ್ಚಿನ ಜನರು ಆಯೋಗ್ಯರಾಗಿದ್ದಾರೆ. ಅವರಿಗೆ ಬದ್ಧತೆಯಿಲ್ಲ. ಹೆತ್ತವರ ಋಣವನ್ನು ತೀರಿಸಬೇಕೆಂದು ಹೇಳುವ ಡಿ.ವಿ.ಜಿ. ಯವರ ಮಾತಿನ ಬಗ್ಗೆ ಪ್ರಜ್ಞೆ ಇಲ್ಲ. ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸುಪ್ರೀಮ್‌ಕೋರ್ಟ್ ಎರಡು ತೀರ್ಪುಗಳನ್ನು ಕೊಟ್ಟಿದೆ. ಮೂರು ದಿವಸಗಳ ಹಿಂದೆ ಒಂದು ತೀರ್ಪನ್ನು ಕೊಡುತ್ತಾ ಅವಶ್ಯಕತೆ ಇಲ್ಲದ ಅಧಿಕಾರಿಗಳನ್ನು ನಿವೃತ್ತಿ ಮಾಡಲು ಆಡಳಿತಕ್ಕೆ ಅಧಿಕಾರವಿದೆಯೆಂದು ಹೇಳಿದೆ. ಆದ್ದರಿಂದ ನಾನು ಎಲ್ಲರ ಪರವಾಗಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ Please find out if yo can amend Art 285 of the Constitution of India to remove all these deadwoods. Otherwise yo9u will not be able to achieve the targets. I swear this is my experience and experience of all others. ಎಂದಿನವರೆಗೆ ಈ ಅನವಶ್ಯಕವಾದ ನೌಕರರನ್ನು ತೆಗೆದುಹಾಕುವುದಿಲ್ಲವೋ ಅಲ್ಲಿಯವರೆಗೆ ನಾವು ಆಡಳಿತವನ್ನು ಚುರುಕುಗೊಳಿಸಲು , ಅಭಿವೃದ್ಧಿಪಡಿಸಲು ಆಗುವುದಿಲ್ಲ. ಆದ್ದರಿಂದ ಸುಧಾರಣೆಯನ್ನು ಮಾಡುವ ಬದಲು, ಈ ವಿಚಾರದಲ್ಲಿ ಸರ್ಕಾರ ಸಂಪುಟದ ಉಪಸಮಿತಿಯನ್ನು ಮಾಡಿದೆಯೆಂದು ನನಗೆ ತಿಳಿದು ಬಂದಿದೆ, ನನಗೂ ಕಾನೂನಿನ ಅನುಭವ ವಿರುವುದರಿಂದ ನಿಯಮ 285 ನ್ನು ತಿದ್ದುಪಡಿ ಮಾಡಿ ಅನಾವಶ್ಯಕವಾದಂಥ, ಅಯೋಗ್ಯರಾದಂಥ, ಬದ್ಧತೆ ಇಲ್ಲದಿರುವಂಥ ಅಧಿಕಾರಿಗಳನ್ನು ಮನೆಗೆ ಕಳಿಸುವಂಥ ವ್ಯವಸ್ಥೆ ಮಾಡಿ, ಉತ್ತಮರಾದಂಥ ಅಧಿಕಾರಿಗಳಿಗೆ ಆವಾರ್ಡ್ ಮಾಡಿ, ಇನ್ನೂ ಹತ್ತು ಸಾವಿರ ಹೆಚ್ಚು ಸಂಬಳ ಕೊಡಿ, ಎರಡೆರಡು ಕಾರುಗಳನ್ನು ಕೊಡಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಅಯೋಗ್ಯ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟು ಹೊರಕ್ಕೆ ಕಳಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಬೇರೆ ಒಂದು ಕಾರಣ ಕೂಡ ಇದೆ. ಉತ್ತಮವಾಗಿರತಕ್ಕಂಥ ಆಡಳಿತಗಾರರು ಒಳ್ಳೆಯ ಕೆಲಸಗಾರರೂ ಆಗಿರಬೇಕಾಗುತ್ತದೆ. ಅವನು ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ. ಅವನು ಒಂದೇ ಒಂದು ತಪ್ಪನ್ನು ಕೂಡ ಮಾಡಬಾರದು. ಅವನು ಕನಸುಗಾರನಾಗಿದ್ದು ತಾನು ಕಂಡಂಥ ಒಳ್ಳೆಯ ಕನಸುಗಳನ್ನು, ಒಳ್ಳೆಯ ಅನಿಸಿಕೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹೋಗಿ ದುರಂತವನ್ನು ತಲುಪಬಾರದು. ಇಂಥ ಕನಸುಗಾರರಿಗೆ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಲಿಕ್ಕೆ ತಮ್ಮ ಅನಿಸಿಕೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಇತಿಮಿತಿ, ಇಕ್ಕಟ್ಟು ಬಿಕ್ಕಟ್ಟು ಹೌದು, ನಮಗೆಲ್ಲರಿಗೂ ಆಶೆ ಎಂಬುದು ಇದೆ. ಈ ನಾಡನ್ನು ರಾಮರಾಜ್ಯವನ್ನಾಗಿ ಮಾಡಬೇಕು, ಈ ನಾಡು ಭ್ರಷ್ಟಾಚಾರಕ್ಕೆ ಹೊ9ರತಾಗಿರತಕ್ಕಂಥ ನಾಡಾಗಿ ಮಾಡಬೇಕು, ನಮ್ಮ ಅಭಿವೃದ್ಧಿಯ ರಥವು ಅತೀ ವೇಗದಲ್ಲಿ ಓಡಬೇಕು, ಮುಂತಾದ ಹುಚ್ಚು ಆಶೆ- ಆಕಾಂಕ್ಷೆಗಳು, ಚಪಲತೆ, ನಿರೀಕ್ಷೆಗಳು ಎಲ್ಲರಿಗೂ ಇದೆ. ಆದರೆ ಇರುವಂಥ ಇತಿಮಿತಿ ಮತ್ತು ಇಕ್ಕಟ್ಟು ಬಿಕ್ಕಟ್ಟುಗಳು ನಮಗೆ ಈ ಕನಸುಗಳನ್ನು ನನಸು ಮಾಡಿಕೊಳ್ಳುವುದಕ್ಕೆ, ಅನಿಸಿಕೆಗಳನ್ನು ಆಗ ಮಾಡಿಕೊಳ್ಳುವುದಕ್ಕೆ ಅಡ್ಡಿ ಮಾಡುತ್ತಿವೆ.

ಸನ್ಮಾನ್ಯ ಅಧ್ಯಕ್ಷರೇ, ಈ ಹೊಣೆಗಾರಿಕೆಯ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ಮೊನ್ನೆ ಹೇಳಿದಮೇಲೆ ನಾನು ಬಹಳ ಆಲೋಚನೆ ಮಾಡಿದ್ದೇನೆ. ಈ ಅಕೌಂಟೆಬಿಲಿಟಿ, ಈ ಕಮಿಟ್‌ಮೆಂಟ್ ಈ ಹಾನೆಸ್ಟೀ, ಮುಂತಾದವುಗಳನ್ನು ಬರೀ ರಾಜಕಾರಣಿಗಳಲ್ಲಿಯೇ ಹುಡುಕುವಂಥ ಪ್ರವೃತ್ತಿ ಏಕೆ? ಹಾಗಾದರೆ ಬರೀ ರಾಜಕಾರಣಿ ಮಾತ್ರ ಹಾನೆಸ್ಟ್ ಆದರೆ, ಅವನು ಇಂಟಿಗ್ರಿಟಿ ಮೈಂಟೇನ್ ಮಾಡಿದರೆ, ಅವನು ಮಾತ್ರ ಪ್ರಾಮಾಣಿಕನಾದರೆ, ಕ್ರಿಯಾಶೀಲನಾದರೆ, ಈ ಸಮಾಜವು ಸರಿಹೋಗುತ್ತದೆಯೇ? ನನ್ನ ಪ್ರಕಾರ ಸರಿ ಹೋಗುವುದಿಲ್ಲ. ಇವೊತ್ತು ಏನಾದರೂ ಪರಿಸ್ಥಿತಿ ಕೆಟ್ಟಿದ್ದರೆ, ಅಭಿವೃದ್ಧಿ ಆಗದಿದ್ದರೆ, ವ್ಯವಸ್ಥೆಯು ಕೆಟ್ಟಿದ್ದರೆ, ಕರೆಂಟ್ ಬಾರದಿದ್ದರೆ, ರಸ್ತೆ ಕೆಟ್ಟಿದ್ದರೆ, ಈ ಕಷ್ಟಕ್ಕೆ ನಾವೆಲ್ಲರೂ ಕಾಂಟ್ರಿಬ್ಯೂಟ್ ಮಾಡಿದ್ದೇವೆ. ಬಹುಶಃ ನಾವು ರಾಜಕಾರಣಿಗಳು ಸ್ವಲ್ಪ ಜಾಸ್ತಿ ಕೊಟ್ಟಿರಬಹುದು. ಆದರೆ ಇಲ್ಲಿ ಎಲ್ಲರೂ ಭಾಗಿಗಳಾಗಿದ್ದಾರೆ. ಆದ್ದರಿಂದ ನನಗನ್ನಿಸುವುದು ಏನೆಂದರೆ, ಒಬ್ಬ ರಾಜಕಾರಣಿ, ಒಬ್ಬ ಜನಪ್ರತಿನಿಧಿ ಆದವರು ಕೇವಲ ರಸ್ತೆಗಳಿಗೆ ಮಣ್ಣು ಹಾಕಿಸುವುದು, ಕಟ್ಟಡಗಳನ್ನು ಕಟ್ಟಿಸುವುದು ತಮ್ಮ ಅಳಿಯಂದಿರುಗಳಿಗೆ ಲಂಚ ಬರುವ ಸ್ಥಳಗಳಿಗೆ ಟ್ರಾನ್ಸ್‌ಫರ್ ಮಾಡಿಸುವುದು, ಅವರ ಮಕ್ಕಳಿಗೆ ಬೆಂಗಳೂರಿನಲ್ಲಿ ತಣ್ಣಗಿರುವಂಥ ಜಾಗವನ್ನು ಹೊಂದಿಸಿಕೊಡುವುದು, ಇಷ್ಟಕ್ಕೇ ಸೀಮಿತವಾಗಿರುವುದಿಲ್ಲ. ನನಗೆ ಪ್ರಾಮಾಣಿಕವಾಗಿ ಅನ್ನಿಸುವುದೇನೆಂದರೆ, ನಮಗೆ ಅತ್ಯಂತ ಗುರುತರವಾದ ಮತ್ತೊಂದು ಜವಾಬ್ದಾರಿಯೂ ಇದೆ. ಅದು ಯಾವುದೆಂದರೆ, ನಮ್ಮನ್ನು ಆರಿಸಿ ಕಳುಹಿಸಿದಂಥ ಜನಗಳನ್ನು ಉತ್ತಮವಾದಂಥ ಮಾರ್ಗದಲ್ಲಿ ತೆಗೆದುಕೊಂಡು ಹೋಗತಕ್ಕಂಥದ್ದು. ಈ ಬದ್ಧತೆಯನ್ನು ರಾಜಕಾರಣಿಗಳಲ್ಲಿ, ಅಧಿಕಾರಿಗಳಲ್ಲಿ ಹುಡುಕುವಂಥ ನಮ್ಮ ಜನ ಯಾರೂ ಹೊಣೆಗಾರರಲ್ಲವೇನು? ನೌಕರಶಾಹಿಗಳು ಪಾರದರ್ಶಕತೆಯನ್ನು ಕಾಪಾಡಬೇಕು, ನೌಕರಶಾಹಿಗಳು ಹೊಣೆಗಾರಿಕೆ ಅರಿತು ಕೆಲಸ ಮಾಡಬೇಕು. ರಾಜಕಾರಣಿಗಳೂ, ಮಂತ್ರಿಗಳೂ, ಶಾಸಕರುಗಳಲ್ಲಿ ಹೊಣೆಗಾರರು. ಹೀಗೆ ರಾಜಕಾರಣಿಗಳೂ ಮತ್ತು ಅಧಿಕಾರಿಗಳು ಅಷ್ಟೇ ಹೊಣೆಗಾರರಾದರೆ ಸಾಕೆ? ನನ್ನ ಪ್ರಕಾರ ಎಲ್ಲಕ್ಕಿಂತಲೂ ಹೆಚ್ಚಾಗಿ ಮೊದಲು ನಮ್ಮ ಜನರು ಹೊಣೆಗಾರರಾಗಬೇಕು. They should be held accountable for some authority. ಆ ಅಥಾರಿಟಿ ಯಾವುದಪ್ಪಾ ಅಂದರೆ ಅದು ನಿಂತುತ್ತು. ಅದಕ್ಕೆ ನಾವು ಯಾವ ಕಾನೂನನ್ನು ಕೂಡ ತರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಸದನದ ಮುಖಾಂತರ ಎಲ್ಲವನ್ನೂ ನಮ್ಮಿಂದಲೇ ನಿರೀಕ್ಷೆ ಮಾಡುವಂಥ ನಮ್ಮ ಜನಗಳಲ್ಲಿ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಈ ಪಾರದರ್ಶಕತೆ ಬೇಡ. ಅದರ ಅವಶ್ಯಕತೆಯಿಲ್ಲ. ಈ ಒಂದು ಹೊಣೆಗಾರಿಕೆಯು ನಮ್ಮದು ಮತ್ತು ಜನರದ್ದು ಈ ಕುರಿತಾಗಿ ಇಲ್ಲವೇನು? ಅಭಿವೃದ್ಧಿ ಕೆಲಸಗಳು ಕುಂಠಿತವಾಗುವುದಕ್ಕೆ ನಾವೆಷ್ಟು ಕಾರಣರೋ ಅದಕ್ಕಿಂತ ಹೆಚ್ಚು ನಮ್ಮ ಜನರೂ ಕಾರಣರಾಗಿದ್ದಾರೆ. ಇವೊತ್ತು ನಮ್ಮ ರಸ್ತೆಗಳು ನಾಶವಾಗಿರುವುದು ಎಷ್ಟು ಜನಕ್ಕೆ ಅನುಭವವಾಗಿದೆಯೋ? ಗೊತ್ತಿಲ್ಲ. ನಾವು ಮಾಡಿದಂಥ ಕಾಲುವೆಗೆ ಬೇಲಿ ಹಾಕುತ್ತಾನೆ. ಕಾಲುವೆಯಲ್ಲಿ ಹೋಗುವಂಥ ನೀರೆಲ್ಲಾ ರಸ್ತೆಯ ಮೇಲೆ ಹೋಗುತ್ತಿರುತ್ತದೆ. ಆ ಹತ್ತು ಎಕರೆ ಜಮೀನು ಮೂಲೆಯಲ್ಲಿ ಬಿದ್ದಿರುತ್ತದೆ. ಆದರೆ ಇಲ್ಲಿ ಬಂದು ರಸ್ತೆ ಉಳುತ್ತಾನೆ. ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಯಾವ್ಯಾವ ಅನುಭವವಿದೆಯೋ ನನಗೆ ಗೊತ್ತಿಲ್ಲ. ನಾನು ನನ್ನ ಕ್ಷೇತ್ರದ ಮಟ್ಟಿಗೆ ಹೇಳುತ್ತೇನೆ. ಮನೆ ಕಟ್ಟಲು ಜಾಗವಿಲ್ಲದಿದ್ದರೆ ಇಟ್ಟಿಗೆ, ಕಲ್ಲು ತಂದು ರಸ್ತೆಗೆ ಹಾಕುತ್ತಾರೆ. ತಿಪ್ಪೆಗೆ ಹಾಕುವುದಕ್ಕೆ ಜಾಗವಿಲ್ಲವೇ? ತಂದು ರಸ್ತೆಯಲ್ಲಿ ಹಾಕುತ್ತಾರೆ, ದನಗಳನ್ನು ಕಟ್ಟುವುದಕ್ಕೆ ಜಾಗವಿಲ್ಲದಿದ್ದರೆ ಅವುಗಳನ್ನು ತಂದು ಶಾಲೆಗಳ ಮುಂದೆ ಕಟ್ಟುತ್ತಾರೆ. ಹೀಗೆ ಸಾರ್ವಜನಿಕರ ಸ್ವತ್ತುಗಳ

ಬಗ್ಗೆ ತಮ್ಮ ಹೊಣೆಗಾರಿಕೆಯು ಜನಗಳಲ್ಲಿ ಬರುವವರೆಗೆ ಬಹುಶಃ ನಾವು ಮಾಡಿದಂಥ ಅಭಿವೃದ್ಧಿ ಕೆಲಸಗಳನ್ನು ಉತ್ತಮವಾಗಿ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ- ಎನ್ನುವ ಮಾತನ್ನು ಮತ್ತೊಮ್ಮೆ ಒತ್ತಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಭ್ರಷ್ಟತನದ ಬಗ್ಗೆ ಹೇಳುವುದಾದರೆ, ಮಾನ್ಯ ಜೆ.ಹೆಚ್.ಪಟೇಲರು ಬದುಕಿದ್ದಾಗ ಈ ಸದನದಲ್ಲಿ ಒಂದು ಮಾತನ್ನು ಹೇಳಿದ್ದರು. ನಾವೆಲ್ಲರೂ ನೆಹರೂ ಬದುಕಿದ ಹಾಗೆ ಬದುಕಬಹುದು, ಆದರೆ ಗಾಂಧೀಜಿ ಬದುಕಿದ ಹಾಗೆ ಬದುಕುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದರು. ಇವೊತ್ತಿನ ಪರಿಸ್ಥಿತಿಯಲ್ಲಿ ಕೂಡ ಅದನ್ನೇ ಗಮನದಲ್ಲಿಟ್ಟುಕೊಂಡು ಜ್ಞಾಪಿಸಿಕೊಳ್ಳುತ್ತಿದ್ದೇನೆ. ಈ ಭ್ರಷ್ಟತನವೆಂದರೆ ಏನು? ಯಾರು ಭ್ರಷ್ಟರು? ಯಾರು ಭ್ರಷ್ಟರಲ್ಲ? ಇದನ್ನು ನಿರ್ಧರಿಸಲು ಅಳತಗೋಲು ಏನು? ಚುನಾವಣೆ ಸಂದರ್ಭದಲ್ಲಿ ಯಾರು ಹಣ ಕೊಟ್ಟರೂ ತೆಗೆದುಕೊಂಡು ನಾನು ಖರ್ಚು ಮಾಡುತ್ತೇನೆ. ಈ ಭ್ರಷ್ಟತನಕ್ಕೆ ಯಾರು ಕಾರಣರು? ನಮ್ಮ ಮಾನ್ಯ ಬೈರೇಗೌಡರು ಇವೊತ್ತು ಬರಲಿಲ್ಲ. ಮೊನ್ನೆ ಅವರು ಎರಡು ನಿದರ್ಶನಗಳನ್ನು ಕೊಟ್ಟರು. ನಾನು ಅಧಿಕಾರದಲ್ಲಿರುವಾಗ, ಮಂತ್ರಿಯಾಗಿ ಕೆಲಸ ಮಾಡುವಾಗ ಅವ್ಯವಹಾರಗಳ ಬಗ್ಗೆ ತನಿಖೆಗೆ ಆಜ್ಞೆ ಮಾಡಿದ್ದೇನೆ. ಆ ಅವ್ಯವಹಾರ ಪ್ರೂವ್ ಆಗಿದೆ. ಆ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಂಡಿಲ್ಲ. ನೊಮಗೆ ಮಂಡಿಯೇ ಇಲ್ಲ. ಬೈರೇಗೌಡರು ಸೊಂಟವೇ ಇಲ್ಲದ ಸರಕಾರದಲ್ಲಿ ಕೆಲಸ ಮಾಡುತ್ತಿದ್ದುದನ್ನು ಮರೆತು ಬಿಟ್ಟರು. ಈಗ ನಮ್ಮ ಮುಖ್ಯಮಂತ್ರಿಗಳಿಗೆ ಮಂಡಿಯೇ ಇಲ್ಲ, ಏಕೆ ಕ್ರಮ ತೆಗೆದುಕೊಂಡಿಲ್ಲ? ಎಂದು ಕೇಳುತ್ತಿದ್ದಾರೆ. ನಾನು ಕರ್ತಬದ್ಧವಾಗಿ ಮತ್ತು ನ್ಯಾಯ ಬದ್ಧವಾಗಿ ತಮ್ಮ ಮುಖಾಂತರ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆಗಿನ ಸರಕಾರಕ್ಕೆ ಸೊಂಟ ಸರಿಯಾಗಿಲ್ಲ ಎಂದು ಹೇಳುತ್ತಿರುವುದನ್ನು ಕೇಳಲು ನಿಮಗೆ ತುಂಬಾ ಇಂಪಾಗಿ ಇರಬಹುದು, ತಾವುಗಳು ಕೇಳಬಹುದು. ನನದೇನೂ ತಕರಾರು ಇಲ್ಲ. ನಾನು ಅದಕ್ಕೆ ಯಾವ ಅಬ್ಜೆಕ್ಷನ್ ಮಾಡುವುದಕ್ಕೆ ಹೋಗುವುದಿಲ್ಲ. ಅದೂ ಕೂಡ ರೆಕಾರ್ಡ್‌ಗೆ ಬರಲಿ. ಏನಂತೆ? ಯಾರೋ ಒಬ್ಬರು ಕೀರ್ತಿಶೇಷರಾಗಿದ್ದವರ ಸೊಂಟ ಚೆನ್ನಾಗಿರಲಿಲ್ಲವೆಂದು ಹೇಳಿ ಸಂಗೀತವನ್ನು ಈ ಸದನದಲ್ಲಿ ನುಡಿಯುವದಾದರೆ ನಮ್ಮದೇನೂ ತಕರಾರಿಲ್ಲ.

ಅಧ್ಯಕ್ಷರು : ನಾನು ಸರಿಯಾಗಿ ಅವರ ಮಾತುಗಳನ್ನು ಕೇಳಿಸಿಕೊಂಡಿಲ್ಲ.

ಶ್ರೀ ವೈ.ಕೆ. ರಾಮಯ್ಯ : ನಾನು ಯಾರ ಬಗ್ಗೆಯೂ ಹೇಳಿಲ್ಲ. ಮಂಡಿಯೂ, ಸೊಂಟವೂ ದೇಹದ ಎರಡು ಅಂಗಗಳು. ಮಂಡಿ ಇಲ್ಲದ ಮುಖ್ಯಮಂತ್ರಿ ಎಂದು ಅವರು ಹೇಳಿದ್ದು ತರ್ಕಬದ್ಧವಾಗಿದ್ದರೆ, ಅದು ಪ್ರಜಾಪ್ರಭುತ್ವದಲ್ಲಿ ಇದ್ದರೆ, ಅದೂ ಇರಲಿ. ಸೊಂಟವೂ ಕೂಡ ದೇಹದ ಒಂದು ಅಂಗ. ಸೊಂಟ ಇಲ್ಲದವರು ಅಂದರೆ ನಡ ಇಲ್ಲದವರು ಎಂಬುದು ನನ್ನ ಅರ್ಥ.

ಅಧ್ಯಕ್ಷರು : ಮಾನ್ಯ ರಾಮಯ್ಯನವರು ಹಾಗೂ ಮಾನ್ಯ ಬೈರೇಗೌಡರು ಹಿರಿಯ ಸದಸ್ಯರುಗಳು. ತಾವುಗಳು ಒಳ್ಳೆಯ ಪದಗಳನ್ನು ಉಪಯೋಗಿಸಬೇಕು. ಪಾರ್ಲಿಮೆಂಟರಿ ಪದಗಳ ಮಿತಿಯಲ್ಲಿ ಇರಬಹುದಾದ ಒಳ್ಳೆಯ ಪದಗಳನ್ನು ಉಪಯೋಗಿಸಿ.

ಶ್ರೀ ವೈ.ಕೆ.ರಾಮಯ್ಯ: ನೀವು ಹೇಗೆ ರಿಸ್ಟ್ರಿಕ್ಟ್ ಮಾಡುತ್ತಿದ್ದೀರೋ ನನಗೆ ಅರ್ಥವಾಗುತ್ತಾ ಇಲ್ಲ. ಅವರು ಮಂಡಿ ಇಲ್ಲದೇ ಇರುವವರು ಎಂದು ಹೇಳಿದರೆ ನಾನು ಸೊಂಟ ಇಲ್ಲದೇ ಇರುವವರು ಎಂದು ಹೇಳಿದ್ದೆ ಅಷ್ಟೇ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ ಸನ್ಮಾನ್ಯ ಬೈರೇಗೌಡರು.

ಶ್ರೀ ಪಿ. ಜಿ. ಆರ್. ಸಿಂಧ್ಯ: ಅವರು ಹೇಳುವುದಕ್ಕೆ ನಮ್ಮ ತಕರಾರು ಏನೂ ಇಲ್ಲ. ಆದರೆ ಅವರು ಹೇಳಿದ್ದಕ್ಕೆ ನನ್ನ ಪ್ರತಿಭಟನೆಯನ್ನು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ವೈ.ಕೆ. ರಾಮಯ್ಯ ಪ್ರಾಮಾಣಿಕವಾಗಿ ಹೇಳುತ್ತೇನೆ ನಾನು ಯಾರನ್ನೂ ಕುರಿತು ಮಾತನಾಡಿಲ್ಲ.

ಅಧ್ಯಕ್ಷರು: ಅವರು ಹೇಳಿದರೆ ನೀವು ಹೇಳಬೇಕು ಅಂತ ಕಾನೂನು ಇಲ್ಲ.

ಶ್ರೀ ವೈ.ಕೆ. ರಾಮಯ್ಯ: ಸರಿ ಆಯಿತು. ಅವತ್ತಿನ ಸರ್ಕಾರದಲ್ಲಿ ಕೃಷಿ ಸಚಿವರಾಗಿ ಬೈರೇಗೌಡರು ಇದ್ದಾಗ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಒಂದರಲ್ಲೇ 98 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಈಗ ಇಲ್ಲಿ ಅವರಿದ್ದರೆ ಚೆನ್ನಾಗಿತ್ತು. ಇಲ್ಲದೇ ಇರುವುದರಿಂದ ನನ್ನ ಬಾಯಿ ತಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಏಕೆ ಕ್ರಮ ಜರುಗಿಸಲಿಲ್ಲ? ಏಕೆ ಅವರನು ಸಸ್ಪೆಂಡ್ ಮಾಡಲಿಲ್ಲವೆಂದು ಬೈರೇಗೌಡರು ಕೇಳಿದರು; ನಾನು ಅವರನ್ನು ಕೇಳುತ್ತೇನೆ. ಇವರ ಖಾತೆ ಕೆಳಗಿನ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ 98 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಾಗ ಇವರೇನು ಮಾಡುತ್ತಿದ್ದರು? ಎರಡನೆಯದಾಗಿ, When he, ordered for COD Enquiry, even though he found a prima- facie case, why he did not suspend the officer? ಸಿಓಡಿ ತನಿಖೆ ಮಾಡುವುದು ಸಾಮಾನ್ಯ ಸಂದರ್ಭದಲ್ಲಲ್ಲ? ಮೇಲ್ನೋಟಕ್ಕೆ ಅಲ್ಲಿ ಕೇಸಿದೆ, ಅವ್ಯವಹಾರ ಆಗಿದೆ ಎಂದು ಇವರ ಗಮನಕ್ಕೆ ಬಂದು ಸಿಓಡಿ ತನಿಖೆಗೆ ಆದೇಶ ಮಾಡಿದಾಗ ಅವರನ್ನು ಕೆಲಸದಿಂದ ತೆಗೆಯಲಿಕ್ಕೆ ಬೈರೇಗೌಡರಿಗಿದ್ದ ಅಡ್ಡಿ ಯಾವುದು ಸ್ವಾಮಿ? ಅದನ್ನು ಮರೆತು ಇವತ್ತು, ನೀವು ಕ್ರಮ ತೆಗೆದುಕೊಳ್ಳುತ್ತಿಲ್ಲ, ನೀವು ಮಂಡಿ ಇಲ್ಲದ ಮುಖ್ಯಮಂತ್ರಿಗಳೂ ಅಂತ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಅಪವಾದ ಹೊರಿಸುವುದರಲ್ಲಿ ಎಷ್ಟು ಸಹಜತೆ ಇದೆ? ಇದಕ್ಕೇ ನಾನು ಹೇಳಿದ್ದು; ಯಾರು ಎಷ್ಟೆಷ್ಟು ಭ್ರಷ್ಟರು, ಎಷ್ಟು ಭ್ರಷ್ಟರಲ್ಲ ಎಂಬ ಬಗ್ಗೆ ನನಗೇ ಗೊಂದಲವಿದೆ. ಭ್ರಷ್ಟತನ ನಡೆದದ್ದು ಯಾವುದೇ ದೇಶದಲ್ಲಿಲ್ಲ, ಯಾವುದೋ ಖಾತೆಯಲ್ಲಲ್ಲ, ಅವರ ಖಾತೆಯಲ್ಲೇ ಅವರ ಮೂಗಿನ ಕೆಳಗೇನೆ, ಒಂದಲ್ಲ ಎರಡಲ್ಲ, 98 ಕೋಟಿ ರೂಪಾಯಿಗಳ ನಷ್ಟವಾದಾಗ ಕಡತ ತರಿಸಿ ಇದರಲ್ಲಿ ಮೇಲ್ನೋಟಕ್ಕೆ ಅವ್ಯವಹಾರ ಆಗಿದೆಯೆಂದು ತನಿಖೆಗೆ ಆಜ್ಞೆ ಮಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ: ಈ ಸದನದ ಕಾರ್ಯಕಲಾಪಗಳ ನಿಯಮಾವಳಿಯನ್ನು ತಾವು ಅನುಷ್ಠಾನಗೊಳಿಸಬೇಕೂಂತಿದ್ದರೆ ಒಂದು ಕ್ರಿಯಾಲೋಪವನ್ನು ನಾನು ಎತ್ತುತ್ತೇನೆ.

ಅಧ್ಯಕ್ಷರು: ಎತ್ತಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ: ಬೈರೇಗೌಡರು ಈ ಸದನದ ಗೌರವಾನ್ವಿತ ಸದಸ್ಯರು. ಅವರ ಮೇಲೆ 98 ಕೋಟಿ ಅವ್ಯವಹಾರಗಳ ಆದಾಗ ಅವರು ಕಣ್ಮುಚ್ಚಿ ಕುಳಿತು ಶಾಮೀಲಾಗಿದ್ದೀರಿ ಎಂದು ಇವರು ಹೇಳುತ್ತಿದ್ದಾರೆ. ಅಧಿಕಾರಿಗಳ ವಿರುದ್ಧ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆನ್ನುತ್ತಿದ್ದಾರೆ. ಆದ್ದರಿಂದ ನಾನು

ಹೇಳುವುದು ಏನೆಂದರೆ, ಭೈರೇಗೌಡರಿಗೆ ತಮ್ಮ ಮೂಲಕ ನೋಟೀಸ್ ಕೊಡಿಸಿ. ನಾವು ಸಮರ್ಥರಿದ್ದೇವೆ. ನಮ್ಮ ಸರ್ಕಾರದ ಕೆಲಸಕಾರ್ಯಗಳ ಬಗ್ಗೆ ಆಕಸ್ಮಾತ್ ಅವ್ಯವಹಾರ ನಡೆದಿದ್ದರೆ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಎದುರು ನೇಣುಹಾಕಿಕೊಂಡು ಸಾಯಲೂ ನಾವು ತಯಾರಿದ್ದೇವೆ. ನಾವು ಹೆದರಿ ಓಡಿಹೋಗುವವರಲ್ಲ. ಮಸ್ತಕದಲ್ಲಿದೆ; ಯಾವುದಾದರೂ ಆಪಾದನೆಯನ್ನು ಹಾಲಿ ಸದಸ್ಯರ ಮೇಲೆ ಮಾಡಬೇಕಾದರೆ ತಮಗೆ ಬರೆದು ಕಳಿಸಬೇಕಾಗುತ್ತದೆ. ಆದರೆ ಅದರಡಿಯಲ್ಲಿ ನಾನು ರಕ್ಷಣೆ ತೆಗೆದುಕೊಳ್ಳೂ ತಯಾರಿಲ್ಲ.

ಅಧ್ಯಕ್ಷರು : ಹೌದು, ನಮ್ಮ ನಿಯಮಾವಳಿ ಪ್ರಕಾರ ನೀವು ಬರೆದು ಕಳಿಸಬೇಕು.

ಶ್ರೀ ವೈ.ಕೆ. ರಾಮಯ್ಯ : ನಾನು ಹೇಳಿದ್ದು ಅಲ್ಲಿ ರೆಕಾರ್ಡಾಗಿದೆ. ನಾನು ಹೇಳಿದ್ದರಲ್ಲಿ ಕಿಂಚಿತ್ ತಪ್ಪಿದ್ದರೂ ಕೂಡ ಇಲ್ಲಿಗೇ ನನ್ನ ಮಾತು ನಿಲ್ಲಿಸಿ ಕೆಳಗೆ ಕುಳಿತುಕೊಳ್ಳುತ್ತೇನೆ. ನಾನು ಹೇಳಿದ್ದು ಇಷ್ಟೇ; ಭೈರೇಗೌಡರು ಸಚಿವರಾಗಿದ್ದ ಖಾತೆಯಲ್ಲಿ ಅವ್ಯವಹಾರವಾಗಿದೆ. ಆದರಲ್ಲಿ ಭೈರೇಗೌಡರು ಶಾಮೀಲಾಗಿದ್ದಾರೆ ಅಂತೇನೂ ಹೇಳುವುದಿಲ್ಲ. ಹಾಗೇ ಹೇಳಲು ನನ್ನಲ್ಲಿ ನೈತಿಕವಾದ ಧೈರ್ಯವೂ ಇಲ್ಲ. ನನಗೆ ಭೈರೇಗೌಡರು ಗೊತ್ತಿದೆ, ಸಿಂಧ್ಯಾರವರು ಗೊತ್ತಿದೆ. ಸುರೇಶ್‌ಕುಮಾರ್ ಗೊತ್ತಿದೆ. ಹೊಸದಾಗಿ ಬಂದವರ ಜಾತಕವನ್ನೂ ನಾನು ತಿಳಿದುಕೊಂಡುಬಿಟ್ಟಿದ್ದೇನೆ. ಆದರೆ ಭೈರೇಗೌಡರು ಆ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ. ಎಂದು ಆಪಾದನೆ ಮಾಡುವಷ್ಟು ಅಪಕ್ವವಾದ ಬುದ್ಧಿ ನನ್ನದಲ್ಲ. ನಾನು ಹೇಳಿದ್ದು ಅವರ ವಿರುದ್ಧವಲ್ಲ. ಅವರ ಮಂತ್ರಿಗಿರಿ ಬಗ್ಗೆ.

He has failed to take action. He has not joined in it. I have made it clear. I have not made any allegation against Byregowda at all. My question is when he found prima-facie case when he ordered for COD enquiry. whey he failed to take action? I am not makaing any allegation against him.

ತಾವು ಯಾಕೆ ನನಗೆ ಸರಿಮಾಡಿಕೊಳ್ಳಿ ಅಂತ ನನಗೆ ಹೇಳುತ್ತಿದ್ದೀರಿ, ನಾನು ಏನನ್ನು ಸರಿ ಮಾಡಿಕೊಳ್ಳಬೇಕು?

ಅಧ್ಯಕ್ಷರು : ಈಗ ಸರಿಹೋಯಿತು?

ಶ್ರೀ ವೈ.ಕೆ. ರಾಮಯ್ಯ : ಸ್ವಾಮಿ, ನಾನೂ 20 ವರ್ಷಗಳ ಕಾಲ ಈ ಪುಸ್ತಕ ಓದಿದ್ದೇನೆ. ಸದನದ ಒಬ್ಬ ಸದಸ್ಯರ ಬಗ್ಗೆ, ಭೈರೇಗೌಡರು ಲಂಚ ಹೊಡೆದಿದ್ದಾರೆ ಅಂತ ಆಪಾದನೆ ಮಾಡಿದರೆ, ಅವರು ಸಾರ್ವಜನಿಕ ಸ್ವತ್ತು ತಿಂದಿದ್ದಾರೆಂದು ಆಪಾದನೆ ಮಾಡಿದರೆ, ವೈಯಕ್ತಿಕವಾದ ಪ್ರತಿಷ್ಠೆಯನ್ನು ಟರ್ನ್ ಮಾಡುವ ಪ್ರಯತ್ನ ಮಾಡಿದರೆ ಆವಾಗ ಮಾತ್ರ ನೋಟೀಸ್ ಕೊಡಬೇಕು. ಯಾಕೆ ಇದನ್ನು ಹೇಳುತ್ತಿದ್ದೇನೆಂದರೆ; ಇವತ್ತಿನ ಪರಿಸ್ಥಿತಿಯಲ್ಲಿ ಆಡಳಿತ ಮಾಡುವ ಎಲ್ಲರಿಗೂ ಕೆಲವು ಅನಿವಾರ್ಯತೆಗಳಿವೆ ಎನ್ನುವುದಕ್ಕಾಗಿ. ನಾನು ಯಾವುದನ್ನೂ ದಾಖಲೆ ಇಲ್ಲದೆ ಹೇಳುವುದಿಲ್ಲ. ಜಲಾನಯನ ಕಾರ್ಯಕ್ರಮಗಳಿಗಾಗಿ ಜರ್ಮನಿಯಿಂದ 60 ಕೋಟಿ ರೂಪಾಯಿಗಳ ಯೋಜನೆ ಬಂತು. ರೆಕಾರ್ಡ್ಸ್ ತರಿಸಿ ನೋಡಿ ಯಾಕೆ ಸ್ವಾಮಿ ಇಂಪ್ಲಿಮೆಂಟ್ ಮಾಡಲಿಲ್ಲ? ಅದನ್ನು ಪಿ ಇಲಾಖೆಯಿಂದ ಅನುಷ್ಠಾನಗೊಳಿಸಬೇಕಾ, ಗ್ರಾಮೀಣಾಭಿವೃದ್ಧಿ ಖಾತೆಯಿಂದ ಇಂಪ್ಲಿಮೆಂಟ್ ಮಾಡಬೇಕಾ ಎಂದು

ಟಗ್ ಆಫ್ ವಾರ್ ಆಗಿ, ಅಷ್ಟು ಹೊತ್ತಿಗಾಗಲೇ ಅವರಲ್ಲಿದ್ದ ಆಂತರಿಕ ಜಗಳದಿಂದಾಗಿ, ಆ ಯೋಜನೆಯನ್ನು ಕೈ ಬಿಟ್ಟರು, ಬೇಕಾದರೆ ರಿಪೋರ್ಟ್ ತೆಗೆಸಿ ನೋಡಿ. ಅವರು ಒಂದೇ ಕಂಡೀಷನ್ ಹಾಕಿದ್ದರು. Form a separate directorate for implementation of this programme. ಎಂದು ಅದನ್ನು ಗಮನದಲ್ಲಿಟ್ಟುಕೊಂಡೇ ಹೊಸ ಸರ್ಕಾರ ಜಲಾಭಿವೃದ್ಧಿ ಇಲಾಖೆ ಎಂದು ಹೊಸ ಇಲಾಖೆ ಮಾಡಿ ಆ ಹಣವನ್ನು ಉಪಯೋಗಿಸಿಕೊಳ್ಳುವ ಪ್ರಯತ್ನ ಮಾಡಿತು. ಆದ್ದರಿಂದ ಅವರು ಆಡಳಿತ ಮಾಡುವಾಗ ಏನು ವಿಫಲತೆಯಾಯಿತು ಅಂತ ಹೇಳುವದಷ್ಟನ್ನು ಬಿಟ್ಟರೆ ಬೈರೇಗೌಡರ ಬಗ್ಗೆ ಹೇಳಲು ನನಗೇನೂ ಇಲ್ಲ. ಅದಕ್ಕೇ ನಾನು ಹೇಳುತ್ತಿದ್ದೆ, ಸರ್ಕಾರಿ ನೌಕರರಷ್ಟೇ, ರಾಜಕಾರಣಗಳಷ್ಟೇ ಈ ಜನರೂ ಕೂಡ ಸಾರ್ವಜನಿಕ ಸ್ವತ್ತುಗಳು, ಅಂದರೆ ರಸ್ತೆ, ನೀರುಗಳ ಬಗ್ಗೆ ಕರ್ತವ್ಯಪ್ರಜ್ಞೆಯನ್ನು ಮೂಡಿಸಬೇಕಾಗಿದೆ. ಹೊಣೆಗಾರಿಕೆಯನ್ನು ಅವರ ಮೇಲೂ ತರಬೇಕಾಗಿದೆಯೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಕಾನೂನು ಸುವ್ಯವಸ್ಥೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಹಂತದಲ್ಲಿ ನಾನು ಅತ್ಯಂತ ನೋವಿನಿಂದ ರಾಜ್ಯದ ಅಭಿವೃದ್ಧಿಗೆ ಮತ್ತು ಆಡಳಿತಕ್ಕೆ ಸಂಬಂಧ ಇಲ್ಲದಂತಹ ಮತ್ತೊಂದು ವಿಚಾರವನ್ನು ಹೇಳಲು ಇಷ್ಟಪಡುತ್ತೇನೆ. Of late there has been serioud challenges to the law-making faculty i.e., to the leislators. ಶಾಸಕರ ಗೌರವಕ್ಕೆ, ಅವರ ಅಂತಸ್ತಿಗೆ, ಅವರ ಸ್ಥಾನಮಾನಕ್ಕೆ ಇತ್ತೀಚಿನ ದಿನಗಳಲ್ಲಿ ಅಪಮಾನಕರವಾದ, ಅವರಿಗೆ ಅಡ್ಡಿ ಮಾಡುವಂತಹ ಸಂದರ್ಭಗಳು ಅತಿಯಾಗಿ ಬರುತ್ತಿವೆ. ವಿಶ್ವವಿದ್ಯಾನಿಲಯಗಳ ವಿಧೇಯಕದ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಅದನ್ನು ಜಂಟಿ ಸಲಹಾ ಸಮಿತಿಗೆ ರೆಫರ್ ಮಾಡಿದ್ದಾರೆ. ಆ ವಿಧೇಯಕವನ್ನು ತಿದ್ದುಪಡಿ ಮಾಡಬೇಕಾ, ಬಿಡಬೇಕಾ ಎಂಬುದು ಸದನಕ್ಕೆ ಬಿಟ್ಟಿದ್ದು. ನನಗೆ ಸಂಬಂಧವಿಲ್ಲ. ಆದರೆ ಜಂಟಿ ಸಲಹಾ ಸಮಿತಿಯಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಯೂನಿವರ್ಸಿಟಿ ಗ್ರ್ಯಾಂಟ್ ಕಮೀಷನ್‌ರವರು ಮೈಸೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇಲ್ಲಿ ನಮ್ಮ ಶಿಕ್ಷಣ ಸಚಿವರೂ ಇಲ್ಲ. ಹೇಳಿಕೆ ಏನೆಂದರೆ if the State Government amends the Act. takes up the amendment. we would stop the UGC grant ಇದನ್ನು ಎಲ್ಲಾದರೂ ಕೇಳಿದ್ದೀರಾ? ಇದು ಸಾಧ್ಯವೇ? what a wonder ! can you keep quiet. ಮಾನ್ಯ ಅಧ್ಯಕ್ಷರೇ, ನಾವು ತೆರಿಗೆ ಹಾಕಬೇಕೇ ಬೇಡವೇ ಎಂದು ಚರ್ಚೆ ಬಂದಾಗ ತೆರಿಗೆ ಹಾಕಬೇಕು ಎಂಬುದಕ್ಕೆ ಕೈ ಎತ್ತುತ್ತೇವೆ. ನಾಳೆ ಜನಸಾಮಾನ್ಯರು ತೆರಿಗೆ ಹಾಕಬೇಕು ಅಂತ ಕಾನೂನು ಮಾಡಿದರೆ, ನಿನಿಗೆ ಕೈ ಮುರೀತೀವಿ, ನಿನ್ನ ಕಾಲು ಮುರೀತೀವಿ ಎಂಬಂತಹ ಪರಿಸ್ಥಿತಿ ಸೃಷ್ಟಯಾದರೆ ಈ ಸದನದಲ್ಲಿ ನಾನು ಶಾಸಕನಾಗಿ ಹೇಗೆ ಕೆಲಸ ಮಾಡಬೇಕೆಂಬುದನ್ನು , ಪಕ್ಷಾತೀತವಾಗಿ ನನ್ನ ಶಾಸಕ ಮಿತ್ರರು ಚಿಂತನೆ ಮಾಡಬೇಕು. ನಾವು ತಿದ್ದುಪಡಿ ಮಾಡಿದರೆ ಅವರಿಗೇನು? ನಮಗೇನಾದರೂ ಅವರು ದಾನ ಕೊಡುತ್ತಿದ್ದಾರೆ? ಆಯುಕ್ತರೇನಾದರೂ, ಸ್ವಲ್ಪ ಪದ ಬಳಸಬೇಕು ಅಂದರೆ ನೀವು ನಯವಾಗಿ ಮಾತನಾಡಿ ಎನ್ನುತ್ತೀರಿ, ನಯವಾಗಿ ಬದುಕಬೇಕು ಅಂತ ನನಗೂ ಆಸೆ, ಆದರೆ ವಾಸ್ತವಿಕತೆ ನೋಡಿದರೆ ಹಾಗೆ ಮಾತನಾಡುವುದು ನನ್ನ ದುರ್ಗುಣ. ಈ ಕಮೀಷನರ್ ನಮಗೆ ಎಲ್ಲಿಂದ ದುಡ್ಡು ತಂದು ಕೊಡುತ್ತಾರೆ? ಇವರಪ್ಪನ ಆಸ್ತಿ ಮಾರಿ ತಂದುಕೊಡುತ್ತಾರಾ? ಅಥವಾ ಇವರ ತಾತ ಇಟ್ಟ ಗಂಟಿನಿಂದ ತಂದುಕೊಡುತ್ತಾರಾ? ನಮಗೇನಾದರೂ ಭಿಕ್ಷೆ ಕೊಡುತ್ತಿದ್ದಾರ? What is this?

How can he utter such a statement? ಅದಕ್ಕೆ ನಾನು ಹೇಳುತ್ತಿರುವುದು; ತಮ್ಮಲ್ಲಿ ನಾನು ಕೈಮುಗಿದು ಕೇಳಿ ಕೊಳ್ಳುತ್ತಿದ್ದೇನೆ. ಈ ವಿಷಯದ ಬಗ್ಗೆ ತಾವು ಮತ್ತು ಸರ್ಕಾರ ಇದನ್ನು ಪರಿಶೀಲನೆ ಮಾಡಿ. ಇನ್ನು ಮುಂದೆ ಶಾಸಕರ ಕಾರ್ಯನಿರ್ವಹಣೆ ಸಂದರ್ಭದಲ್ಲಿ ಬರುವಂತಹ ಇಂತಹ ಅಡ್ಡಿಆತಂಕಗಳನ್ನು ನಿವಾರಣೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಇದರ ಜೊತೆಗೆ ಸನ್ಮಾನ್ಯ ಮುದ್ದಹನುಮೇಗೌಡರಿಗೂ ನನಗೂ ಸಂಬಂಧಪಟ್ಟಂತೆ ಇತ್ತೀಚಿನ ದಿನಗಳಲ್ಲಿ ಶಾಸಕಾಂಗದಲ್ಲಿ ಪಟ್ಟಂತಹ ಅಪಮಾನದ ವಿಷಯವನ್ನು ಈ ನಾಡಿನ ಜನರಿಗೆ ತಿಳಿಸಲು ಇಷ್ಟಪಡುತ್ತೇನೆ; ಕರ್ನಾಟಕದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ರಾಜ್ಯದ ಯಾವುದೇ ಶಾಸಕರನ್ನು ಸರ್ಕಾರದ ಕಾರ್ಯಕ್ರಮಗಳಿಗೆ ಕರೆಯಕೂಡದೆಂದು ತೀರ್ಮಾನ ತೆಗೆದುಕೊಂಡಿದ್ದಾರಂತೆ.

4. 10 ಪಿ.ಎಂ.

ಸ್ವಾಮೀ, ಇವರಿಗೆ ಸಂಬಳ ಕೊಡುವವರು ನಾವು. ಇವರ ಕಾರಿಗೆ ಪೆಟ್ರೋಲ್ ಹಾಕಿಸುವವರು ನಾವು ಇವರ ಮನೆ ಬಾಡಿಗೆ ಕೊಡುವವರು ನಾವು. ಇವರು ಅಪಾಯಿಂಟ್‌ಮೆಂಟ್ ಆಗುವಾಗ ಅಡ್ವೋಕೇಟ್ ಜನರಲ್ ಆಗುವಾಗ, ಅಡ್ವೊಕೇಟ್‌ಗಳಾಗುವಾಗ ಎಲ್ಲರಿಗೂ ನಾವು ಬೇಕು.

ಅಧ್ಯಕ್ಷರು : ಮಾನ್ಯ ರಾಮಯ್ಯನವರೇ, ದಯವಿಟ್ಟು ಹೈಕೋರ್ಟ್ ಚೀಫ್ ಜಸ್ಟೀಸ್ ಬಗ್ಗೆ ಮಾತನಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ: ನಾನು ಆಪಾದನೆಯನ್ನು ಮಾಡುತ್ತಿಲ್ಲ.

ಅಧ್ಯಕ್ಷರು: ದಯವಿಟ್ಟು ಅವರ ಬಗ್ಗೆ ಮಾತನಾಡಬೇಡಿ. ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. ಅದೇನಾದರೂ ಇದ್ದರೆ ತಾವು ನಮ್ಮ ಹತ್ತಿರ ಬಂದು ಮಾತನಾಡಿ. ನಮ್ಮ ಕಛೇರಿಗೆ ಬನ್ನಿ. ಹೈಕೋರ್ಟ್ ಚೀಫ್ ಜಸ್ಟೀಸ್ ಬಗ್ಗೆ ದಯವಿಟ್ಟು ಇಲ್ಲಿ ಏನೂ ಮಾತನಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ: ನಾನು ಅವರ ಬಗ್ಗೆ ಹೇಳುತ್ತಿಲ್ಲ. ನಮಗೆ ಆಗಿರುವಂಥ ಅವಮಾನವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ಅದರ ಮೇಲೆ ಮಾತನಾಡೋಣ ಬನ್ನಿ. ಅದನ್ನು ಇತ್ಯರ್ಥ ಮಾಡೋಣ. ಅದಕ್ಕೆ ಬೇರೆ ದಾರಿಗಳಿದೆ. ಅದನ್ನು ಮಾಡೋಣ. ಇಲ್ಲಿ ಹೌಸ್‌ನಲ್ಲಿ ಬೇಡಿ.

ಶ್ರೀ ವೈ.ಕೆ. ರಾಮಯ್ಯ: ಏಕೆ ಸ್ವಾಮಿ? ಕಾನೂನು ಯಾವುದಾದರೂ ಪ್ರೊಹಿಬಿಟ್ ಮಾಡುತ್ತಾ? ಇವರು ಗೌರ್ನಮೆಂಟ್ ಪ್ಲೀಡರ್ ಆಗುವಾಗ ರಾಜಕಾರಣಿಗಳು ಬೇಕು. ಅಡ್ವೊಕೇಟ್‌ಗಳಾಗುವಾಗ ರಾಜಕಾರಣಿಗಳು ಬೇಕು. ಇವರು ಜಡ್ಜಸ್‌ಗಳಾಗುವಾಗ ರಾಜಕಾರಣಿಗಳು ಬೇಕು. ಹೋಗಿ ಅಲ್ಲಿ ಕುಳಿತುಕೊಂಡ ಮೇಲೆ ರಾಜಕಾರಣಿಗಳನ್ನು ಪಕ್ಕದಲ್ಲಿ ಕುಳಿತುಕೊಳ್ಳಬೇಡ ಎಂದು ಹೇಳುವುದಾದರೆ ಈ ಅಪಮಾನವನ್ನು ಸಹಿಸಿಕೊಂಡು ನಾವಿರಬೇಕು ಎನ್ನುತ್ತೀರಾ? ನೀವು. ನಿಮಗೇ ಆಗಿದ್ದರೆ ಏನು ಮಾಡುವಿರಿ ನೀವು; ಹೇಳಿ. ತಮಗಾಗಿದ್ದರೆ ಏನು ಮಾಡುವಿರಿ?

ಅಧ್ಯಕ್ಷರು: ದಯವಿಟ್ಟು ಈಗ ಬೇಡಿ, ನಾನು ಹೇಳುವುದನ್ನು ಕೇಳಿ.

ಶ್ರೀ ವೈ.ಕೆ. ರಾಮಯ್ಯ: ಏನು ಮಾಡಬೇಕು ಹೇಳಿ? ನಮಗೆ ಬೇರೆ ದಾರಿ ಏನು ಇದೆ?

(ಗೊಂದಲ)

ಅಧ್ಯಕ್ಷರು : ಸದನದಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರಿಗೆ ಆಗದಿದ್ದರೆ ಅಂಥವರ ಬಗ್ಗೆ ನೀವು ಮಾತನಾಡಬಾರದು. Chief Justice cannot defend here on the floor of the house. ನೋಡಿ, ನಾನು ಹೇಳಿದ್ದೇನೆ. ನೀವು ಪುನಃ ಅದನ್ನು ಪುನರುಚ್ಚಿಸಿದೆ ನಾನು ಎಕ್ಸ್‌ಪಂಜ್ ಮಾಡಬೇಕಾಗುತ್ತದೆ.

ಶ್ರೀ ಸಿ.ಎಂ. ಲಿಂಗಪ್ಪ: ಮಾನ್ಯ ಅಧ್ಯಕ್ಷರೇ, ಒಬ್ಬ ಸದಸ್ಯರಿಗೆ ಅವಮಾನವಾದರೂ ಒಂದೇ; ಇಡೀ ಸದನಕ್ಕೆ ಆಗತಕ್ಕ ಅವಮಾನವೂ ಒಂದೇ. ಅದನ್ನು ರಕ್ಷಿಸಬೇಕಾಗಿರುವವವರು ತಾವು ಶಾಸಕರನ್ನು ಸಮಾರಂಭಗಳಲ್ಲಿ ನಾವು ಸೇರಿಸಬಾರದು. ಅವರ ಜೊತೆಯಲ್ಲಿ ಕುಳಿತುಕೊಳ್ಳಬಾರದು ಅಂದಾಗ ಈ ಸದನದ ಘನತೆ ಗೌರವ ಮತ್ತು ನಮಗೆ ರಕ್ಷಣೆಯನ್ನು ಕೊಡಬೇಕಾಗಿರುವುದು ತಾವು. ತಾವು ಒಂದು ದೃಢವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಅವರು ಮಾತನಾಡುತ್ತಿರುವುದು ಸಬ್‌ಜುಡೀಸ್ ನಿಮಗೆ ಆಗುತ್ತಿಲ್ಲ. ಯಾವುದೇ ಒಬ್ಬ ನ್ಯಾಯಾಧೀಶರನ್ನು ಕುರಿತಾಗಲಿ, ಹೈಕೋರ್ಟ್ ನ್ಯಾಯಾಧೀಶರನ್ನು ಕುರಿತು ಅವರೇನು ಟೀಕೆ ಮಾಡುತ್ತಿಲ್ಲ. ನಮಗೆ ಆಗಿರುವ ಅವಮಾನವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಕೊಡುತ್ತೇನೆ. ಯಾವುದೇ ಸದಸ್ಯರಾಗಲಿ, ಅಥವಾ ಇಲ್ಲಿಗೆ ಬಂದು ಯಾರಿಗೆ ಡಿಫೆಂಡ್ ಮಾಡುವುದಕ್ಕೆ ಅವಕಾಶ ಇರುವುದಿಲ್ಲವೋ, ಅಥವಾ ಇಲ್ಲಿ ಬಂದು ಅಟೆಂಡ್ ಮಾಡುವುದಕ್ಕೆ ಆಗುವುದಿಲ್ಲವೋ ಅಂಥವರ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಕೆ.ಬಿ. ಕೋಳಿವಾಡ : ವೈಯಕ್ತಿಕವಾಗಿ ಯಾರ ಬಗ್ಗೆಯೂ ಮಾತನಾಡುತ್ತಿಲ್ಲ. ಯಾವುದೇ ಹೈಕೋರ್ಟಿನ ಜಡ್ಜ್‌ಮೆಂಟ್‌ಗಳನ್ನು ನಾವು ಕಾಮೆಂಟ್ ಮಾಡಿದರೆ ಅದು ಕಂಟೆಮ್ಪ್ಟ್ ಆಗಬಹುದು. ಶಾಸಕರಿಗೆ ಆಗಿರತಕ್ಕ ಅಗೌರವನ್ನು ನಾವು ನಿಮ್ಮ ಎದುರಿಗೆ ತೋರಿಸದೆ ಇನ್ಯಾರ ಎದುರಿಗೆ ನಾವು ತೋರಿಸುವುದು.

Mr. SPEAKER : I too agree. Mr. Kolivad. ಅದರ ಬಗ್ಗೆ ಮಾತನಾಡಿ ಯಾವುದಾದರೂ ಒಂದು ನಿರ್ಣಯಕ್ಕೆ ಬರೋಣ. Then I will allow

ಶ್ರೀ ಕೆ.ಬಿ. ಕೋಳಿವಾಡ್ : ಇದು ದೇಶದ ಜನರಿಗೂ ಗೊತ್ತಾಗಬೇಕು. ಶಾಸಕರಿಗೆ ಅಗೌರವ ಆಗಿದೆ ಎನ್ನುವ ವಿಚಾರ ದೇಶದ ಜನತೆಗೆ ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು : ಅವರು ವಿಷಯ ಏನು ಹೇಳುತ್ತಾರೆಂದು ನನಗೆ ಗೊತ್ತಿದೆ. ನಾನು ಮತ್ತು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಅದರ ಬಗ್ಗೆ ಮಾತನಾಡಿದ್ದೇವೆ. ನಾವು ಮಾತನಾಡುತ್ತೇವೆ. ಲಾ ಮಿನಿಸ್ಟರ್‌ನ್ನು ಕರೆಸೋಣ. ಈಗ ಬೇರೆ ವಿಷಯಕ್ಕೆ ಬನ್ನಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ತಮ್ಮಿಂದ ನನಗೊಂದು ಸ್ಪಷ್ಟೀಕರಣ ಬೇಕು. ಈ ಶಾಸಕಾಂಗ, ಕಾರ್ಯಾಂಗದ ಬಗ್ಗೆ ನಾವು ಸಾಕಷ್ಟು ಮಾತನಾಡುತ್ತೇವೆ. ನ್ಯಾಯಾಂಗದ ಬಗ್ಗೆ ಮಾತನಾಡುವುದಕ್ಕೆ ನಮಗೆ ಅರ್ಹತೆ ಇದೆಯೋ ಇಲ್ಲವೋ? ನ್ಯಾಯಾಂಗದ ಬಗ್ಗೆ ಮಾತನಾಡುವವರು

ಯಾರು? ನ್ಯಾಯಾಂದಲ್ಲಿ ಆಗತಕ್ಕ ಅಪಚಾರಗಳು, ಅವ್ಯವಹಾರಗಳ ಬಗ್ಗೆ ಯಾರು ಮಾತನಾಡಬೇಕು? ನೀವು ಅದಕ್ಕೆ ರೂಲಿಂಗ್ ಕೊಡಿ. ಸಪ್ಪೋಸ್ ನಮಗೆ ನ್ಯಾಯಾಂಗದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದಾದರೆ ನ್ಯಾಯಾಂಗದ ಬಗ್ಗೆ ಕೇಳುವವರು ಯಾರು?

ಅಧ್ಯಕ್ಷರು: ಅವಕಾಶ ಇಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ : ಅವರೇನು ಅಪವಾದ ಬರುವ ಮಾತುಗಳನ್ನು ಹೇಳಲಿಲ್ಲ. ಅವರೊಬ್ಬ ಶಾಸಕರಾಗಿ, ಸದನದ ಗೌರವಾನ್ವಿತ ಸದಸ್ಯರಾಗಿ ಮುಖ್ಯ ನ್ಯಾಯಾಧೀಶರು ನಮಗೆ ಮಾಡಿರತಕ್ಕ ಅವಮಾನದ ಬಗ್ಗೆ ಅವರು ಪ್ರಸ್ತಾಪಿಸುತ್ತಿದ್ದಾರೆ. ಅದು ಸಬ್-ಜುಡೀಸ್ ಆಗುವುದಾದರೂ ಹೇಗೆ?

ಅಧ್ಯಕ್ಷರು : ಸಬ್ ಜ್ಯುಡೀಸ್ ಪ್ರಶ್ನೆ ಇಲ್ಲ. ನಾನು ಹೇಳುತ್ತಿರುವುದು.

ಶ್ರೀ ಎಸ್.ಪಿ.ಮುದ್ದುಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು, we are not questioning the action of judiciary.

ನಮಗೆ ಅಡ್ಮನಿಸ್ಟ್ರೇಟಿವ್ ಮ್ಯಾಟರ್ ಅದು. ನಮ್ಮದೇನು ಎಂದರೆ ನಾನು ಈಗ ಶಾಸಕ ಇದ್ದೇನೆ. ನನ್ನ ಕ್ಷೇತ್ರದಲ್ಲಿ ನಡೆಯತಕ್ಕ ಒಂದು ಕಾರ್ಯಕ್ರಮಕ್ಕೆ ಒಬ್ಬರು ಸಚಿವರು ಬಂದರೆ ನಾನು ಬಿಡುವುದಿಲ್ಲ. ಅದೇ ರೀತಿ ನನ್ನ ಕ್ಷೇತ್ರದಲ್ಲಿ ನಡೆಯುವ ಒಂದು ಕಾರ್ಯಕ್ರಮಕ್ಕೆ ಮುಖ್ಯನ್ಯಾಯಾಧೀಶರು ಒಂದು ಉದ್ಘಾಟನಾ ಕಾರ್ಯಕ್ರಮಕ್ಕೆ ಏನೋ ಬಂದರೆ ನಿಮ್ಮ ರೂಲ್ಸ್ ಏನು ಹೇಳುತ್ತದೆ? ದಯಮಾಡಿ ಹೇಳಿ. ಏಕೆಮದರೆ ಈಗ ಅಲ್ಲಿ ಅವರೇನು ಹೇಳುತ್ತಾರೆ, ಅವರು ಸೆಪರೇಟಾಗಿ in my capacity as legislator I am entitled to participate in the programme.

ಅಲ್ಲವಾ? ನನಗೆ ಮುಖ್ಯ ನ್ಯಾಯಾಧೀಶರು ಬರುತ್ತಾರೋ, ಲಾ ಮಿನಿಸ್ಟರ್ ಬರುತ್ತಾರೋ Iam not concerned about that. I am not nbothered abouut that. I have right to participate in the function which is helf in my constituency for which I have to preside. ಎಲ್ಲಿ ಏನಾಗಿದೆ, ನಾವು ನ್ಯಾಯಾಂಗದ ಅವರ ತೀರ್ಮಾನ್ನಾಗಲಿ ಅಥವಾ ಅವರು ನಡೆಯುವ ಮಾರ್ಗವೇ ಆಗಲಿ ನಾವು ಪ್ರಶ್ನೆ ಮಾಡುತ್ತಿಲ್ಲ. ಇಲ್ಲಿ ನಮಗೆ ಒಂದು ತೀರ್ಮಾನವಾಗಬೇಕಾಗುತ್ತದೆ. ನ್ಯಾಯಾಂಗದವರು ಮಾಡುವ ಯಾವುದೇ ಕಾರ್ಯಕ್ರಮಕ್ಕೂ ಕೂಡ ಶಾಸಕರು ಭಾಗವಹಿಸತಕ್ಕದ್ದೇ ಅಥವಾ ಇಲ್ಲವೇ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಅದರ ಬಗ್ಗೆ ತಾವು ತೀರ್ಮಾನವನ್ನು ಕೊಡಬೇಕಲ್ಲ. ಇಲ್ಲದಿದ್ದರೆ ಏನಾಗುತ್ತೆ. ಅವರು ಹೇಳುತ್ತಾರೆ, ಅವರು ನಮ್ಮ ಜೊತೆಯಲ್ಲಿ ಕುಳಿತುಕೊಳ್ಳಬಾರದು, ಬರುವುದೇ ಆದರೆ ಕೆಳಗಡೆ ಕುಳಿತುಕೊಳ್ಳಬೇಕು. They should not be garlanded etc. we cannot understand. We are very cautious. ಅವರು ಮಾಡುವ ರೀತಿ, ಮಾರ್ಗಗಳು- ಅದನ್ನೆಲ್ಲಾ ಇಲ್ಲಿ ನಾವು ಕಾಮೆಂಟ್ ಮಾಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ನಡೆಯತಕ್ಕ ಒಂದು ನ್ಯಾಯಾಂಗ ಇಲಾಖೆಗೆ ಸಂಬಂಧಪಟ್ಟ ಒಂದು ಕಾರ್ಯಕ್ರಮದಲ್ಲಿ ನನಗೆ ಭಾಗವಹಿಸುವ ಹಕ್ಕು ಇದೆಯಾ ಇಲ್ಲವೋ? ತಾವು ತೀರ್ಮಾನ ಕೊಡಿ. ನಿಮಗೆ ಹಕ್ಕು ಇಲ್ಲ ಅಲ್ಲಿ ಭಾಗವಹಿಸುವುದಕ್ಕೆ ಎಂದಾದರೆ.

ಶ್ರೀ ಬಿ.ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವೈ.ಕೆ.ರಾಮಯ್ಯನವರು ಬಹಳ ಗಂಭೀರವಾದಂಥ ವಿಚಾರವನ್ನು ಎತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅವರೇನು ತಪ್ಪು ವಿಚಾರಗಳನ್ನು ಎತ್ತಿಲ್ಲ. ಒಂದು ಅಡ್ಡಿ ಇದೆ, ನಮಗೆ ಯಾರಿಗೆ ಆಗಲಿ, ನ್ಯಾಯಾಲಯದ ತೀರ್ಪಿನ ಬಗ್ಗೆ ನಾವು ಕಾಮೆಂಟ್ ಮಾಡಬಾರದು ಎಂದು ಇದೆ. ಆದರೆ ಅಡ್ಮನಿಸ್ಟ್ರೇಷನ್ ಆಫ್ ಜಸ್ಟೀಸ್, ಆಡಳಿತ ವ್ಯವಹಾರಗಳು ಏನು ನಡೆಯುತ್ತಾ ಇದೆ, ಅದರ ಬಗ್ಗೆ ಪಾರ್ಲಿಮೆಂಟ್‌ಗಾಗಲಿ ಮತ್ತು ವಿಧಾನಸಭೆಗಾಗಲಿ ಚರ್ಚೆ ಮಾಡತಕ್ಕ ಸಂಪೂರ್ಣವಾದ ಅಧಿಕಾರ ಇದೆ. ಇದಕ್ಕೆ ಅನೇಕಬಾರಿ ರೂಲಿಂಗ್‌ಗಳು ಆಗಿದೆ. ಎಷ್ಟೋ ಸಾರಿ ಮಾನ್ಯ ನಂಜೇಗೌಡರು ಬಹಳ ಟೀಕಾಕಾರರಾಗಿ ಮಾತನಾಡಿದ್ದಾರೆ. ಅದು ರೂಲಿಂಗ್ ಆಗಿದೆ. ತಾವು ತೆಗೆದು ನೋಡಿ. ಆದರೆ ನಾವು ಜಡ್ಜ್‌ಗಳ ತೀರ್ಮಾನದ ಬಗ್ಗೆ ಟೀಕೆ ಮಾಡುತ್ತಿಲ್ಲ. ಇವತ್ತು ಮುದ್ದಹನುಮೇಗೌಡರ ಕ್ಷೇತ್ರಕ್ಕೇ ಆಗಲೀ, ಒಂದಕ್ಕೆ ಸೀಮಿತವಾಗಿಲ್ಲ. ಇಂಥ ಒಂದು ಸಮಸ್ಯೆ ಸೀಮಿತವಾಗಿದೆ. ಇವತ್ತು ಒಂದು ನ್ಯಾಯಾಲಯದ ಕಟ್ಟಡವನ್ನು ಕಟ್ಟಬೇಕಾದರೆ ನಮ್ಮ ಸರ್ಕಾರ ನಾವೂ ಜಮೀನು ಕೊಡುತ್ತೇವೆ, ಆಡಳಿತಾತ್ಮಕ ಮಂಜೂರಾತಿ ಕೊಡುತ್ತೇವೆ. ನಾವು ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ, ಎಲ್ಲಾ ಮಾಡುತ್ತೇವೆ. ಇದು ನಮ್ಮ ಆಡಳಿತಾತ್ಮಕವಾದ ಒಂದು ವಿಚಾರ. ಆಯಾ ಕ್ಷೇತ್ರದಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾರ್ಯಕ್ರಮಗಳಾದರೂ ಪ್ರತಿಯೊಬ್ಬ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕು, ಆ ಶಾಸಕರ ಅಧ್ಯಕ್ಷತೆಯಲ್ಲೇ ಪ್ರತಿಯೊಂದು ಸಮಾರಂಭಗಳೂ ನಡೆಯಬೇಕು ಎನ್ನತಕ್ಕದ್ದು ಇದು ಎಸ್ಟಾಬ್ಲಿಷ್ಡ್ ರೂಲ್.

ಶ್ರೀ ಎಸ್.ಎಸ್.ಪಾಟೀಲ್ : ಆ ಶಾಸಕರ ಪ್ರಯತ್ನದಿಂದಲೇ ಆ ಕೆಲಸ ಆಗಬೇಕು.

ಶ್ರೀ ಬಿ.ಸೋಮಶೇಖರ್ : ಜಾಗ ಕೊಡಿಸಿರಬೇಕಾದರೆ ನಾವು ಕೊಡಿಸಿರುತ್ತೇವೆ. ಆಡಳಿತ ಮಂಜೂರಾತಿಯನ್ನು ನಾವೆಲ್ಲಾ ಒಡಾಡಿ ಮಂಜೂರಾತಿಯನ್ನು ಕೊಡಿಸಿರುತ್ತೇವೆ. ಹಣ ಬಿಡುಗಡೆ ಮಾಡಿಸಿರುತ್ತೇವೆ; ಎಲ್ಲಾ ಮಾಡಿಸಿರುತ್ತೇವೆ. ಆದರೆ ನಾವು ಇದಕ್ಕೆ ಇಂಟರ್‌ಫಿಯರ್ ಆಗುವುದಿಲ್ಲ. ಜಡ್ಜಸ್ ಟ್ರಾನ್ಸ್‌ಫರ್ ಆಗಲಿ, ನ್ಯಾಯಾಲಯದಲ್ಲಿ ಕೆಲಸ ಮಾಡುವ ನೌಕರರ ವರ್ಗಾವಣೆಯಾಗಲಿ ನಾವ್ಯಾರೂ ಮಾಡುವುದಿಲ್ಲ. ಆದರೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಮ್ಮ ಒಂದು ಶಾಸಕರ ಪಾತ್ರ ಇಲ್ಲದಿದ್ದರೆ ಅದು ಎಂಥ ಒಂದು ನ್ಯಾಯಾಂಗದ ಆಡಳಿತ. ಅದನ್ನು ಟೀಕೆ ಮಾಡದೆ ಇನ್ನೇನು ಇದೆ? ಮಾಡಲೇಬೇಕಾಗುತ್ತದೆ. ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಈ ಸದನದಿಂದ ಒಂದು ನಿರ್ದೇಶನ ಹೋಗಬೇಕು.

SRI S.P.MUDDA HANUMEGOWDA :They have no objections to share dais with the Law Minister. He is also a legislator. They have not objections to share dais with lasw Minister but they have serious objections to share dais with the legislators.

ಶ್ರೀ ಬಿ.ಸೋಮಶೇಖರ್ : ಅದಕ್ಕೇನೆ ಇವತ್ತೇನೆ ಸದನದಿಂದ ಒಂದು ನಿರ್ದೇಶನ ಹೋಗಬೇಕು. ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಇವತ್ತು ಶಾಸಕರನ್ನು ಬಿಟ್ಟು ಕಾರ್ಯಕ್ರಮಗಳನ್ನು ಮಾಡಬಹುದೋ? ಮಾಡಬೇಕಾದರೆ ಅದಕ್ಕೇನು ತಾವು ನಿರ್ದೇಶನವನ್ನು ಕೊಡುತ್ತೀರಿ? ಇದನ್ನು

ತಾವು ಮಾಡಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಮೊನ್ನೆ ಬಾಗಲಕೋಟೆಯಲ್ಲಿ ಜಿಲ್ಲಾ ನ್ಯಾಯಾಲಯದ ಕಟ್ಟಡದ ಉದ್ಘಾಟನೆ ಇತ್ತು. ನಾನು ನಮ್ಮ ಪಕ್ಷದ ಕೆಲಸದ ನಿಮಿತ್ತ ಅಲ್ಲಿ ಎರಡು ದಿನವಿದ್ದೆ. ಅವತ್ತು ಅಲ್ಲಿ ಉದ್ಘಾಟನೆ ಕಾರ್ಯಕ್ರಮ ಇದ್ದರೆ ನಮ್ಮ ಶಾಸಕರು ಪಿ.ಹೆಚ್. ಪೂಜಾರ್ ಆ ಕ್ಷೇತ್ರದ ಶಾಸಕರು. ಅವರನ್ನು ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕೆ ಕರೆಯಲಿಲ್ಲ. ನಾವು ಸರ್ಕಾರ ಜಾಗ ಕೊಟ್ಟು, ಕಟ್ಟಡ ಕೊಟ್ಟು ಎಲ್ಲಾ ನಾವು ಸಿದ್ಧ ಮಾಡಿಕೊಟ್ಟಮೇಲೆ ಆ ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕೆ ಶಾಸಕರನ್ನು ಆಹ್ವಾನಿಸುವುದಿಲ್ಲ ಎಂದಾದರೆ ನಾವು ಮತ್ತೆ ಅದರ ರಿಫೇರಿಗೆ ಹಣವನ್ನು ಇಲ್ಲಿಂದಲೇ ಪಾಸು ಮಾಡಿಕೊಡಬೇಕು. ಎಲ್ಲಾ ಹಂತದಲ್ಲೂ ನಾವು ಬೇಕು. ಆದರೆ ಇಂಥ ಕಾರ್ಯಕ್ರಮಗಳಿಗೆ ನಾವು ಬೇಡ ಎಂದು ಹೇಳುವುದು ಎಷ್ಟರಮಟ್ಟಿಗೆ ಸರಿ? ಮಾನ್ಯ ಅಧ್ಯಕ್ಷರೇ, ನೀವೇ ನಮ್ಮ ಸಹಾಯಕ್ಕೆ ಬಂದು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಡೆಯುವಂಥ ಕಾರ್ಯಕ್ರಮದಲ್ಲಿ ಯೋಗ್ಯ ಸ್ಥಾನಮಾನ ಸಿಗುವುದಕ್ಕೆ ತಾವೇ ಒಂದು ಸೂಚನೆಯನ್ನು ಕೊಡಬೇಕು, ನಿರ್ದೇಶನವನ್ನು ಕೊಡಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೇ, ಕಡೂರಿನಲ್ಲಿ ಒಂದು ಸಿವಿಲ್ ನ್ಯಾಯಾಲಯವನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ನಾವೆಲ್ಲ ವಿಧಾನಸಭೆಯಲ್ಲಿ ಧನ್ಯವಾದಗಳನ್ನು ಸರ್ಕಾರಕ್ಕೆ ಹೇಳಿಬಿಟ್ಟಿದ್ದೇವೆ ಈಗ ಪ್ರಾರಂಭೋತ್ಸವಕ್ಕೆ ಈ ತಿಂಗಳ ಕೊನೆಯ ಭಾಗದಲ್ಲಿ ಡೇಟ್ ಫಿಕ್ಸ್ ಆಗಿದೆ. ಒಂದು ಸರ್ಕ್ಯುಲರ್ ಉಚ್ಚ ನ್ಯಾಯಾಲಯದಿಂದ ಬಂದಿದೆ. ಏನು ಬಂದಿದೆ ಎಂದರೆ, 'ಮುಖ್ಯ ನ್ಯಾಯಾಧೀಶರು, ಆ ಜಿಲ್ಲೆಯ ನ್ಯಾಯಾಧೀಶರು ಅಡ್ಮನಿಸ್ಟ್ರೇಟೀವ್ ಜಡ್ಜ್ ಇರಬೇಕು. ಆ ಜಿಲ್ಲೆಯ ಉಸ್ತುವಾರಿ ಸಚಿವರು ಇರಬೇಕು. ನಾಲ್ಕೈದು ಜನ ಮಂತ್ರಿಗಳು ಇದ್ದರೆ ಯಾರನ್ನೂ ಕರೆಯಬಾರದು. ಉಸ್ತುವಾರಿ ಸಚಿವರನ್ನು ಮಾತ್ರ ಕರೆಯಬೇಕು. ಆಕಸ್ಮಿಕವಾಗಿ ಶಾಸಕರುಗಳು, ಪಾರ್ಲಿಮೆಂಟ್ ಸದಸ್ಯರು ಬಂದರ ಮುಂದುಗಡೆ ರೋ-ನಲ್ಲಿ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಆಕಸ್ಮಿಕವಾಗಿ ಈ ಸಮಾರಂಭಕ್ಕೆ ಶಾಸಕರುಗಳು ಏನಾದರೂ ಭಾಗವಹಿಸಬೇಕು ಎಂದು ಕೇಳಿದರೆ ನಾವೆಲ್ಲ ಹೋಗಿ ಒಂದು ವಾರ ಆದಮೇಲೆ ಬಾರ್ ಅಸೋಸಿಯೇಷನ್‌ನವರು ಕರೆದು ಟೀ ಕೊಟ್ಟು ಒಂದು ಸಮಾರಂಭ ತರಹ ಮಾಡಬೇಕು ಎನ್ನತಕ್ಕಂಥಹ ಸ್ಪಷ್ಟವಾಗಿರತಕ್ಕಂಥಹ ಆದೇಶವನ್ನು, ಸರ್ಕುಲರನ್ನು ಕಳಿಸಿಬಿಟ್ಟಿದ್ದಾರೆ. ಶಾಸಕರುಗಳಿಗೆ ಹೋಗಲಿ, ಆ ಜಿಲ್ಲೆಯ ಮಂತ್ರಿಗಳ ಬಗ್ಗೆ ವಿಚಾರ ಮಾಡಬೇಕು. ನನಗೆ ಒಂದು ಚಿಂತೆ ಅಂದರೆ ಮಾನ್ಯ ಚಂದ್ರೇಗೌಡರನ್ನು ಕರೆಯುತ್ತಾರೆ. ಪಾಪ, ನಮ್ಮ ಮಾನ್ಯ ಸಗೀರ್ ಅಹಮದ್ ಹಾಗೂ ಮಾನ್ಯ ಮೋಟಮ್ಮನವರು ಏನು ಮಾಡಿದ್ದಾರೆ? ಅವರೂ ಆ ಸಭೆಯಲ್ಲಿ ಭಾಗವಹಿಸುವ ಹಾಗೆ ಇಲ್ಲ. ಅವರು ಬಂದರೂ ಸಹ ಫ್ರಂಟ್ ರೋಲ್‌ನಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಈಗ ಅವರ ಮೆ ಬಾಗಿಲಿಗೆ ಬಂದು ಕುಳಿತುಬಿಟ್ಟಿದೆ. ನಾವು ಶಾಸಕರುಗಳು ಹೋಗಲಿ, ಅವರು ನಗುತ್ತಿದ್ದಾರಲ್ಲ, ಈಗ ಅವರನ್ನೇ ವೇದಿಕೆಯ ಮೇಲೆ ಕೂರಿಸುವುದಿಲ್ಲ. ಒಬ್ಬ ಸಚಿವರಾಗಿ ಜನಗಳ ಒತ್ತಡಕ್ಕೆ ಬಂದರೆ ಕೂರಿಸುವುದಿಲ್ಲ. ಈಗ ನಮ್ಮ ಕಡೂರ್‌ನಲ್ಲಿ ಸಗೀರ್ ಅಹಮದ್ ಹಾಗೂ ಮೋಟಮ್ಮನವರು ಸಮಾರಂಭಕ್ಕೆ ಬರದೇ ಇದ್ದರೆ ಒಂದು ತರಹ ಬೇಜಾರು ಆಗುತತದೆ. ನಾವು ಹೋಗಿ ಒತ್ತಾಯಪೂರ್ವಕವಾಗಿ ಕರೆಯುತ್ತೇವೆ. ಅವರು ಬಂದು ಫ್ರಂಟ್ ರೋಲ್‌ನಲ್ಲಿ ಕೂರಬೇಕು. ಇದು ಸರ್ಕುಲರ್ ಬಂದಿರತಕ್ಕದ್ದು. ಅವರ ಮನೆ ಬಾಗಿಲಿಗೆ ಮಾರಿ ಬಾಗಿಲು ತಟ್ಟುತ್ತಿರಬೇಕಾದರೆ ತನಮ್ಮ ಕಡೆ ನಗುಂತಹದ್ದು ಏನು ಇದೆ? ದಯಮಾಡಿ ಆ ಸರ್ಕ್ಯುಲರನ್ನು ಅವರು ವಾಪಸ್

ತೆಗೆದುಕೊಳ್ಳಬೇಕು ಎನ್ನತಕ್ಕ ಸ್ಪಷ್ಟವಾದಂತಹ ನಿರ್ದೇಶನ ಕೊಡಬೇಕಾಗುತ್ತದೆ. ಇಲ್ಲಿ ಒತ್ತಾಯ ಮಾಡತಕ್ಕವರು ನಾವು. ಒತ್ತಾಯ ಮಾಡಿ, ಸರ್ಕಾರದಿಂದ ಪ್ರೆಷರ್ ತರತಕ್ಕವರು ನಾವು. ಮಂತ್ರಿಗಳ ಮನೆಗೆ, ಆಫೀಸಿಗೆ ಓಡಾಡಿ ಕಟ್ಟಡ ಕೊಡತಕ್ಕವರು ನಾವು. ಕಟ್ಟಡ ಇಲ್ಲದೇ ಹೋದರೆ ಬೇರೆ ಯಾವುದಾದರೂ ಖಾಸಗಿ ಕಟ್ಟಡವನ್ನು ಕೊಡತಕ್ಕವರು ನಾವು. ಏನು ತೀರ್ಮಾನ ಆಗುತ್ತದೋ ನೋಡೋಣ? ಈಗ ಅವರ ಪರಿಸ್ಥಿತಿ ನೋಡಿ ಹೇಳಿ. ಅವರಿಗೆ ರಕ್ಷಣೆ ಕೊಡುವವರು ಯಾರು? ನೀವು ನಮಗಿಂತ ಮೊದಲು ಮಂತ್ರಿಗಳಿಗೆ ರಕ್ಷಣೆ ಕೊಡಬೇಕು. ಆಮೇಲೆ ನಮಗೆ ರಕ್ಷಣೆ ಕೊಡಿ.

ಶ್ರೀ ಕೆ.ಬಿ. ಕೋಳಿವಾಡ್ : ಸನ್ಮಾನ್ಯ ಅಧ್ಯಕ್ಷರೆ, ಸಂವಿಧಾನದಲ್ಲಿ ಇದು ಮೂರು ಅವಿಭಾಜ್ಯ ಅಂಗಗಳು. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ. ಇವೆಲ್ಲವೂ ಸರಿಸಮಾನವಾದಂತಹುವು ಮತ್ತು ಶಾಸಕಾಂಗ ಮತ್ತು ಕಾರ್ಯಾಂಗದ ಬಗ್ಗೆ ಮನಸ್ಸಿಗೆ ಬಂದ ಹಾಗೆ ಒಮ್ಮೆ ಎಲ್ಲರೂ ಮಾತನಾಡುವುದು. ಜುಡಿಸಿಯರಿ ಎಂಬ ಶಬ್ದ ತೆಗೆದ ಕೂಡಲೇ ಕಂಟೆಪ್ಟ್ ಅದು ಕಂಟೆಪ್ಟ್ ಆಗುವುದಿಲ್ಲ. ನಾನು ಹೇಳುತ್ತಿದ್ದೇನೆ. ಅವರ ಜಡ್ಜ್‌ಮೆಂಟ್ ಬಗ್ಗೆ ಕಾಮೆಂಟ್ ಮಾಡಿದರೆ it amounts to contempt. So far as their administrative actions are concerned. We are entitled to comment. There must be a ruling on this today. ಏನಾಗುತ್ತದೆ ಎಂದರೆ ಕಾರ್ಯಾಂಗದ ಮತ್ತು ಶಾಸಕಾಂಗಗಳು ನ್ಯಾಯಾಂಗದ ಅಡಿಯಾಗಿ ಕೆಲಸ ಮಾಡುತತಿವೆ ಎನ್ನತಕ್ಕ ಒಂದು ವಾತಾವರಣ ಈಗ ಪ್ರಪಂಚದ ತುಂಬಾ ಬಂದಿದೆ. ಅದನ್ನು ನಾವು ಇವತ್ತು ಹೋಗಲಾಡಿಸಲೇಬೇಕಾಗಿದೆ. ಈ ಶಾಸಕಾಂಗ ಮತ್ತು ಕಾರ್ಯಾಂಗದ ಅಡ್ಮಿನಿಸ್ಟ್ರೇಟೀವ್ ಆರ್ಡರ್‌ಗಳು ಸಹಿತ ನ್ಯಾಯಾಂಗಗಳು ಬರೆಯುತ್ತಿದ್ದ ಹೊತ್ತಿನಲ್ಲಿ ನಾವಿಲ್ಲಿ ಬಂದು ಕೂರುವುದಕ್ಕೆ ಆಗುತ್ತದಾ? ನಾವಿಲ್ಲಿ ಬಾಯಿ ಮುಚ್ಚಿಕೊಂಡು ಕೂರುವುದಕ್ಕೆ ಆಗುವುದಿಲ್ಲ. ಅದಕ್ಕೆ ಒಂದು ನಿರ್ಣಯ ಆಗಬೇಕು. ಯುನಾನಿಮಸ್ ಆಗಿ ಇಲ್ಲೊಂದು ರೆಸಲ್ಯೂಷನ್ ಆಗಬೇಕು. ಎಲ್ಲವೂ ಈಕ್ವಲ್ ಆಗಿ ಇವೆ. ಅವರಿಗಿಂತ ಕೆಳಗೆ ನಾವೇನೂ ಇಲ್ಲ. Legislature and Executive are not subordinate bodies to the judiciary. They are equal. ಅದಕ್ಕೆ ಒಂದು ನಿರ್ಣಯ ಆಗಲೇಬೇಕು. ಅದಕ್ಕೆ ಒಂದು ರೆಸಲ್ಯೂಷನ್ ಇವತ್ತು ಪಾಸ್ ಮಾಡಲೇಬೇಕು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಮಹತ್ವವಾದಂಥಹ ವಿಷಯದ ಬಗ್ಗೆ ಇಲ್ಲಿ ಚರ್ಚೆ ಆಗುತ್ತಿದೆ. ಮಾನ್ಯ ವೈ.ಕೆ. ರಾಮಯ್ಯನವರು ಒಂದು ಬಹಳ ಗಮನವಾದಂತಹ ವಿಷಯವನ್ನು ಎತ್ತಿದ್ದಾರೆ. ಇಲ್ಲಿ ಸಂವಿಧಾನದ ರೀತಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ, ಪಕ್ಷಕ್ಕೆ ತನ್ನದೇ ಆದಂತಹ ಒಂದು ಗೌರವ, ಸ್ಥಾನಮಾನ ಇದೆ. ಇಲ್ಲಿ ಪರಸ್ಪರ ಸಹಕಾರದೊಂದ ಹೋಗುವಂತಹದು ಇರಬೇಕು. ಈ ಮೂರು ಅಂಗಗಳಿಗೆ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತನ್ನದೇ ಆದಂತಹ ಸ್ವಂತಿಕೆ ಇದೆ, ಗೌರವ ಇದೆ. ಮೂರೂ ಪರಸ್ಪರ ಸಹಕಾರದಿಂದ ಹೋದಾಗ ಮಾತ್ರ ಈ ಒಂದು ಪ್ರಜಾಪ್ರಭುತ್ವ ಯಶಸ್ವಿಯಾಗಲಿಕ್ಕೆ ಸಾಧ್ಯ ಇದೆ. ಶಾಸಕಾಂಗದಲ್ಲಿ ಇರತಕ್ಕಂಥಹ ಪ್ರತಿನಿಧಿಗಳು ಕಾನೂನು ಮಾಡುವಂತಹವರೇ ನಾವು. ಆಮೇಲೆ ಎಕ್ಸಿಕ್ಯೂಟ್ ಮಾಡುವಂತಹದು ಕಾರ್ಯಾಂಗ. ಇಲ್ಲಿ ನ್ಯಾಯಾಂಗಕ್ಕೆ ತನ್ನದೇ ಆದಂತಹ ಒಂದು ಸ್ವತಂತ್ರವಾದಮತಹ ಸ್ಥಾನಮಾನ ಇದ್ದಗಳು ಸಹಿತ ಈ ಕಾರ್ಯಾಂಗ ಮತ್ತು ಶಾಸಕಾಂಗದ ಒಂದು ಸಹಕಾರ ಅದಕ್ಕೆ ಬೇಕೇ ಬೇಕಾಗುತ್ತದೆ. ಇವತ್ತು ನ್ಯಾಯಾಂಗದ ಬಗ್ಗೆ ಮಾತನಾಡಲೇಬಾರದು. ಒಂದು ಮಡಿವಂತಿಕೆ ಬೇಕು ಎನ್ನುವಂತಹದು ತಪ್ಪು.

ಇವತ್ತು ಎಲ್ಲಿಯವರೆಗೆ ನ್ಯಾಯಾಂಗದಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನಕ್ಕೆ ಒಂದು ದೊಡ್ಡ ಸ್ಥಾನಮಾನ ಇದೆ. ನ್ಯಾಯಾಂಗ ಎಲ್ಲಿ ತಪ್ಪು ಮಾಡುತ್ತದೆ ಆ ತಪ್ಪನ್ನು ಹೇಳಲಿಕ್ಕೂ ಈ ಸದಕ್ಕೆ ಒಂದು ಹಕ್ಕು ಇದೆ. ಇಲ್ಲಿರುವಂತಹ ಜನ ಪ್ರತಿನಿಧಿಗಳಿಗೆ ಹಕ್ಕು ಇದೆ. ಇದೋ ಎಷ್ಟೋ ಸಲ ಡಿಸ್ಕಷನ್ ಆಗಿದೆ. ಸಾಕಷ್ಟು ಉದಾಹರಣೆಗಳೂ ಇವಕ್ಕೆ ಇದೆ. ನ್ಯಾಯಾಂಗ ಮತ್ತು ಶಾಸಕಾಂಗದ ಸ್ಥಾನಮಾನದ ಬಗ್ಗೆ ಇಲ್ಲಿ ಪ್ರಮುಖವಾಗಿ ಇವತ್ತು ಜನ ಪ್ರತಿನಿಧಿಗಳಿಗೆ ಸ್ಥಾನಮಾನ ಕೊಡಬೇಕೋ ಬೇಡವೋ ಎನ್ನುವ ಬಗ್ಗೆ ವಿಚಾರ ಇದೆ. ಇವತ್ತು ಕೇವಲ ಜುಡಿಸಿಯರಿ ಫಂಕ್ಷನ್ ಅಲ್ಲ. ಇವತ್ತು ನ್ಯಾಯಾಲಯ ಕಟ್ಟಡದ ಉದ್ಘಾಟನೆ ಇರಬಹುದು. ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ರೀತಿಯ ಅಭಿವೃದ್ಧಿ ಕೆಲಸಗಳ ಬಗ್ಗೆ ಒಂದು ಕಾರ್ಯಕ್ರಮ ಇರಬಹುದು. ಅಲ್ಲಿ ಶಾಸಕಾಂಗದಿಂದ ಬಂದಂತಹ ಜನಪ್ರತಿನಿಧಿಗಳಿಗೆ ಇವತ್ತು ಅವರು ಇನ್‌ವೈಟ್ ಮಾಡುವುದಿಲ್ಲ, ಅವರನ್ನು ಕರೆಯುವುದಿಲ್ಲ ಎನ್ನುವಂತಹದು ಬಹಳ ತಪ್ಪು. ಅದಕ್ಕಾಗಿ ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರೆ ಇವತ್ತು ಸಬ್ ಜುಡಿಸ್ ಆಗಲೀ ಅಥವಾ ನ್ಯಾಯಾಂಗಕ್ಕೆ ಅಪಮಾನ ಮಾಡುವಂತಹುದು ಆಗಲೀ ಯಾವುದೂ ಆಗುವುದಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ ಇದರ ಬಗ್ಗೆ ಚರ್ಚೆಗೆ ಅವಕಾಶ ಇರಬೇಕು. ಮಾನ್ಯ ಕಾನೂನು ಸಚಿವರು ಬಹಳಷ್ಟು ವಿಷಯಗಳ ಬಗ್ಗೆ ಹೇಳಬೇಕು ಬಹಳಷ್ಟು ವಿಷಯಗಳ ಮೇಲೆ ಏನು ಬೆಳಕು ಚೆಲ್ಲುತಾತರೆಡಂದು ನಾವು ನೋಡಬೇಕಾಗುತ್ತದೆ. ಅದಕ್ಕಾಗಿ ಅವರೂ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗುತ್ತದೆ. ಒಟ್ಟು ಒಂದು ಪರಿಸ್ಥಿತಿ ಬಂದರೆ ಎಲ್ಲರೂ ಕೂಡಿ ಯನಾನಿಮಸ್ ಆಗಿ ಒಂದು ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ ಈ ಒಂದು ವಿಷಯದ ಬಗ್ಗೆ. ಜನಪ್ರತಿನಿಧಿಗಳಿಗೆ ಇದೇ ರೀತಿ ಅಪಮಾನ ಆಗುವಂತಹುದು, ಅಗೌರವ ಆಗುವಂತಹುದು ಮುಂದುವರಿಯಲಿಕ್ಕೆ ಸಾಧ್ಯ ಇದೆ. ಇವತ್ತು ಈ ಶಾಸಕಾಂಗ ಪಕ್ಷಕ್ಕೆ ಇರುವಂತಹ ಮಹತ್ವವನ್ನು ನಾವು ತಿಳಿಸಬೇಕಾಗುತ್ತದೆ. ಎಲ್ಲಿಯವರೆಗೆ ತಿಳಿಸಬೇಕು? ಇವತ್ತು ನಾವು ತೀರ್ಪನ್ನು ಛಾಲೆಂಜ್ ಮಾಡಬಾರದು ಎಂದು ಹೇಳುತ್ತೇವೆ. ಯಾವುದೇ ಒಂದು ತೀರ್ಪಿನ ಬಗ್ಗೆ ರಚನಾತ್ಮಕವಾಗಿ ಒಂದು ಟೀಕೆ ಮಾಡಲಿಕ್ಕೂ ಅವಕಾಶ ಇದೆ. ಇವತ್ತು ಜಡ್ಜ್‌ಮೆಂಟ್ ಬಗ್ಗೆಯೂ ಟೀಕೆ ಮಾಡಬಾರದು ಎಂತಲ್ಲ. ನಾವು ರಚನಾತ್ಮಕವಾಗಿ ಟೀಕೆ ಮಾಡಿದರೂ ಅದಕ್ಕೂ ಅವಕಾಶ ಇದೆ. ಅಂತಹ ಸಂದರ್ಭದಲ್ಲಿ ಇವತ್ತು ಈ ರೀತಿಯಾದಂತಹ ನಡಾವಳಿಕೆಗಳನ್ನು ಮಾಡುವಂತಹುದು ಸರಿಯಲ್ಲ. ಅದಕ್ಕಾಗಿ ಇದರ ಬಗ್ಗೆ ಚರ್ಚೆ ಆದರೆ ತಪ್ಪಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ನ್ಯಾಯಾಂಗಕ್ಕೆ ಹಾಗೂ ನಮಗೆ ಎಷ್ಟರಮಟ್ಟಿಗೆ ಸಂಬಂಧ ಇದೆ ಎಂದು ಹೇಳುವುದಕ್ಕೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ನಿನ್ನೆ ನಡೆದಂತಹ ಉದಾಹರಣೆ ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಿನ್ನೆ ನಮ್ಮ ಪುತ್ತೂರಿನ ಬಾರ್ ಅಸೋಸಿಯೇಷನ್ ಅಧ್ಯಕ್ಷರು ಬಂದಿದ್ದರು. ಅವರಿಗೆ ಒಂದು ಕರೆಂಟ್ ಬಿಲ್ ಬಂದಿದೆ. ಒಂದು ಲಕ್ಷದ ಒಂದು ಸಾವಿರದ ಚಿಲ್ಲರೆಯ ಕರೆಂಟ್ ಬಿಲ್ ಕಟ್ಟಬೇಕು ಎಂದು ಬಂದಿದೆ. ಸುಮಾರು ಒಂದೂವರೆ ವರ್ಷದಿಂದ ಬಾರ್ ಅಸೋಸಿಯೇಷನ್‌ಗೆ ಕರೆಂಟ್ ಇಲ್ಲ. ಆದರೆ ಸಿವಿಲ್ ಜಡ್ಜ್ ಮತ್ತು ಅಲ್ಲಿನ ಕೋರ್ಟ್‌ಗೆಲ್ಲಾ ಇದರಿಂದ ಕರೆಂಟ್ ಹೋಗುತ್ತಿದೆ. ಮೀಟರ್ ಬೇರೆ ಬೇರೆ ಅಳವಡಿಸಿದ್ದಾರೆ. ಆದರೆ ಇದರ ಪ್ಲಗ್ ತೆಗೆದರೆ ಆ ಕಡೆ ಕರೆಂಟ್ ಇಲ್ಲ. ಕೆ.ಇ.ಬಿ ಅಧಿಕಾರಿಗಳು ಬಂದು

ಹೇಳುತ್ತಾರೆ; ದಯವಿಟ್ಟು ಕರೆಂಟ್ ತೆಗೆಯಬೇಡಿ, ಅಲ್ಲಿ ಸಿವಿಲ್ ಜಡ್ಜ್ ಮತ್ತು ಮ್ಯಾಜಿಸ್ಟ್ರೇಟರಿಗೆ ತೊಂದರೆ ಆಗುತ್ತದೆ, ಆದಕಾರಣ ಏನಾದರೂ ಮಾಡಿ ದುಡ್ಡು ಕಟ್ಟಿ ಎಂದು ಹೇಳುವುದನ್ನು ಕೆಇಬಿ ಅಧಿಕಾರಿಗಳು ಬಂದು ಹೇಳುತ್ತಾರೆ. ಕೊನೆಗೆ ಎಲ್ಲ ಕಡೆಗೆ ಅವರಿಗೆ ಪರಿಹಾರ ಆಗಲಿಲ್ಲ. ನಿನ್ನೆ ಬಾರ್ ಆಸೋಸಿಯೇಷನ್‌ನ ಅಧ್ಯಕ್ಷರು ನನ್ನಲ್ಲಿಗೆ ಬಂದರು, ದಯವಿಟ್ಟು ಕೆಇಬಿ ಅಧಿಕಾರಿಗಳನ್ನು ಕರೆದು ಇದರ ಬಗ್ಗೆ ಮಾತನಾಡಬೇಕು ಎಂದು ಹೇಳಿದರು. ನೀವು ಫ್ಯೂಸ್ ತೆಗೆಯಿರಿ, ಜಡ್ಜ್‌ರಿಗೆ ಮತ್ತು ಮ್ಯಾಜಿಸ್ಟ್ರೇಟರಿಗೆ ಕರೆಂಟ್ ಹೋಗುವುದು ಗೊತ್ತಾಗುತ್ತದೆ ಎಂದು ನಾನು ಹೇಳಿದೆ. ಆಗ ಅವರು ಹೇಳಿದರು. ಬೇಡ ಬೇಡ ಜಡ್ಜ್‌ರಿಗೆ ಕರೆಂಟ್ ಹೋಗುವುದು ಸರಿಯಲ್ಲ. ಇದನ್ನು ನೀವು ಸರಿ ಮಾಡಬೇಕು ಎಂದು ಹೇಳಿದರು. ಎಲ್ಲಿಯವರೆಗೆ ಸಂಬಂಧ ಇದೆ ಎಂದರೆ ಸಣ್ಣ ಕರೆಂಟ್ ಬಿಲ್‌ನವರೆಗೆ ಶಾಸಕನಿಗೆ ಒಂದು ಸಂಬಂಧ, ಯಾವುದೇ ನ್ಯಾಯಾಲಯದ ಜೊತೆ ಸಂಬಂಧ ಇದೆ. ಆದರೆ ಅವನಿಗೆ ಯಾವುದಾದರೂ ಕಟ್ಟಡ ಉದ್ಘಾಟನೆ ಮಾಡುವಾಗ ಅವನಿಗೆ ಬರಲು ಹೇಳಲಿಕ್ಕೆ ಆಗುವುದಿಲ್ಲ. ಎಲ್ಲಿಯವರೆಗೆ ಸಂಬಂಧ ಇದೆ ಎಂದರೆ ರಿಪೇರಿ ವಿಚಾರದಲ್ಲೂ ಇದೆ. ಸೋರಿದ ಕೂಡಲೇ ನಮಗೆ ಒಂದು ಪತ್ರ ಬರುತ್ತದೆ. ಬಾರ್ ಅಸೋಸಿಯೇಷನ್ ಮತ್ತು ನಮ್ಮ ಕಟ್ಟಡ ಸೋರುತ್ತಿದೆ. ತಕ್ಷಣ ಎಲ್ಲಿಂದಾದರೂ ದುಡ್ಡು ತರಿಸಿ, ಮೇಂಟೆನೆನ್ಸ್ ಭಾಗದಿಂದ ದುಡ್ಡು ಕೊಟ್ಟು ಅದನ್ನು ಸರಿ ಮಾಡಿಸಿ ಎಂದು ಬರುತ್ತದೆ. ಕಾಂಪೌಂಡ್ ಹಾಲ್ ಬಿದ್ದರೆ ಶಾಸಕರು ಬೇಕು. ಒಳಗೆ ಏನಾದರೂ ಕಳ್ಳರು ನುಗ್ಗಿದರೆ ಪೋಲೀಸ್ ಸ್ಟೇಷನ್‌ನಲ್ಲಿ ಹೇಳಿಕೆ ಹೇಳಲು ಶಾಸಕರು ಬೇಕು. ಆದರೆ ಇಷ್ಟೆಲ್ಲಾ ಆದಮೇಲೆ ಏನೋ ಇಷ್ಟೆಲ್ಲಾ ಕೆಲಸ ಮಾಡುತ್ತಾನೆ, ಆ ಗೌರವಾನ್ವಿತ ಸ್ಥಾನದಲ್ಲಿದ್ದಾನೆ, ಅವನಿಗೆ ಎಲ್ಲಾದರೂ ಪಕ್ಕದಲ್ಲಿ ಕುರ್ಚಿ ಹಾಕಿದರೆ ಭಾರೀ ಕಷ್ಟ. ಏಕೆ ಹೀಗಾಗುತ್ತದೆ ಎಂದು ಗೊತ್ತಿಲ್ಲ. ಆದ್ದರಿಂದ ಇದೊಂದು ಗಂಭೀರವಾದಂತಹ ವಿಚಾರ. ಎಲ್ಲದಕ್ಕು ಸ್ಪಂದನ ಮಾಡಬೇಕಾದಂತಹ ವ್ಯಕ್ತಿಗೆ ಆ ಜಾಗದಲ್ಲಿ ಕೂಡ ಸ್ಪಂದನ ಆಗುವಂತಹ ಕೆಲಸಗಳು ನ್ಯಾಯಾಂಗದಿಂದ ನಮ್ಮ ಕಡೆಗೆ ಆಗಬೇಕಾಗಿದೆ. ಅದಕ್ಕಾಗಿ ಇದರ ಬಗ್ಗೆ ತಾವು ತುಂಬಾ ಗಮನ ಹರಿಸಬೇಕು ಎಂದು ಹೇಳುವಂತಹ ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು : ನಾನು ಸ್ವಲ್ಪ ಮಾತನಾಡುತ್ತೇನೆ. ಈಗಾಗಲೇ ಇಬ್ಬರು ಮೂವರು ಮಾತನಾಡಿದ್ದಾರೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಯ್ಯನವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ತಮ್ಮ ಮೂಲಕ ನಾನು ರಕ್ಷಣೆಯನ್ನು ಕೇಳುತ್ತಿದ್ದೇನೆ. ನೈತಿಕವಾಗಿ ಒಬ್ಬ ಶಾಸಕ ನ್ಯಾಯಾಂಗಕ್ಕೆ ಸಂಬಂಧಪಟ್ಟ ಪ್ರಶ್ನೆ ಮಾಡಲಿಕ್ಕೆ ಅವಕಾಶ ಇಲ್ಲದೇ ಇದ್ದರೂ ಕೂಡ ಆಡಳಿತಾತ್ಮಕವಾಗಿ ಕುಂದುಕೊರತೆಗಳು ಬಂದಂತಹ ಸಂದರ್ಭದಲ್ಲಿ ನಾವು ಪ್ರವೇಶವಾಗುವಂತಹ ಅನಿವಾರ್ಯತೆ ಕೂಡ ಇದೆ. ಅಂತಹ ಸಂದರ್ಭದಲ್ಲಿ ನಮಗೆ ರಕ್ಷಣೆ ಕೇಳುತ್ತಿದ್ದೇನೆ. ನಮ್ಮ ಜಿಲ್ಲಾ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಸೋರುವಿಕೆಯಿಂದ ಹಿಡಿದು ಕಟ್ಟಡಕ್ಕೆ ಸಂಬಂಧಪಟ್ಟಂತೆ ಅಲ್ಲಿ ನೀರು ನಿಂತಿರುವಾಗ ಜಿಲ್ಲಾ ನ್ಯಾಯಾಧೀಶರು ನಮ್ಮನ್ನು ಕರೆಸಿದ್ದಾರೆ. ಅಲ್ಲಿ ಸುಮಾರು ನಾಲ್ಕು ವರ್ಷಗಳಲ್ಲಿ 15 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಮಾಡಿ ದುರಸ್ತಿ ಮಾಡಲಾಗಿದೆ. ಆದರೆ ಅಲ್ಲಿಯ ಸ್ಟಾಫ್ ವಿಚಾರ ಹೇಳುತ್ತೇನೆ.

ಅಧ್ಯಕ್ಷರು : ಡೀಟೇಲ್ಸ್ ಬೇಡ. ನಮ್ಮ ಮುಂದೆ ಪ್ರಶ್ನೆ ಏನು ಇದೆ ಅದರ ಬಗ್ಗೆ ಹೇಳಿ.

ಶ್ರೀ ಎನ್. ಯೋಗೀಶ್.ಭಟ್ : ಅಲ್ಲಿನ ಒಬ್ಬ ಸ್ಟಾಫ್ ನಮ್ಮ ಮನೆಗೆ ಬಂದು ಒಂದು ಲಕ್ಷ ರೂಪಾಯಿ ಮನೆ ಕಟ್ಟಲಿಕ್ಕೆ ರಿಜಿಸ್ಟ್ರಾರ್ ಕಡೆಯಿರದ ಮಂಜೂರಾತಿ ಆಗಿದೆ; ಆದರೆ ಒಂದು ವರ್ಷದಿಂದ ಹಣ ಬಿಡುಗಡೆ ಆಗಿಲ್ಲ ಎಂದು ಹೇಳುವಂತಹ ವಿನಂತಿಯನ್ನು ನನ್ನಲ್ಲಿ ಮಕಾಡಿದಾಗ ನಾನು ಒಂದು ಪತ್ರವನ್ನು ರಿಜಿಸ್ಟ್ರಾರ್‌ಗೆ ಬರೆದೆ. ದಯವಿಟ್ಟು ನೀವು ಅವರಿಗೆ ಬಿಡುಗಡೆ ಮಾಡಬೇಕಾದಂತಹ ಹಣವನ್ನು ಬಿಡುಗಡೆ ಮಾಡಿ ಎಂದು ಹೇಳಿದೆ. ನಿಮಗೆ ಆಶ್ಚರ್ಯವಾಗಬಹುದು. ಅದರ ಬಗ್ಗೆ ತನಿಖೆ ನಡೆಸಿ ತನಿಖೆಗೆ ಎನ್‌ಕ್ವೈರಿ ಹಾಕಿದರು. ಮೂರು ಗಂಟೆಗಳ ಕಾಲ ಕಟಕಟೆಯಲ್ಲಿ ನಿಲ್ಲಿಸಿ ನಾನು ಉತ್ತರ ಕೊಡುವಂತಹ ಸ್ಥಿತಿ ಬಂದಿತು. ಈ ರೀತಿಯಲ್ಲಿ ನೇರವಾಗಿ ಆಡಳಿತಾತ್ಮಕ ರ್‍ಯಾಪ್ಸ್ ಆಗಿದೆ. ಒಂದು ಲಕ್ಷ ರೂಪಾಯಿ ಮಂಜೂರಾತಿ ಆಗಿದೆ. ಒಂದು ವರ್ಷದಿಂದ ಬಿಡುಗಡೆ ಆಗಿಲ್ಲ ಎಂದು ಹೇಳಿ ನಾನು ವಿನಂತಿ ಪತ್ರವನ್ನು ಅವರಿಗೆ ಬರೆದಿದ್ದಕ್ಕೋಸ್ಕರ ಮೂರು ಗಂಟೆಗಳ ಕಾಲ ಕಟಕಟೆಯಲ್ಲಿ ನನ್ನನ್ನು ನಿಲ್ಲಿಸಿ ನೀವು ಅವರಿಗೆ ಹೇಗೆ ಪತ್ರವನ್ನು ಬರೆದಿರಿ ಎಂದು ಕೇಳಿದಿರಿ. ಆ ರೀತಿ ಆಡಳಿತಾತ್ಮಕವಾಗಿ ಪ್ರಶ್ನಿಸುವಂತಹ ಹಕ್ಕು ಅವರಿಗೆ ನಮಗೆ ಇದೆಯೇ ಎಂದು ಹೇಳುತವಂತಹದನ್ನು, ತಿಳಿಸಬೇಕು. ತಮ್ಮ ಕಡೆಯಿಂದ ನಾನು ರೂಲಿಂಗ್‌ನ್ನು ಅಪೇಕ್ಷೆ ಮಾಡುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್ : ಇದು ಬಹಳ ಗಂಭೀರವಾದ ವಿಚಾರವಾಗಿದ್ದು, ಇವೊತ್ತು ಪ್ರತಿಯೊಬ್ಬ ಶಾಸಕರಿಗೂ ಸಂಬಂಧಿಸಿರುವ ಹಕ್ಕಿನ ಪ್ರಶ್ನೆ ಇದಾಗಿದೆ. ಆದುದರಿಂದ, ತಾವು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರನ್ನು ಸದನಕ್ಕೆ ಕರೆಸಿ ಈ ವಿಚಾರದಲ್ಲಿ ಏನಾದರೊಂದು ತೀರ್ಮಾನ ಮಾಡಬೇಕು. Judges are exceeding their limits. We cannot tolerate this. We have got our own rights.

ಮಾನ್ಯ ಹಿರಿಯ ಸದಸ್ಯರಾದ ರಾಮಯ್ಯನವರು ಪ್ರಸ್ತಾಪಿಸಿರುವ ವಿಚಾರ ಹಾಗೂ ಸರ್ವ ಸದಸ್ಯರ ಅಭಿಪ್ರಾಯ ಒಂದೇ ಆಗಿರುವುದರಿಂದ ಈ ಕುರಿತು ಏನಾದರೊಂದು ನಿರ್ದೇಶನ ಇಲ್ಲಿಂದ ಹೋಗಬೇಕು.

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಾಮಯ್ಯನವರು ಪ್ರಸ್ತಾಪಿಸಿರುವ ಪ್ರಶ್ನೆ ಬಹಳ ಗಂಭೀರವಾದುದೆಂದು ನಾನು ಒಪ್ಪಿಕೊಳ್ಳುತ್ತೇನೆ. ಇದು ಸದಸ್ಯರ ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿರುವುದರಿಂದ ಈ ವಿಷಯ ಕುರಿತಂತೆ ಈಗಾಗಲೇ ನಾನು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿರುವ ಶ್ರೀ ಚಂದ್ರೇಗೌಡರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದು, ಉದ್ಭವಿಸಿರುವ ಸಮಸ್ಯೆಯನ್ನು ಯಾವ ರೀತಿ ಪರಿಹರಿಸಬೇಕೆಂದು ಬಗ್ಗೆ ಪ್ರಯತ್ನಿಸುತ್ತಿದ್ದೇವೆ. ಇದು ಹೊಸತಲ್ಲ. ಒಂದು ತಿಂಗಳ ಹಿಂದೆ ಕುಣಿಗಲ್‌ನಲ್ಲಿ ನಡೆದಂಥ ಪ್ರಕರಣ ಪತ್ರಿಕೆಗಳಲ್ಲಿ ವರದಿಯಾದ ತಕ್ಷಣ ನಾನು ಹಾಗೂ ಚಂದ್ರೇಗೌಡರಿಬ್ಬರೂ ಕುಳಿತುಕೊಂಡು ಏನು ಮಾಡಬೇಕೆಂಬುದಕ್ಕೆ ಮೊದಲ ಸುತ್ತಿನ ಮಾತುಕತೆ ನಡೆಸಿದ್ದೇವೆ. ಏಕೆಂದರೆ, ರಾಜ್ಯಾಂಗದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಈ ಮೂರೂ ಅಣ್ಣ-ತಮ್ಮಂದಿರಿದ್ದಂತೆ. ಈ ಮೂರು ಅಂಗಗಳು ಅಣ್ಣ-ತಮ್ಮಂದಿರಂತೆಯೇ ನಡೆದುಕೊಳ್ಳಬೇಕು. ತಮಗೆ ಈ ಕುರಿತು ಉದಾಹರಣೆ ಹೇಳುವುದಾದರೆ, 26 ವರ್ಷಗಳ ಹಿಂದೆ ನಾನು ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದಾಗ ನನಗೂ ಹಾಗೂ ಅಂದಿನ ಮುಖ್ಯ ನ್ಯಾಯಾಧೀಶರಿಗೂ ಯಾವುದೋ ಒಂದು ವಿಚಾರವಾಗಿ ವಿವಾದವುಂಟಾಗಿ

ಪತ್ರಿಕಾಗೋಷ್ಠಿಗಳನ್ನು ನಡೆಸಿ, ನಡೆಸಿ ಕೊನೆಗೊಮ್ಮೆ ಅವರೂ- ನಾವು ಯಾವುದೋ ಒಂದು ವ್ಯವಸ್ಥೆಗೆ ಬಂದು ವಯಾ ಮೀಡಿಯಾ ಮಾಡಿಕೊಂಡು ವಿಷಯವನ್ನು ಕೊನೆಗೊಳಿಸಲಾಯಿತು. ಅದೇ ರೀತಿ ಇದನ್ನೂ ಮಾಡಬೇಕು.

ಶ್ರೀ ಡಿ.ವಿ.ಸದಾನಂದಗೌಡ: Justice delayed is justive denied. ನಾವು ನಿಮ್ಮ ಮುಂದೆನಮ್ಮ ಕೇಸನ್ನು ಮಂಡಿಸಿದ್ದೇವೆ. ತಾವು ಕಾನೂನನ್ನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರೊಂದು ಮೊದಲ ಸುತ್ತಿನ ಮಾತುಕತೆ ನಡೆಸಿದ್ದೇವೆಂದು ತಿಳಿಸಿದಿರಿ. ಮಾತುಕತೆಯ ಸುತ್ತುಗಳು ಬಹಳವಾದರೆ ನಮಗೆ ಕಷ್ಟವಾಗುತ್ತದೆ. ಆದುದರಿಂದ, ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ತಾವು ವಕೀಲರಾಗಿದ್ದು ಕೋರ್ಟಿಗೆ ಹೋದರೆ ಅಡ್ಜರ್ನ್‌ಮೆಂಟ್ ಕೇಳುವುದಿಲ್ಲವೇ? ಈಗಾಗಲೇ ನಾನು ಹಾಗೂ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮೊದಲ ಸುತ್ತಿನ ಮಾತುಕತೆ ನಡೆಸುತ್ತಿದ್ದೇವೆ. ಇವೊತ್ತು ಮಾನ್ಯ ಸದಸ್ಯರಾಗಿರುವ ತಮ್ಮೆಲ್ಲರ ಕಳಕಳಿ ಏನಿದೆ, ಇದರ ಬಗ್ಗೆ, ನಾನು ಹಾಗೂ ಚಂದ್ರೇಗೌಡರು ಕುಳಿತುಕೊಂಡು ಮಾತನಾಡಿ ಯಾವುದಾದರೊಂದು ಇತ್ಯರ್ಥ ಮಾಡುವುದಕ್ಕೆ ಏರ್ಪಾಟು ಮಾಡುತ್ತೇವೆ. ಆದಕಾರಣ, ಈ ವಿಷಯವನ್ನು ಇಲ್ಲಿಗೆ ಮುಕ್ತಗೊಳಿಸಬೇಕು.

ಶ್ರೀ ವೈ.ಕೆ. ರಾಮಯ್ಯ: ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕಿಂತ ಮುಂಚಿತವಾಗಿ ನಾನು ಎಲ್ಲಾ ವಿಷಯಗಳಲ್ಲೂ ಸ್ವಲ್ಪ ಎಚ್ಚರಿಕೆ ವಿಸುವವನಾದ್ದರಿಂದ ಒಂದು ಕಡೆಯಿಂದ ಎರಡನ್ನೂ ಓದಿದ್ದೇನೆ. ನಾನು ಭಾರತದ ಸಂವಿಧಾನವನ್ನು ಓದಿ ಬಹಳ ದಿವಸಗಳಾಗಿತ್ತು That great man has made me to re-read the Indian Constitution again particularly the Chapter, Judiciary.

ಅಷ್ಟೇ ಅಲ್ಲ, ನಿಮ್ಮ ನಿಯಮಾವಳಿಗಳನ್ನು ಸಹ ಪೂರ್ತಿಯಾಗಿ ಓದಿದ್ದೇನೆ.

ಅಧ್ಯಕ್ಷರು: ಆರ್ಟಿಕಲ್ 211 ಏನು ಹೇಳುತ್ತದೆ ಎಂಬುದನ್ನು ನೋಡಿ.

ಶ್ರೀ ವೈ.ಕೆ. ರಾಮಯ್ಯ: ನನಗಾಗಿರುವ ಅವಮಾನವನ್ನು ಹೇಳುವುದಕ್ಕೆ ಅವಕಾಶ ಮಾಡಿ ಕೊಡಿ. ನಿಮ್ಮ ನ್ಯಾಯಾಂಗದ ಬಗ್ಗೆಯಾಗಲಿ, ನ್ಯಾಯಾಧೀಶರ 'ಬಗ್ಗೆಯಾಗಲಿ ನಾನು ಮತನಾಡುವುದಿಲ್ಲ, ಅವರಿಗೆ ಅವಮಾನ ಮಾಡುವುದಿಲ್ಲ. ನನಗಾಗಿರುವ ಅವಮಾನ, ಆಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆಯೆಂದು ತಾವೇ ಹೇಳಿದ್ದೀರಿ. ಇನ್ನು ನಾನೇನು ಮಾಡಬೇಕು? What Should I do.

(Interruptions)

ಅಧ್ಯಕ್ಷರು: ಇದು ಬಹಳ ಗಂಭೀರವಾದ ಪ್ರಶ್ನೆಯೆಂದು ನಾನು ಆಗಲೇ ಹೇಳಿದ್ದೇನಲ್ಲ, ಪುನಃ ಏಕೆ ಮಾತನಾಡುತ್ತಿದ್ದೀರಿ? ಉದ್ಭವಿಸಿರುವ ಸಮಸ್ಯೆ ಕುರಿತು ಏನು ದಾರಿ ಕಂಡುಹಿಡಿಯಬೇಕೆಂಬ ಕುರಿತು ನಮಗೂ ದಾರಿ ಇದೆ. We cannot take a decision here alone. Please go through Article 211?

" Restriction on discussion in the Legislature: No discussion shall take place in the Legislature of the State with respect to conduct of any Judge of the Supreme Court or of Nigh Court in the discharge of his duties."

(Interruptions)

SRI Y.K. RAMAIAH : Listen to me for a moment.

Mr.SPEAKER : I tola dyou that we are going to solve the problem.

SRI. Y.K. RAMAIAH : You do whatever you like.But allow me to make my submission.

(Interruptions)

Mr.SPEAKER : We are going to solve this problem. Otherwise, I will come before this House. ನಮ್ಮಿಂದ ಆಗುವುದಿಲ್ಲವೆಂದಾಗ ನಿಮ್ಮ ಬಳಿ ಬಂದು ಹೇಳುತ್ತೇವೆ.

(Interruptions)

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಾವು ಎರಡು ಅಂಶಗಳನ್ನು ಪ್ರಸ್ತಾಪಿಸಿದಿರಿ. ಮೊದಲನೆಯದು, ಆರ್ಟಿಕಲ್ 211 ಓದಿದ್ದು. ಎರಡನೆಯದು, ಮಾನ್ಯ ಹಿರಿಯ ಸದಸ್ಯರಾಗಿರುವ ರಾಮಯ್ಯನವರಿಗೆ ಬಂದಿರದ ಸಮಸ್ಯೆ ಹಾಗೂ ಆ ತರಹ ಬರುವ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕೆನ್ನುವ ಬಗ್ಗೆ. ಪರಿಹಾರ ಮಾಡುವುದು ಒಂದು ಅಂಶವಾದರೆ , ಮತ್ತೊಂದು ಶಾಸಕರಿಗೆ ಹಕ್ಕು ಇದೆಯೇ? ಇಲ್ಲವೇ? ಎನ್ನುವುದು ಬಹಳ ಪ್ರಾಮಾಣಿಕವಾದ ಪ್ರಶ್ನೆ.

ಅಧ್ಯಕ್ಷರು : ಹಕ್ಕು ಇಲ್ಲದಿದ್ದರೆ ಮಾತನಾಡುವುದಕ್ಕೆ ನಾನು ಅವಕಾಶವನ್ನೇ ಕೊಡುತ್ತಿರಲಿಲ್ಲ. ಮಾನ್ಯ ಸುರೇಶ್‌ಕುಮಾರ್‌ರವರೆ, ತಾವು ಓದುತ್ತಿರುವ ಆರ್ಟಿಕಲ್ 212 ಸಹ ನನಗೆ ಗೊತ್ತು. ಮುಖ್ಯ ನಾಯಾಧೀಶರ ಬಗ್ಗೆ ಮಾತನಾಡಬೇಕಾಗಿತ್ತೆಂದು ನ್ಯಾಯವಾದ ರೀತಿಯಲ್ಲಿ ಅವರು ನನಗೆ ಮೊದಲೇ ನೋಟೀಸ್ ಕೊಡಬೇಕಾಗಿತ್ತು. He should have given a notice to me according to the Rules.

ಶ್ರೀ ಎಸ್.ಸುರೇಶ್‌ಕುಮಾರ್ : ಈಗ ನನ್ನ ಮುಂದೆ ಒಂದು ಸಮಸ್ಯೆ ಇದೆ. ಏನೆಂದರೆ, ಬೆಂಗಳೂರಿನಲ್ಲಿ ಬಹಳಷ್ಟು ದೊಡ್ಡ ಜಾಗವಾಗಿರುವ ಕಬ್ಬನ್ ಪಾರ್ಕ್ ಬಹಳ ವರ್ಷಗಳಿಂದ ಇದೆ. ಇವೊತ್ತಿನ ಸಿಟ್ಟಿಂಗ್ ಹೈಕೋರ್ಟ್ XXX ಎಂದು ಸರ್ಕಾರಕ್ಕೆ ಕಾಗದ ಬರೆದಾಗ ಅದನ್ನು ಪ್ರಸ್ತಾಪಿಸಬೇಕೇ? ಅಥವಾ ಬೇಡವೇ?

ಅಧ್ಯಕ್ಷರು : ಅದೆಲ್ಲಾ ಇಲ್ಲಿ ಬೇಕಾಗಿಲ್ಲ, ತಾವೇನು ಹೇಳಿದ್ದೀರಿ, ಅದು ವೈಯಕ್ತಿಕವಾಯಿತು. ಸುರೇಶ್‌ಕುಮಾರ್‌ರವರೆ, ನೀವು ಬುದ್ಧಿವಂತರಿದ್ದೀರಿ. (ಅಧಿಕೃತ ವರದಿಗಾರರಿಗೆ ಆದೇಶಿಸುತ್ತಾ) ಅವರು ಹೇಳಿರುವುದನ್ನು ಕಡತದಿಂದ ತೆಗೆದುಹಾಕಿ. We are going to solve this problem. Otherwise. I will come before this House.

ಶ್ರೀ ಎಸ್.ಸುರೇಶ್‌ಕುಮಾರ್ : ಅದನ್ನು ಕಡತದಿಂದ ಏಕೆ ತೆಗೆದುಹಾಕಬೇಕು? ತಾವು ಕಾರಣ ತಿಳಿಸಬೇಕು.

(Interruptions)

ಅಧ್ಯಕ್ಷರು : ಕಡತದಿಂದ ಏಕೆ ತೆಗೆಯಬೇಕೆಂದು ನನಗೆ ಗೊತ್ತಿದೆ. ತಾವು ವೈಯಕ್ತಿಕವಾಗಿ ಹೈ ಕೋರ್ಟ್ ಜಡ್ಜ್ ಬಗ್ಗೆ, ಮತ್ತು ಅವರ ಹೆಂಡತಿಯ ಬಗ್ಗೆ ಮಾತನಾಡುವುದು ಬೇಡ. ಅದನ್ನು ಕಡತದಿಂದ ತೆಗೆದುಬಿಡಿ. ಅದನ್ನು ದಾಖಲಿಸಬೇಡಿ. We are going to solve that problem.

ಶ್ರೀ ಎಸ್.ಸುರೇಶ್‌ಕುಮಾರ್ : ಆ ವಿಷಯವನ್ನು ಮತ್ತೆಲ್ಲಿ ಪ್ರಸ್ತಾಪಿಸಬೇಕು?

ಅಧ್ಯಕ್ಷರು : ಎಲ್ಲಿಯಾದರೂ ಪ್ರಸ್ತಾಪಿಸಿಕೊಳ್ಳಿ, ನೀವು ಹೈ ಕೋರ್ಟ್ ಜಡ್ಜ್ ಬಗ್ಗೆಯಾಗಲಿ, ಅವರ ಸಂಸಾರದ ಬಗ್ಗೆಯಾಗಲೀ ಇಲ್ಲಿ ಮಾತನಾಡಬಾರದು. ಇದು ನನ್ನ ರೂಲಿಂಗ್. ಆ ಕುರಿತಾದ ವಿಷಯವನ್ನು ಎಲ್ಲಿ ಪ್ರಸ್ತಾಪಿಸಬೇಕೆಂಬುದು ನಿಮಗೆ ಗೊತ್ತಿದೆ. I am not supposed to say anything about that. I am in no way concerned.

ಶ್ರೀ ಎಸ್.ಸುರೇಶ್ ಕುಮಾರ್ : ಅವರು ಜಡ್ಜ್‌ಮೆಂಟ್ ಕೊಡುವಾಗ ಅವರ ಕಂಡಕ್ಟ್ ಬಗ್ಗೆ ಇಲ್ಲಿ ಮಾತನಾಡುವಂತಿಲ್ಲ, ಅವರು ಮಾಡಿರುವ ತಪ್ಪುಗಳನ್ನೂ ಸಹ ಇಲ್ಲಿ ಹೇಳುವಂತಿಲ್ಲವೇ?

ಅಧ್ಯಕ್ಷರು : ಅದರ ಬಗ್ಗೆ ನೋಡೋಣ. It has been expunged. Afterwards, let us see. We are going to solve that problem.

ಶ್ರೀ ಎಸ್.ಸುರೇಶ್‌ಕುಮಾರ್ : ಹಾಗಾದರೆ ವಾಪಸ್ಸು ತೆಗೆದುಕೊಳ್ಳುತ್ತೀರಾ?

Mr. SPEAKER : We are going to solve that problem Let us examine.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್ : ಅಧ್ಯಕ್ಷರೆ, ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ನಮ್ಮಲ್ಲಿ ಕೋರ್ಟ್ ಕಟ್ಟಡದ ಪ್ರಾರಂಭೋತ್ಸವ ಸಮಾರಂಭವಿದ್ದು, ಅವರು ಏನು ಹೇಳಿದ್ದಾರೆಂದರೆ, ನಾವು ಕಾರ್ಯಕ್ರಮ ಮುಗಿಸಿ ಹೋಗುತ್ತೇವೆ, ಅನಂತರ ಬೇಕಾದರೆ ಶಾಸಕರನ್ನು ಕರೆದು ಸಣ್ಣಪುಟ್ಟ ಸಮಾರಂಭ ಏರ್ಪಡಿಸಿಕೊಳ್ಳಿ ಎಂದು. ಅದೇ ಕೆಲಸವನ್ನು ನಾನು ಮಾಡಿದ್ದರೆ, ನಾವು ಅವರಿಗಿಂಥ ಮೊದಲು ಕೋರ್ಟ್ ಕಟ್ಟಡದ ಪ್ರಾರಂಭೋತ್ಸವ ಮಾಡಿ ಅನಂತರ ಬೇಕಾದರೆ ಹೈಕೋರ್ಟ್ ಜಡ್ಜ್‌ಸ್‌ನ್ನು ಕರೆಸಿ ಸಮಾರಂಭ ಏರ್ಪಡಿಸಿಕೊಳ್ಳಿ ಎಂದಿದ್ದರೆ ಸಂಘರ್ಷವಾಗುತ್ತದೆ.

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

Mr. SPEAKER : I will inform the Law Minister.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಈ ವಿಷಯ ತೀರ್ಮಾನವಾಗುವವರೆಗೂ ಕಡೂರಿನ ಸಿವಿಲ್ ನ್ಯಾಯಾಲಯ ಕಟ್ಟಡದ ಪ್ರಾರಂಭೋತ್ಸವವನ್ನು ಮಾಡಬಾರದೆಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಒಂದು ಆದೇಶ ಕೊಡಬೇಕು.

Mr. SPEAKER : I will inform the Law Minister.

ಶ್ರೀ ಬಿ.ಸೋಮಶೇಖರ್ : ರಾಜ್ಯದಲ್ಲಿರುವ ಯಾವುದೇ ಒಂದು ಕೋರ್ಟ್ ಕಟ್ಟಡದ ಪ್ರಾರಂಭೋತ್ಸವ ಮಾಡುವುದನ್ನು ಸದ್ಯಕ್ಕೆ ನಿಲ್ಲಿಸಬೇಕು.

Mr. SPEAKER : That also I will inform the Law Minister.

ಶ್ರೀ ವೈ.ಕೆ. ರಾಮಯ್ಯ : ನಾನು ಈ ವಿಷಯವನ್ನು ಪ್ರಸ್ತಾಪಿಸುವುದಕ್ಕಿಂತ ಮೊದಲು ಅತ್ಯಂತ ಎಚ್ಚರಿಕೆಯಿಂದ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಸ್ವಲ್ಪ ಗಮನಿಸಿದ್ದೇನೆ. ಆದಕಾರಣವೇ ನಾನು ಅತಿ ಎಚ್ಚರಿಕೆಯಿಂದ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ನನ್ನ ಪ್ರಸ್ತಾವನೆ ಏನೆಂದರೆ, ನನಗಾದಂಥ ಅಪಮಾನ, ಒಬ್ಬ ಶಾಸಕನಾಗಿ ನನಗೆ ಸಲ್ಲಬೇಕಾದಂಥ ಸ್ಥಾನ-ಮಾನ್ಯಗಳು ಸಲ್ಲದೆ ಹೋದಂಥ ವಿಷಯವನ್ನಷ್ಟೆ ಪ್ರಸ್ತಾಪಿಸುತ್ತಿದ್ದೇನೆಯೇ ಹೊರತು ಯಾವುದೇ ನ್ಯಾಯಧೀಶರ, ಅವರ ವೈಯಕ್ತಿಕವಾದ ನಡವಳಿಕೆ ಬಗ್ಗೆಯಾಗಲಿ, ಅವರು ತೆಗೆದುಕೊಂಡಂಥ ತೀರ್ಮಾನದ ಬಗ್ಗೆಯಾಗಲಿ ನಾನು ಚರ್ಚಿಸುತ್ತಿಲ್ಲ. ತಮಗೆ ಮತ್ತು ಸರ್ಕಾರಕ್ಕೆ ನನ್ನ ಅಹವಾಲು ಇಷ್ಟೆ; ಒಬ್ಬ ಶಾಸಕನಾಗಿ ನನಗಾಗಿರುವ ಅನ್ಯಾಯಕ್ಕೆ ಅಪಮಾನಕ್ಕೆ That is why I said, the entire society looks at politicians with contemptuous attitude. Are these people coming from "Swarga"? Have they fallen down from "Swarga - Heaven "? I am also brought up with these people? I have practised for 18 long years. I have seen people like Hombegowds. B.M. Chandrashekaaiah. I was the President of Bar Assosiciation for 18 years.ಸುಬ್ಬಾರೆಡ್ಡಿಯವರು ಕುಳಿತಿದ್ದರು. ಸಮಾಜದಲ್ಲಿ ನ್ಯಾಯಧೀಶರಿಗೆ, ಒಬ್ಬ ಅಧಿಕಾರಿಗೆ, ಒಬ್ಬ ಸ್ವಾಮೀಜಿಗೆ, ಒಬ್ಬ ಸಾಮಾನ್ಯ ಮನುಷ್ಯನಿಗೆ, ಎಲ್ಲರಿಗೂ ಕೂಡ ಅವರವರದೇ ಆದಂಥ ಒಂದು ಧರ್ಮ, ನೀತಿಯ ಚೌಕಟ್ಟು ಇದೆ. ಆವೂ ಕೂಡ ರಾಜಕಾರಣಿಗಳಾಗಿದ್ದು, ರಾಜಕಾರಣಿಗಳಲಿ ಕೆಲವರಾದರೂ ನೀತಿಯ ಚೌಕಟ್ಟಿನಲ್ಲಿ ಬದುಕುತ್ತಿರುತ್ತಾರೆನ್ನುವ ಅರಿವು ಈ ಜನರಿಗೆ ಇರಬೇಕಾಗುತ್ತದೆ. ನಾನು ಹದಿನೆಂಟು ವರ್ಷಗಳ ಕಾಲ ಬಾರ್ ಅಸೋಸಿಯೇಷನ್‌ನ ಅಧ್ಯಕ್ಷನಾಗಿದ್ದೆ, ಆದರೆ ಪತ್ರಿಕೆಗಳಲಿ ನನ್ನನ್ನು ಬಿಟ್ಟು ಕಾರ್ಯಕ್ರಮ ಮಾಡಿ ಎಂದು ಚೀಫ್ ಜೆಸ್ಟೀಸ್‌ನಿಂದ ಅಪ್ಪಣೆಯಾಗಿದೆಯೆಂದು ಬರುತ್ತದೆ. ಇದನ್ನು ನೋಡಿ ನಾನು ಬದುಕಿರಬೇಕೋ ಅಥವಾ ದೊಡ್ಡ ಕೆರೆಗೆ ಬೀಳಬೇಕಾಗಿತ್ತೆ? ಇದರ ಬಗ್ಗೆ ಮಾತನಾಡಬೇಡಿ ಎಂದರೆ ಇನ್ನು ಎಲ್ಲಿ ಮಾತನಾಡಬೇಕು? ಆದ್ದರಿಂದ ನನ್ನ ಪ್ರಾರ್ಥನೆ ಏನೆಂದರೆ Atleast now it is time for us, for the law making faculty to come out and to see that these people learn a lesson to the extent that they should not tarnish our image. They should not insult us.

ತಾವು ಅಲ್ಲಿ ಕುಳಿತಿರುವುದರಿಂದ ತಾವು ಸದಸ್ಯರಲ್ಲ ಆದರೆ ಅಧ್ಯಕ್ಷರು ಅಷ್ಟೆ. ಈ ಸದನದ ಸದಸ್ಯರು ತಾವೂ ಕೂಡ ಆಗಿರುವುದರಿಂದ ನೋವಿನಿಂದ ಒಂದು ಮಾತನ್ನು ಹೇಳುತ್ತೇನೆ. ಸಾವಿರಾರು ಕೋಟಿ ರೂಪಾಯಿಗಳನ್ನು ತಿಂದು ಕಟ್ಟಕಡೆಯಲ್ಲಿ ನಮ್ಮ ಮುಂದೆ ಕೈ ಕಟ್ಟಿಕೊಂಡು ನಿಂತುಕೊಳ್ಳುವವರನ್ನೂ ನಮ್ಮ ಪಕ್ಕದಲ್ಲಿ ಕೂರಿಸಿಕೊಳ್ಳಬೇಕಾ?

ಅಧ್ಯಕ್ಷರು : ವಿವರಣೆಗೆ ಹೋಗಬೇಡಿ. ನಾವು ಈ ಸಮಸ್ಯೆಯನ್ನು ಪರಿಹಾರ ಮಾಡುವ ಕೆಲಸ ಪ್ರಾರಂಭಿಸಿದ್ದೇವೆ. ಹಾಗಿರುವಾಗ ಏಕೆ ಇದರ ಬಗ್ಗೆ ವಿವರಣೆಗೆ ಹೋಗುತ್ತೀರಿ?

ಶ್ರೀ ವೈ.ಕೆ. ರಾಮಯ್ಯ : ತಾವು ನಮ್ಮ ನೋವನ್ನೂ ಕೇಳಿ, ತಾವು ಅವರು, ಇವರನ್ನು ಡಿಫೆಂಡ್ ಮಾಡಿಕೊಳ್ಳಲು ಆಗುವುದಿಲ್ಲ. ತಾವು ಮೊದಲು ನಮ್ಮನ್ನು ಡಿಫೆಂಡ್ ಮಾಡಿಕೊಳ್ಳಬೇಕು.

You are not here to protect some one. One are here to protect us.

Mr.SPEAKER : I have already told you. We are discussing the matter with the Law Minsiter. ಮೊದಲ ಸುತ್ತಿನ ಮಾತುಕತೆಯಾಗಿದೆ, ಎರಡನೆ ಸುತ್ತಿನ ಮಾತಿಗೆ ಕುಳಿತುಕೊಳ್ಳಬೇಕು.

ಶ್ರೀ ವೈ.ಕೆ. ರಾಮಯ್ಯ : ತಾವು ಏನಾದರೂ ಮಾಡಿ, ಏನು ಬೇಕಾದರೂ ಮಾಡಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಕಾನೂನು ಸಚಿವರ ಜೊತೆ ಈ ವಿಚಾರದಲ್ಲಿ ನಾನೂ ಮಾತನಾಡಿದ್ದೇನೆ. ಅವರು ಇದರ ಬಗ್ಗೆ ಏನೂ ಮಾಡಲು ಆಗುವುದಿಲ್ಲ. ಸದನದಲ್ಲಿ ಪ್ರಸ್ತಾಪ ಮಾಡಿ ಎಂದು ನನಗೆ ಹೇಳಿದ್ದಾರೆ. ನಾನೂ ಮಾನ್ಯ ಮುದ್ದಹನುಮೇಗೌಡರು ಇದರ ಬಗ್ಗೆ ಹೇಳಿದಮೇಲೆ ಕಾನೂನು ಸಚಿವರು ಈ ಸಭೆಗೆ ಹಾಜರಾಗುವುದನ್ನು ತಪ್ಪಿಸಿಕೊಂಡಿದ್ದಾರೆ. ಸಭೆಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಪ್ರತಿಯೊಂದು ಸರ್ಕಾರಿ ಕಾರ್ಯಕ್ರಮವೂ ಶಾಸಕರ ಅಧ್ಯಕ್ಷತೆಯಲ್ಲಾಗಬೇಕೆಂದು ಸರ್ಕಾರ ನಿಯಮಾವಳಿಯನ್ನೇನೋ ಮಾಡಿದೆ. ಅದಕ್ಕೆ ನಾವೂ, ನೀವೂ ಬದ್ಧರಾಗಿದ್ದೇವೆ. ಆದರೆ ಇವರುಗಳೇಕೆ ಅದಕ್ಕೆ ಬದ್ಧರಾಗುವುದಿಲ್ಲ? ಇವರುಗಳೇನು ಸ್ವರ್ಗದಿಂದ ಇಳಿದು ಬಂದಿದ್ದಾರ ಇವರ ಜೊತೆ ನಾನು ವಕೀಲಿ ವೃತ್ತಿ ಮಾಡಿಕೊಂಡಿದ್ದರೆ ಇಷ್ಟೊತ್ತಿಗೆ ನಾನೂ ಚೀಫ್ ಜಸ್ಟೀಸ್ ಆಗುತ್ತಿದ್ದೆ. ನಮ್ಮ ಶಾಸಕರುಗಳಲ್ಲಿ ಐವತ್ತು ಭಾಗಕ್ಕಿಂತ ಹೆಚ್ಚು ಸದಸ್ಯರು ವಕೀಲರುಗಳು. ಈ ನಾಡಿನಲ್ಲಿರು ನ್ಯಾಯಧೀಶರಷ್ಟೇ ನ್ಯಾಯಾಲಯದಲ್ಲಿ ಕೆಲಸ ಮಾಡುವ ನ್ಯಾಯವಾದಿಗಳೂ ಪ್ರಮುಖರಿದ್ದಾರೆ; ಪ್ರಾಮಾಣಿಕರಿದ್ದಾರೆ, ನೀತಿವಂತರಾಗಿದ್ದಾರೆ. ಮೇಲೆ ಕುಳಿತಿರುವ ಜಡ್ಜ್‌ಗಿಂತಲೂ ಹೆಚ್ಚಿನ ಇಂಟಿಗ್ರಿಟಿ, ಪ್ರಾಮಾಣಿಕತೆಯನ್ನು ಇಟ್ಟುಕೊಂಡಿರುವ ನ್ಯಾಯವಾದಿಗಳಿದ್ದಾರೆ, ಶಾಸಕರುಗಳಿದ್ದಾರೆ. ಈ ಪರಿಸ್ಥಿತಿ ಇದ್ದರೂ ಕಾರ್ಯಕ್ರಮಕ್ಕೆ ಯಾರನ್ನೂ ಕರೆಯಬೇಡಿ. ಶಾಸಕರು ಬರಲಿ ಆದರೆ ಮುಂದಿನ ಸಾಲಿನಲ್ಲಿ.

ಅಧ್ಯಕ್ಷರು : ಕಾನೂನು ಸಚಿವರನ್ನು ಕರೆಸುತ್ತಿದ್ದೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಕಾನೂನು ಸಚಿವರ ಹತ್ತರ ನಮ್ಮ ಅಹವಾಲನ್ನು ಹೇಳಿಕೊಳ್ಳಲು ನಾವು ತಯಾರಿಲ್ಲ. ಶಾಸಕರ ಹಕ್ಕಿಗೆ ಭಾದ್ಯತೆ ಬಂದಿರುವುದನ್ನು ತಮ್ಮ ಮುಂದಿಡುತ್ತಿದ್ದೇವೆ. ಶಾಸಕರುಗಳ ಹಕ್ಕನ್ನು ಯಾವ ರೀತಿಯಲ್ಲಿ ಕಾಪಾಡಬೇಕು ಎಂಬುದು ತಮ್ಮ ಮುಂದಿರುವ ಪ್ರಶ್ನೆ. ಇಲ್ಲಿರುವ ಮುಖ್ಯವಾದ ಪ್ರಶ್ನೆ ಏನೆಂದರೆ Whether the right of a Legislator is infringed or not? That is the question before us.

ಶ್ರೀ ವೈ.ಕೆ.ರಾಮಯ್ಯ : ನಾನು ಇದರಿಂದ ಎಷ್ಟು ನೋವನ್ನು ಅನುಭವಿಸಿದ್ದೇನೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಶಾಸಕರನ್ನು ಕರೆಯಿರಿ, ಮುಂದಿನ ಸಾಲಿನಲ್ಲಿ ಖುರ್ಚಿ ಹಾಕಿ ಕೂರಿಸಿ ಎಂದರೆ ಅದೇನು ಅವರ ಮಗಳ ಮದುವೆಯೇ?

Is he inviting for his daughter's marriage?

ಯಾರಾದರೂ ಮನೆಯ ತಿಥಿಗೆ ನನ್ನನ್ನು ಕರೆಯುತ್ತಿದ್ದಾರೆಯೇ?

He must know that it is public function for which Iam entitled to preside over, the function. As a Legislator I am in a better position than him. He may be the Chief Justice in the Judiciary. But I am the supreme authority in the Legislature. If he does not know, we are here to teach a lesson or the Government should take steps of you should take steps to protect us. That is our Prayer. ರಾಜಕಾರಣಿಗಳೆಂದರೆ ಸೊಪ್ಪಿನ ಕಂತೆಯೇ? ಶಾಸಕರುಗಳೆಂದರೆ ಸೊಪ್ಪಿನ ಕಂತೆಯೇ? ಈ ದೇಶದ ಒಬ್ಬ ನ್ಯಾಯಾಧೀಶ, ಬುದ್ಧಿಜೀವಿ ಒಬ್ಬ ರಾಜಕಾರಣಿಯನ್ನು ಇಷ್ಟು ಕ್ಲಿಷ್ಟವಾಗಿ ಕಾಣುವುದಾಗಿದ್ದರೆ. it is said " I have come to politics as a first preference. Mr.Muddahanumegowds was the Judicial Officer. He was in Judiciay as a Judge for amny years. Ihave practised law in personal life. I had better integrity than these judges. What business this fello has got to comment on us and to refuse to a Legislator a seat in the function for which I am legitimately elligible. ಅದಕ್ಕಾಗಿ ನನ್ನ ಪ್ರಾರ್ಥನೆ ಏನೆಂದರೆ, ಇದರ ಬಗ್ಗೆ ಕಾನೂನು ಸಚಿವರಾದರೂ ಏನಾದರು ಕ್ರಮ ತೆಗೆದುಕೊಳ್ಳಲಿ, ನೀವಾದರೂ ಏನಾದರೂ ಕ್ರಮ ತೆಗೆದುಕೊಳ್ಳಿ, ಖಾಜಿ ನ್ಯಾಯ ಮಾಡಿ, ಕಾನೂನು ನ್ಯಾಯ ಮಾಡಿ ಅದಕ್ಕೆ ನನ್ನ ಅಭ್ಯಂತರವಿಲ್ಲ. ನಮಗೆ ಆಗಿರುವ ಅಪಮಾನಕ್ಕೆ ತಾವು ರಕ್ಷಣೆ ಕೊಡಲು ಮುಂದೆ ಬರಬೇಕಾಗುತ್ತದೆ. ಇದೊಂದು ನನ್ನ ಒತ್ತಾಯ. ಶಾಸಕರು ಇಲ್ಲಿ ಒಂದು ಕಟ್ಟಡವನ್ನು ಕಟ್ಟಿದರ ಏ ಪರಿಸರ ನಾಶವಾಗಿ ಹೋಗುತ್ತದೆ. ಆದರೆ ಕಬ್ಬನ್ ಪಾರ್ಕ್‌ನಲ್ಲಿ ಹೈಕೋರ್ಟ್ ಅನೆಕ್ಸರ್ ಕಟ್ಟಿದರೆ ಪರಿಸರ ನಾಶವಾಗುವುದಿಲ್ಲವೆ? ಇದೆಲ್ಲ ಏನು? ಇಲ್ಲಿ ಶಾಸಕರುಗಳಿಗೆ ಕೊಠಡಿಗಳನ್ನು ಕಟ್ಟಿಕೊಟ್ಟರೆ ಪರಿಸರ ನಾಶವಾಗಿ ಹೋಗುತ್ತದೆ. ಆದರೆ ಹಾರ್ಟ್ ಆಫ್ ದಿ ಕಬ್ಬನ್ ಪಾರ್ಕ್‌ನಲ್ಲಿ ಒಂದಲ್ಲ ಎರಡು ಎಕರೆಗಳಲ್ಲಿ ಕಟ್ಟಡವನ್ನು ಕಟ್ಟಿದರೆ ಪರಿಸರ ನಾಶವಾಗುವುದಿಲ್ಲವೆ? ಇವರು ನಮಗೆ ನಿಯತ್ತನ್ನು ಹೇಳಿಕೊಡಲು ಬರುತ್ತಾರೆಯೆ? ನೀತಿ, ನ್ಯಾಯವನ್ನು ಹೇಳಿಕೊಡಲು ಬರುತ್ತಾರೆಯೇ? ತಾವು ಬಹಳ ನೊಂದುಕೊಳ್ಳುತ್ತೀರೆಂದು ನಾನು ಹೆಚ್ಚಾಗಿ ಹೇಳಲು ಹೋಗುತ್ತಿಲ್ಲ. ಇವರ ವಿಚಾರಗಳನ್ನು ಬೀದಿಪಾಲು ಮಾಡುವಷ್ಟು ನನ್ನ ಹತ್ತಿರ ಮಾಹಿತಿಗಳು ಇದೆ.

ಅಧ್ಯಕ್ಷರು : ನೊಂದುಕೊಳ್ಳುವ ವಿಚಾರವಲ್ಲ. ನನ್ನ ಇಕ್ಕಟ್ಟಿನ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾವು ಪರಿಸರದ ವಿಚಾರವೇನು ಹೇಳಿದರೊ ಅದರ ವಿಚಾರಣೆ ಪೆಂಡಿಂಗ್‌ನಲ್ಲಿದೆ. ಹಾಗಿರುವಾಗ ಇಲ್ಲಿ ಅದರ ಬಗ್ಗೆ ಚರ್ಚೆಗೆ ಹೇಗೆ ಅವಕಾಶ ಕೊಡಲಿ? ಇದು

ಸಬ್ ಜ್ಯುಡಿಶೀಯಲಾಗುತ್ತದೆ. ಆ ರೀತಿಯಾದ ಪ್ರಶ್ನೆಗಳನ್ನು ಇಲ್ಲಿ ಕೇಳಬಾರದು. ಕೇಸಸ್ ಏನು ಪೆಂಡಿಂಗ್ ಇದೆಯೋ ಅದರ ಬಗ್ಗೆ ದಯಮಾಡಿ ಮಾತನಾಡಬೇಡಿ. It amounts to sub-judice and then we are interferring with their jurisdiction.

ಶ್ರೀ ವೈ.ಕೆ. ರಾಮಯ್ಯ: ನಾನು ಉದಾಹರಣೆಯಾಗಿ ಹೇಳಿದ್ದು. ಮೊಟ್ಟಮೊದಲಿಗೆ ಈ ಸದನದ ಸದಸ್ಯನಾಗಿ, ಎರಡನೆಯದಾಗಿ ಶಾಸನ ಸಭೆಯ ಅಧ್ಯಕ್ಷರಾಗಿ ಈ ಶಾಸನ ಸಭೆಯ ಸದಸ್ಯರ ಮಾನ, ಮರ್ಯಾದೆಯನ್ನು ಕಾಪಾಡುವುದು ತಮ್ಮ ಆದ್ಯ ಕರ್ತವ್ಯ. ತಾವು ಯಾರದ್ದೋ ಮಾನವನ್ನು ರಕ್ಷಣೆ ಮಾಡುವುದಕ್ಕೂ ಮೊದಲು ಸದನದ ಸದಸ್ಯರ ಮಾನ ಮರ್ಯಾದೆಯನ್ನು ಕಾಪಾಡುವುದು ತಮ್ಮ ಆದ್ಯ ಕರ್ತವ್ಯ. ಅದನ್ನು ದಯಮಾಡಿ ಮಾಡಿ.

ಅಧ್ಯಕ್ಷರು : ಶಾಸಕರ ಮಾನ ಮರ್ಯಾದೆಯನ್ನು ಕಾಪಾಡಬೇಕು ಎಂದೇ ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವಲ್ಲ? ಇದರ ಬಗ್ಗೆ ಮೊದಲ ಸುತ್ತಿನ ಮಾತುಕತೆಯಾಗಿದೆ ಎಂದು ಹೇಳಿದ್ದೇನೆಲ್ಲ. ತಾವು ಹೇಳುವುದಕ್ಕೂ ಮೊದಲೇ ಆ ಕೆಲಸ ಪ್ರಾರಂಭ ಮಾಡಿದ್ದೇವಲ್ಲ?

last resort of Scoundrels' ಎನ್ನತಕ್ಕ ಪದವನ್ನು ತೆಗೆದುಹಾಕಿ

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಡೆದಂಥ ಘಟನೆ ಬಾಗಲಕೋಟೆಯಲ್ಲಾಗಿದೆ. ಕಡೂರಿನಲ್ಲಾಗಿದೆ, ನಾಳೆ ಏನಾದರೂ, ಕಾನೂನಿನ ತೊಡಕಾದರೆ, ಅವ್ಯವಹಾರಗಳು ಅಲ್ಲಿ ನಡೆದರೆ ಶಾಸಕರಾದ ನಾವು ಜವಾಬ್ದಾರರಲ್ಲ. ಯತ್ನಾಳ್‌ನಾಯಿ ಎನ್ನತಕ್ಕ ಅತ್ಯಂತ ಹಿರಿಯ ವಕೀಲರೊಬ್ಬರು ನನ್ನ ಸ್ನೇಹಿತರಾಗಿದ್ದರು. ನಾನು ಹೇಳಬೇಕೆಂದು ಹೇಳುತ್ತಿಲ್ಲ, ಆದರೆ ಅವರು ನನಗೆ ನೀನು ಕೈ ಮುಗಿಯುವುದು ಅಲ್ಲಿ ಕುಳಿತಿರುವ ವ್ಯಕ್ತಿಗಳಲ್ಲ, ಅಲ್ಲಿರುವ ಪೀಠಕ್ಕೆ ನೀನು ಕೈ ಮುಗಿಯುವಂಥಾದ್ದು ಎಂದು ಹೇಳಿಕೊಟ್ಟಿದ್ದರು. ಅದನ್ನು ಗಮದಲ್ಲಿಟ್ಟುಕೊಂಡು ನನ್ನ ಎಮೋಷನ್‌ನ್ನು ಕಂಟ್ರೋಲ್ ಮಾಡಿಕೊಳ್ಳುತ್ತಿದ್ದೇನೆ. xxx I can produce documents

(Interruptions)

ಅಧ್ಯಕ್ಷರು : ವಿವರವಾಗಿ ಏಕೆ ಹೋಗುತ್ತೀರ? ಜಡ್ಜ್‌ಗಳ ವೈಯಕ್ತಿಕ ನಡತೆಯ ಬಗ್ಗೆ ಏಕೆ ಮಾತನಾಡುತ್ತೀರಾ ? ತಾವು ದಯಮಾಡಿ ಕ್ಷಮಿಸಿ. ಜನರಲ್ ನೇಚರ್ ಮೇಲೆ ಮಾತನಾಡಿ. ತಮ್ಮ ಹಕ್ಕುಬಾಧ್ಯತೆಯ ಬಗ್ಗೆ ಹೇಳಿದ್ದೀರಿ ಅದನ್ನು ಒಪ್ಪಿಕೊಂಡೆ. ಆದರೆ ಜಡ್ಜ್‌ಗಳ ಮೇಲೆ ಇಂಡಿವಿಜುಯಲ್ ಕಾಂಡೆಕ್ಟ್ ಬಗ್ಗೆ ಮಾತನಾಡುವುದನ್ನು ನಾನು ಅಪ್ರೂವ್ ಮಾಡುವುದಿಲ್ಲ. ಅದನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ವೈ.ಕೆ. ರಾಮಯ್ಯ: ಅವರು ನನ್ನ ಬಗ್ಗೆ ಏಕೆ ಮಾತನಾಡಿದರು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಹಕ್ಕುಬಾಧ್ಯತೆಯನ್ನು ರಕ್ಷಣೆ ಮಾಡುವುದಕ್ಕೆ ತಾವೇನು ಸದನದಲ್ಲಿ ಮಂಡಿಸುತ್ತೀರಿ ಅದನ್ನು ಮಂಡಿಸಬಹುದು. ಆದರೆ ಜಡ್ಜ್‌ಗಳ ನಿವೇಶನದ ಬಗ್ಗೆ ಇತರ ವಿಚಾರಗಳ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ದಯಮಾಡಿ ಅದನ್ನು ಕಡತದಿಂದ ತೆಗೆದುಹಾಕಬೇಕು.

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು: ತೆಗೆದು ಹಾಕಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅದು ಜನರಲ್ ನೇಚರ್ ಆಗಿರುವದನ್ನು ಹೇಳಲಿ. ಇದರ ಬಗ್ಗೆ ನಾನು ಕಾನೂನು ಸಚಿವರನ್ನು ಕರೆಸಿ ಮೊದಲ ಸುತ್ತಿನ ಮಾತುಕತೆಯಾಡಿದ್ದೇನೆಂದು ತಾವು ಈಗಾಗಲೇ ತಿಳಿಸಿರುತ್ತೀರಿ. ಮತ್ತೆ ಕಾನೂನು ಸಚಿವರನ್ನು ತಮ್ಮನ್ನು ಕರೆಸಿ ಮಾತನಾಡಿ ಒಂದು ಇತ್ಯರ್ಥಕ್ಕೆ ಬರುವುದಾಗಿ ತಾವು ತಿಳಿಸಿರುತ್ತೀರಿ. ಆದ್ದರಿಂದ ಇದರ ಬಗ್ಗೆ ಇಲ್ಲಿಗೇ ಬಿಡುವುದು ಸೂಕ್ತವೆಂದು ನನ್ನ ಮನವಿ.

ಶ್ರೀ ವೈ.ಕೆ. ರಾಮಯ್ಯ : ಆದ್ದರಿಂದಲೇ ನಾನು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ. ನನಗೆ ನನ್ನ ಲಿಮಿಟೇಷನ್ ಗೊತ್ತಿದೆ.

ಅಧ್ಯಕ್ಷರು : ಒಂದು ಕಡೆ ಮಾಡುವುದಿಲ್ಲವೆಂದು ಹೇಳುತ್ತೀರಿ, ಮತ್ತೊಂದು ಕಡೆ ಪ್ರಸ್ತಾಪ ಮಾಡುತ್ತಿದ್ದೀರಲ್ಲ;

4.50 ಪಿ.ಎಂ.

ಶ್ರೀ ಸಿ.ಎಂ. ಲಿಂಗಪ್ಪ: ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾಗಿ ರಾಮನಗರದಲ್ಲಿ ನಡೆದ ಒಂದು ಸಂಗತಿಯನ್ನು ನಾನಿಲ್ಲಿ ಹೇಳಬಯಸುತ್ತೇನೆ. ನಾನು ಯಾರನ್ನೂ ಕೂಡ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ರಾಮನಗರದಲ್ಲಿ ಒಂದು ಕೋರ್ಟ್ ಕಟ್ಟಡ ನಿರ್ಮಾಣದ ಶಂಕು ಸ್ಥಾಪನೆ ಆಗಬೇಕಾಗಿತ್ತು.

ಅಧ್ಯಕ್ಷರು: ಮಾನ್ಯ ಸದಸ್ಯರು ಕಾಂಡಕ್ಟ್ ಆಫ್ ಇಂಡುವಿಜುಯಲ್ ಜಡ್ಜ್ ಬಗ್ಗೆ ಏನು ಹೇಳಿದರೋ ಅದನ್ನು ಎಕ್ಸ್‌ಪಂಜ್ ಮಾಡಿ.

ಶ್ರೀ ಸಿ.ಎಂ. ಲಿಂಗಪ್ಪ: ರಾಮನಗರದಲ್ಲಿ ಹೋದ ವರ್ಷ ಒಂದು ಕೋರ್ಟ್ ಕಛೇರಿಯ ಶಂಕು ಸ್ಥಾಪನೆಯಾಗಬೇಕಾಗಿತ್ತು. ಅಲ್ಲಿ ಒಂದು ದೊಡ್ಡ ನಡವಳಿಕೆಯೇ ನಡೆದು ಹೋಯಿತು. ಅಲ್ಲಿ ಜಿಲ್ಲಾ ನ್ಯಾಯಾಧೀಶರು ಈ ಶಂಕು ಸ್ಥಾಪನಾ ಸಮಾರಂಭಕ್ಕೆ ನಾನು ಮುಖ್ಯ ನ್ಯಾಯಧೀಶರನ್ನು ಕರೆದುಕೊಂಡು ಬರುತ್ತಿರುವುದರಿಂದ ಸದರಿ ಸಮಾರಂಭದಲ್ಲಿ ಶಾಸಕರನ್ನು ಪ್ರಿಸೈಡ್ ಮಾಡಿಸುವುದಕ್ಕಾವಗುವುದಿಲ್ಲ ಎಂದು ಹೇಳಿದರು.

ಶ್ರೀ ವೈ.ಕೆ. ರಾಮಯ್ಯ : ನಾನು ಹೇಳಿದ ಮಾತನ್ನು ತಾವು ಎಕ್ಸ್‌ಪಂಜ್ ಮಾಡಿದಿರಿ?

ಅಧ್ಯಕ್ಷರು: ಇವರ ನಿವೇಶನಗಳ ಹಣೆಬರಹ ಎಲ್ಲಾ ನನಗೆ ಗೊತ್ತಿದೆ ಎಂದು ಹೇಳಿದಿರಲ್ಲಾ ಅದನ್ನು ಎಕ್ಸ್‌ಪಂಜ್ ಮಾಡುವಂತೆ ಹೇಳಿದೆ.

ಶ್ರೀ ವೈ.ಕೆ. ರಾಮಯ್ಯ : ನಾನು ಅಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ ಎಂದಷ್ಟೇ ಹೇಳಿದೆ.

ಅಧ್ಯಕ್ಷರು: ಅಂತಹ ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ ಎಂದು ಹೇಳಿದ ಮೇಲೆ ಆ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದಿರಿ?

ಶ್ರೀ ವೈ.ಕೆ. ರಾಮಯ್ಯ : ನಾನು ಪ್ರಸ್ತಾಪ ಮಾಡಿಲ್ಲ. ನಾನು ಹೇಳುವುದು ನಿಮಗೆ ಅರ್ಥವೇ ಆಗುವುದಿಲ್ಲವೇ?

ಅಧ್ಯಕ್ಷರು ಆರ್ಟಿಕಲ್ 211 ರಲ್ಲಿ ಅವರ ಕಂಡಕ್ಟ್ ಬಗ್ಗೆ ನೀವು ಮೆನ್‌ಷನ್ ಮಾಡಬೇಡಿ ಎಂದು ಹೇಳಿದ್ದಾರೆ.

ಶ್ರೀ ವೈ.ಕೆ.ರಾಮಯ್ಯ : ಅಂತಹ ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ.

ಅಧ್ಯಕ್ಷರು : ಪ್ರಸ್ತಾಪ ಮಾಡುವುದಿಲ್ಲ ಎಂದು ಹೇಳುತ್ತಲೇ ಆ ಬಗ್ಗೆ ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ವೈ.ಕೆ. ರಾಮಯ್ಯ : ಅಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ ಎಂದು ನಾನು ಹೇಳಿದೆ.

ಅಧ್ಯಕ್ಷರು : I cannot understand. ಹಾಗಾದರೆ ಪ್ರತಿಯೊಂದನ್ನು ಸಹಾ ನಾನು ಆ ರೀತಿ ಹೇಳುವುದಿಲ್ಲ ಎಂದು ಹೇಳುತ್ತಾ ಹೇಳಿಕೊಂಡು ಹೋಗಬಹುದು.

ಶ್ರೀ ವೈ.ಕೆ. ರಾಮಯ್ಯ : ಅದನ್ನೇ 'ಲಾಯರ್‌ಗಿರಿ' ಎಂದು ಕರೆಯಲಾಗುತ್ತದೆ. That is the quality of a wise advocate

ಅಧ್ಯಕ್ಷರು : ಆಯಿತು, ನೀವು ಹೇಳುವುದನ್ನು ಹೇಳಿ. ನಾನು ಎಕ್ಸ್‌ಪಂಜ್ ಮಾಡುವುದನ್ನು ಮಾಡುತ್ತೇನೆ. ನಾನು ಹೇಳಿದ್ದನ್ನು ನೀವು ತಿಳಿದುಕೊಳ್ಳದಿದ್ದರೆ ನಾನೇನು ಮಾಡಲಿ? ನೀವೂ ಕೂಡ ಒಬ್ಬ ವಕೀಲರು. ಮೇಲಾಗಿ ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್ ಕೂಡ ಆಗಿದ್ದೀರಿ. ಇಷ್ಟಿದ್ದರೂ ನೀವು ತಿಳಿದುಕೊಳ್ಳದಿದ್ದರೆ ಹೇಗೆ?

ಶ್ರೀ ವೈ.ಕೆ.ರಾಮಯ್ಯ : ಅವರ xxx ಮಾಡಿಕೊಂಡಿರುವ ಬಗ್ಗೆ ನಾನು ಮಾತನಾಡುವುದಿಲ್ಲ ಎಂದಷ್ಟೇ ನಾನು ಹೇಳಿದೆ.

ಅಧ್ಯಕ್ಷರು : ಆ ರೀತಿ ನೀವು ಹೇಳಿದ್ದನ್ನೇ ನಾನು ಕಡತದಿಂದ ತೆಗೆಯಿರಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ : ಅದನ್ಯಾಕೆ ತೆಗೆಯುತ್ತೀರಿ?

ಅಧ್ಯಕ್ಷರು : ಏಕೆಂದರೆ ಅದು ರೆಕಾರ್ಡ್ ಆಗುತ್ತದೆಯಲ್ಲವೇ? Whatever you have said will be recorded. ನೀವು ಹೇಳುವುದಿಲ್ಲ ಎಂದು ಹೇಳಿದ ಮೇಲೆ Why are you insisting to be there in the records?

ಶ್ರೀ ವೈ.ಕೆ.ರಾಮಯ್ಯ : Why you are insisting to remove it? ಏಕೆ ತೆಗೆಯುತ್ತೀರಿ? ಏನಿದೆ ಅದರಲ್ಲಿ?

ಅಧ್ಯಕ್ಷರು : It is my power.

ವೈ.ಕೆ.ರಾಮಯ್ಯ : ನಿಮ್ಮ ಪವರ್ ಅನ್ನು ಕಾನೂನಿನ ಪ್ರಕಾರ ಉಪಯೋಗಿಸಬೇಕಾಗುತ್ತದೆ. ಯಾವ ರೂಲ್ಸ್‌ನ ಪ್ರಕಾರ ತೆಗೆಯುತ್ತಿದ್ದೀರಿ?

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು: ದಯವಿಟ್ಟು ನಾನು ಹೇಳುವುದನ್ನು ಕೇಳಿ. ಸಂವಿಧಾನದ 211ನೇ ಅನುಚ್ಛೇದ ಏನು ಹೇಳುತ್ತದೆ ಎಂದರೆ, No discussion shall take place in the Legislature on a subject with respect to conduct of any Judge of the Supreme Court of the High Court in the discharge of his duties."

ಶ್ರೀ ವೈ.ಕೆ. ರಾಮಯ್ಯ: ನಾನು ಇಲ್ಲಿ ಮಾತನಾಡುವಾಗ ಯಾರ ಹೆಸರನ್ನೂ ಕೂಡ ಹೇಳಿಲ್ಲ. ಸುಮ್ಮನೆ ಏನೋ ತಿಳಿದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಇಂತಹ ಸಂದರ್ಭಗಳಲ್ಲಿ ಮಾಜಿ ಸ್ಪೀಕರ್ ಆಗಿದ್ದು ಹಾಲಿ ಹಿರಿಯ ಮಂತ್ರಿಗಳಾಗಿರುವಂತಹ ಮಾನ್ಯ ರಂಗನಾಥ್‌ರವರು ತಮ್ಮ ಅಭಿಪ್ರಾಯವನ್ನು ಹೇಳಿದರೆ ಸದನಕ್ಕೆ ಮತ್ತು ಸದಸ್ಯರುಗಳಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ತಮ್ಮ ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದಂತೆ ತಾವು ಇಲ್ಲಿ ಮಾತನಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ತರಹದ ನೇಚರ್‌ನ ಮಾತುಗಳನ್ನಾಡುವುದನ್ನು ಅಲೋ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರು ಬಹುಶಃ ನನ್ನನ್ನು ಇಕ್ಕಟ್ಟಿಗೆ ಸಿಗಿಸಬೇಕೆಂದು ಈ ಮಾತು ಹೇಳುತ್ತಿದ್ದಾರೆ. ಸಂವಿಧಾನ 211ನೇ ಅನುಚ್ಛೇದದಲ್ಲಿ ಇರುವುದನ್ನು ಸೆಂಟೆನ್ಸ್ ಪೂರ್ತಿ ಓದಿ ನೋಡಿ. ಅಲ್ಲಿ ಏನಿದೆ ಎಂದರೆ, Conduct as presioding officers in the discharge of their duties. ರಸ್ತೆಯಲ್ಲಿ ಹೋಗಬೇಕಾದರೆ ಏನಾದರೂ ಮಾಡಿದರೆ ಅದು ಕಾಂಡಕ್ಟ್ ಆಗುತ್ತದೆಯೇ? ಸದನದ ಹೊರಗೆ ಆಗಿದ್ದರೆ ನಾನು ಒಂದು ಮಾತನ್ನು ಹೇಳುವವನಿದ್ದೆ. In the discharge of his duties as presioding officer, his conduct should not be questioned. That should not be brought before the House. ನಮಗೆ ಫುಲ್ ಪ್ರೊಟೆಕ್ಷನ್ ಇದೆ. to protect the privileges of this august House. A member is a member everywhere. The rights and privileges accompany him. ಅವರ ಮೆಂಬರ್‌ತನ ಹೋಗುವವರೆಗೂ ಕೂಡಾ ಅವರು ಸದಸ್ಯರೇ ಆಗಿರುತ್ತಾರೆ. Rights and Privileges accompany them. ಅವರು ಪ್ರಸ್ತಾಪ ಮಾಡುತ್ತಾ ರಾಜಕಾರಣಿಗಳು ಹೀಗೆ ಇದ್ದಾರೆ ಎಂದು ಹೇಳಿದ್ದನ್ನು ಹೇಳಿದರು. Is it not a reflection of a this august House? Is it not a reflection on the members of this august House? ಅದನ್ನು ನಾವು ಕೇಳಬಾರದೇ? ಅವರು ಆ ಮಾತನ್ನು ಹೇಳಲು ಅರ್ಹರು. ಆ ಮಾತು ಕ್ವಾಲಿಫೈಯಿಂಗ್ ಆಗಿದೆ. ಸುಮ್ಮನೆ ಅವರು ಆ ಮಾತನ್ನು ಹೇಳಿಲ್ಲ. In the discharge of their duties. ಕೋರ್ಟ್‌ನಲ್ಲಿ ಕುಳಿತುಕೊಂಡು ತೀರ್ಮಾನ ಮಾಡುವಾಗ ಅವರು ಏನು ಹೇಳಿದರು, ಏನು ಮಾಡಿದರು, ಹೇಗೆ ಮಾಡಿದರು ಎಂಬುದನ್ನು ನಾವು ಪ್ರಸ್ತಾಪ ಮಾಡಬಾರದು. We have got every right. ಜಡ್ಜ್‌ಮೆಂಟ್ ಅನ್ನು ನಾವು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹಕ್ಕಿದೆ. ನಾನು ಇಲ್ಲಿ ಏನು ಹೇಳಿದರೂ ಕೂಡ I will not be hauled up before a court. I will take refuge of the rights and privileges of this august House.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಹೋದ ವರ್ಷ ರಾಮನಗರದಲ್ಲಿ ಒಂದು ಕೋರ್ಟ್ ಕಟ್ಟಡದ ಶಂಕುಸ್ಥಾಪನೆ ಸಮಾರಂಭ ಏರ್ಪಾಡಾಗಿತ್ತು. ಆ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಸರ್ಕಾರ ದುಡ್ಡು ಕೊಡುತ್ತದೆ. ಜಿಲ್ಲಾ ನ್ಯಾಯಾಧೀಶರೊಬ್ಬರು ಒಂದು ನಿಯಮ ಮಾಡಿದರು. ಮುಖ್ಯ ನ್ಯಾಯಾಧೀಶರು ಮತ್ತು ಇತರ ನ್ಯಾಯಾಧೀಶರು ಸದರಿ ಸಮಾರಂಭಕ್ಕೆ ಬರುತ್ತಿರುವುದರಿಂದ ಆ ಫಂಕ್ಷನ್‌ನಲ್ಲಿ ಎಂ.ಎಲ್.ಎ. ಪ್ರಿಸೈಡ್ ಮಾಡಕೂಡದು, ಅವರು ಮುಖ್ಯ ಅತಿಥಿಯಾಗಿ ಕೆಳಗಡೆ ಕುಳಿತುಕೊಳ್ಳಬೇಕಾಗುತ್ತದೆ ಎಂದು ಅವರು ಮಾಡಿದರು. ರಾಮನಗರದಲ್ಲಿ ಯಾವ ದಿವಸ ಆ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿತ್ತೋ ಅದೇ ದಿವಸ ಕನಕಪುರದಲ್ಲೂ ಕೂಡ ಕೋರ್ಟ್ ಕಟ್ಟಡವನ್ನು ಉದ್ಘಾಟನೆ ಮಾಡತಕ್ಕ ಸಮಾರಂಭವೊಂದು ಏರ್ಪಾಡಾಗಿತ್ತು. ಮಾನ್ಯ ಪಿ.ಜಿ.ಆರ್. ಸಿಂಧ್ಯಾ ಅಂದು ಅಲ್ಲಿ ನಡೆದಂತಹ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರ ಅಧ್ಯಕ್ಷತೆಯಲ್ಲೇ ಅವರು ಅಲ್ಲಿ ಸಮಾರಂಭ ನಡೆಯಿತು. ನಾನು ರಾಮನಗರದಲ್ಲಿ ಕಟ್ಟಡದ ಶಂಕುಸ್ಥಾಪನೆ ಮಾಡಲು ಯಾವ ಮುಖ್ಯ ನ್ಯಾಯಾಧೀಶರೂ ಬೇಡ, ಯಾವ ಜಿಲ್ಲಾ ನ್ಯಾಯಾಧೀಶರೂ ಕೂಡ ಬೇಕಾಗಿಲ್ಲ ಎಂದು ನಿರ್ಧರಿಸಿ ನಾನೇ ಹೋಗಿ ಕಟ್ಟಡದ ಶಂಕುಸ್ಥಾಪನೆ ಮಾಡಿ ಸಮಾರಂಭವನ್ನು ಮುಕ್ತಾಯಗೊಳಿಸಿದೆ. ಇಂತಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ರಾಮಯ್ಯನವರೇ, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಆಗಲೇ ತಾವು ಮಾನ್ಯ ಸದಸ್ಯರಾದ ರಾಮಯ್ಯನವರು ಅರ್ಧ ಗಂಟೆ ಮಾತನಾಡಿದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯಾರವರು ವಿದ್ಯುತ್ ದರ ಏರಿಕೆ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಆರಂಭಿಸಲಿ ಎಂದು ತಾವು ಹೇಳಿದಿರಿ. ಈಗಾಗಲೇ ಮಾನ್ಯ ರಾಮಯ್ಯನವರು ಮಾತನಾಡಲು ಆರಂಭಿಸಿ ಒಂದು ಗಂಟೆಯಾಯಿತು.

ಅಧ್ಯಕ್ಷರು : ಮಾನ್ಯ ರಾಮಯ್ಯನವರು ಅರ್ಧ ಗಂಟೆ ಕೂಡ ಮಾತನಾಡಿಲ್ಲ. ಅವರಿಗಿಂತ ಬೇರೆಯವರು ಮಾತನಾಡಿದ್ದೇ ಹೆಚ್ಚಾಯಿತು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ನಾಳೆಯಾದರೂ ಕೂಡ ಈ ವಿಷಯದ ಮೇಲಿನ ಚರ್ಚೆಯನ್ನು ಪ್ರಥಮ ಆದ್ಯತೆಯಾಗಿ ಕೈಗೆತ್ತಿಕೊಳ್ಳಬೇಕು. ನಾಳೆ ಅಜೆಂಡಾದಲ್ಲಿ ಬೇರೆ ಬೇರೆ ವಿಷಯಗಳು ಬಂದಾಗ ಈ ವಿಚಾರ ಚರ್ಚೆ ಮಾಡುವ ಸಂಗತಿಯು ನೆನೆಗುದಿಗೆ ಬೀಳಬಾರದು ಎಂದು ನಾನು ಕೋರುತ್ತಿದ್ದೇನೆ.

ಅಧ್ಯಕ್ಷರು : ನಾಳೆ ಈ ವಿಚಾರ ನೆನೆಗುದಿಗೆ ಬೀಳದಂತೆ ನಾನು ನೋಡಿಕೊಳ್ಳುತ್ತೇನೆ. ಆ ವಿಷಯ ನನಗೆ ಬಿಡಿ. ನೀವು ನನ್ನನ್ನು ನಂಬಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಿನ್ನೆ ಎರಡು ಬಾರಿ ರೂಲಿಂಗ್ ಅನ್ನು ನಮ್ಮ ಪರವಾಗಿಯೇ ಕೊಟ್ಟಿರಿ. ಆದರೆ ಅದು ಸರ್ಕಾರಕ್ಕೆ ಬೇಕಾಗಿರಲಿಲ್ಲ. ಕೊನೆಯ ಪಕ್ಷ ನಾಳೆಯಾದರೂ ಅದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಏನಿದೆಯೋ ಅದರ ಪ್ರಕಾರ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಆ ತರಹ ನಡೆದಿಲ್ಲ. ಆದರೂ ತಾವು ಹೇಳಿದಂತೆ ನಡೆಯುತ್ತೇವೆ.

ಅಧ್ಯಕ್ಷರು: ನೀವು ಹೇಳಿದ್ದಕ್ಕೆ ಮಾತ್ರ ನಾನು ನನ್ನ ರೂಲಿಂಗ್ ಅನ್ನು ರಿವೈಸ್ ಮಾಡಿಕೊಳ್ಳಬೇಕೇ? ಅವರು ಹೇಳಿದಾಗಲೂ ಕೂಡ ನಾನು ರಿವೈಸ್ ಮಾಡಿಕೊಳ್ಳಬೇಕಲ್ಲವೇ?

ಶ್ರೀ ಸಿ.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ. I will make arrangements. You must believe me. ಮಾನ್ಯ ರಾಮಯ್ಯನವರು ಮಾತನಾಡುವುದನ್ನು ಮುಂದುವರೆಸಲಿ.

ಶ್ರೀ ಸಿ.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ದಯವಿಟ್ಟು ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ. ನನ್ನದೂ ಕೂಡ ಹಕ್ಕುಚ್ಯುತಿ ಆಗಿರುವುದರಿಂದ ಅದನ್ನು ಪ್ರಸ್ತಾಪಿಸಲು ನನಗೆ ಇಲ್ಲೊಂದು ಸಂದರ್ಭ ಬಂದಿದೆ. ಅದನ್ನು ತಮಗೆ ರಿಮೈಂಡ್ ಮಾಡುವ ದೃಷ್ಟಿಯಿಂದ ನಾನು ರಾಮಯ್ಯನವರನ್ನು ಒಂದು ನಿಮಿಷ ಯೀಲ್ಡ್ ಆಗಬೇಕೆಂದು ಕೋರುತ್ತಿದ್ದೇನೆ. ಮಾನ್ಯ ರಾಮಯ್ಯನವರು ಒಬ್ಬ ಲೆಜಿಸ್ಲೇಟರ್‌ಗೆ ಇರತಕ್ಕ ಹಕ್ಕು ಜ್ಯುಡಿಷಿಯರಿಯಿಂದ ಚ್ಯುತಿ ಆಗಿರುವ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ಈಗಾಗಲೇ ತಮಗೆ ಗೊತ್ತಿರುವಂತೆ ಮತ್ತು ಈ ಸದನದಲ್ಲೂ ಕೂಡ ಚರ್ಚೆಯಾಗಿರುವಂತೆ ಎಗ್ಸಿಕ್ಯೂಟಿವ್‌ನಿಂದ ಕೂಡ ನಮ್ಮ ಲೆಜಿಸ್ಲೇಟರ್ಸ್ ಹಕ್ಕು ಚ್ಯುತಿ ಆಗಿದೆ. ನನಗೂ ಮತ್ತು ಮ್ಯಾನ್ಯ ಕೃಷ್ಣಮೂರ್ತಿಯವರಿಗೂ ಹಾಗೂ ಜಿಲ್ಲಾ ಮಂತ್ರಿಗಳ ನಡುವೆ ಮಧ್ಯೆ ನಡೆದಿರತಕ್ಕದ್ದು ತಮಗೆ ಗೊತ್ತಿದೆ. ತಾವು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡಿ ಇದನ್ನು ಸರಿಪಡಿಸುತ್ತೇನೆ ಎಂದು ಭರವಸೆ ಕೊಟ್ಟಿದ್ದಿರಿ. ಅದನ್ನು ನೀವು ಮಾಡಲಿಲ್ಲ. ದಯಮಾಡಿ ಮಾನ್ಯ ರಾಮಯ್ಯನವರು ಜ್ಯುಡಿಷಿಯಿರಿಯಿಂದ ಶಾಸಕರ ಹಕ್ಕುಚ್ಯುತಿ ಬಗ್ಗೆ ಏನು ಪ್ರಸ್ತಾಪ ಮಾಡಿದರು. ಅದರ ಜೊತೆಗೆ ಎಗ್ಸಿಕ್ಯೂಟೀವ್‌ನಿಂದ ನನ್ನ ಹಕ್ಕುಚ್ಯುತಿಯಾಗಿರುವ ಬಗ್ಗೆ ಕೂಡ ಮಾನ್ಯ ಕಾನೂನು ಮಂತ್ರಿಗಳ ಜೊತೆಗೆ ಮಾತನಾಡುವಾಗ ತಾವು ಪ್ರಸ್ತಾಪಿಸಬೇಕೆಂದು ಕೋರುತ್ತೇನೆ. ಎರಡನ್ನೂ ಒಟ್ಟಿಗೇ ತೆಗೆದುಕೊಂಡು ಈ ಸಮಸ್ಯೆಯನ್ನು ಮಾನ್ಯ ಅಧ್ಯಕ್ಷರು ಬಗೆಹರಿಸಬೇಕೆಂದು ನಾನು ಕೋರುತ್ತೇನೆ.

ಅಧ್ಯಕ್ಷರು: ಲಾ ಮಿನಿಸ್ಟರ್ ಮತ್ತು ಮುಖ್ಯಮಂತ್ರಿಗಳ ಜೊತೆಗೆ ಆ ವಿಷಯ ಮಾತನಾಡೋಣ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಮಯ್ಯನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ದಯವಿಟ್ಟು ಅವರಿಗೆ ಇಷ್ಟೇ ಗಂಟೆ ಮಾತನಾಡಿ ಎಂದು ರಿಸ್ಟ್ರಿಕ್ಷನ್ಸ್ ಹಾಕಬೇಡಿ. ಅವರು ಇನ್ನಷ್ಟು ಕಾಲ ಮಾತನಾಡಲಿ. ನಮ್ಮ ಪಕ್ಷದ ನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 69 ರ ಮೇಳೆ ತಲಾ ಅರ್ಧ ಅರ್ಧ ಗಂಟೆ ಮಾತನಾಡಿ ಇವತ್ತು ಆ ವಿಷಯವನ್ನು ಮುಗಿಸಿಬಿಡಲಿ. ನಾಳೆ ಹಗಲೆಲ್ಲಾ ಮಾನ್ಯ ರಾಮಯ್ಯನವರು ತಮ್ಮ ಭಾಷಣವನ್ನು ಮುಂದುವರೆಸಲಿ. ಚೆನ್ನಾಗಿ ಮಾತನಾಡುತ್ತಿರುವ ಮಾನ್ಯ ರಾಮಯ್ಯನವರಿಗೆ ಇಂತಿಷ್ಟೇ ಅವಧಿ ಮಾತನಾಡಿ ಎಂದು ರಿಸ್ಟ್ರಿಷನ್ಸ್ ಹಾಕಬೇಡಿ.

7. ಪ್ರಕಟಣೆ

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ. '' ಈ ದಿನ ಸಂಜೆ.6-30 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಸನ್ಮಾನ್ಯ ರಾಜ್ಯಪಾಲರಿಂದ ಪ್ರತಿಭಾವಂತ ಸಂಸದೀಯ ಪುಟಗಳ ಮಸ್ತಕ ಬಿಡುಗಡೆ ಸಮಾರಂಭವನ್ನು ವಿಧಾನಸಭಾ ಸಚಿವಾಲಯದ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಸಂಜೆ.5.45 ರಿಂದ 6.15ರವರೆಗೆ ಲಘು ಉಪಹಾರವನ್ನು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳು ಮತ್ತು ಪತ್ರಿಕಾ ವರದಿಗಾರರುಗಳು ಸದರಿ ಸಮಾರಂಭಕ್ಕೆ ತಪ್ಪದೇ ಆಗಮಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಲಾಗಿದೆ. 5-30 ಗಂಟೆಗೆ ಇವತ್ತು ಸದನವನ್ನು ಮುಂದೂಡುತ್ತಿದ್ದೇವೆ. ರಾಜ್ಯಪಾಲರು ಸಮಾರಂಭಕ್ಕೆ ಬರುವಷ್ಟರಲ್ಲಿ ಎಲ್ಲರೂ ತಿಂಡಿ ತಿಂದು ರೆಡಿಯಾಗಿರಬೇಕು ಎಂಬ ಉದ್ದೇಶದಿಂದ ಬೇಗ ಮುಂದೂಡುತ್ತಿದ್ದೇವೆ. 5.30 ಗಂಟೆಯವರೆಗೆ ಮಾನ್ಯ ರಾಮಯ್ಯನವರು ಮಾತನಾಡಲಿ. ನಾಳೆ ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಅದಕ್ಕೆ ನೀವೇನೂ ಚಿಂತಿಸಬೇಡಿ.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೇ, ನಿನ್ನೆ ಪ್ರಧಾನ ಮಂತ್ರಿಗಳಾದ ವಾಜಪೇಯಿಯವರು ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳು ಸದರಿ ಸಮಾರಂಭದಲ್ಲಿ ಹಾಜರಿದ್ದರು. ಅದೊಂದು ಸರ್ಕಾರಿ ಸಮಾರಂಭವಾಗಿತ್ತು. ಆ ಸಮಾರಂಭಕ್ಕೆ ಶಾಸಕರಿಗೆ ಹಾಜರಾಗಲು ಏಕೆ ಆಮಂತ್ರಣ ನೀಡಿಲ್ಲ?

ಅಧ್ಯಕ್ಷರು : ಆ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ಕಾನೂನು ಮತ್ತು ಸಂಸದೀಯ ಸಚಿವರು ಉತ್ತರಿಸಬೇಕು. ಶಾಸಕರನ್ನು ಆ ಸಮಾರಂಭಕ್ಕೆ ಏಕೆ ಕರೆದಿಲ್ಲ ಎಂಬ ಬಗ್ಗೆ ನನಗೇನೂ ಗೊತ್ತಿಲ್ಲ. ಆ ಬಗ್ಗೆ ನಾನು ಸಂಬಂಧಪಟ್ಟ ಸಚಿವರನ್ನು ಕೇಳಬೇಕು. ಆ ಸಮಾರಂಭದ ಪ್ರೊಟೋಕಾಲ್ ಅರೇಂಜ್‌ಮೆಂಟ್ಸ್ ಬಗ್ಗೆ ನನಗೇನೂ ಗೊತ್ತಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ತಾವು ಕಸ್ಟೋಡಿಯನ್ ಆಫ್ ದ ಹೌಸ್.

ಅಧ್ಯಕ್ಷರು: ಕಟ್ಟಸುಬ್ರಮಣ್ಯ ನಾಯ್ಡುರವರೂ ಬಂದಿದ್ದರು. ಬೇರೆ ಎಲ್ಲಾ ಸದಸ್ಯರೂ ಇದ್ದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಎಲ್ಲ ಕಾರ್ಯಕ್ರಮಗಳಿಗೂ ಎಲ್ಲರಿಗೂ ಕರೆಯುವುದಕ್ಕೆ ಆಗುವುದಿಲ್ಲ. ಇದು ಏಷಿಯಾ ಸೊಸೈಟಿಯವರು ಸೇರಿ ಮಾಡಿದ ಫಂಕ್ಷನ್. ಅದು ವೆಸ್ಟ್-ಎಂಡ್ ನಲ್ಲಿ ಆಗುವಂಥಾದ್ದು ಇಲ್ಲಿ ಏಕೆ ಮಾಡಿದರು ಎಂದರೆ ಸೆಕ್ರೆಟರಿ ಮತ್ತು ಪ್ರಧಾನ ಮಂತ್ರಿಗಳು ನೇರವಾಗಿ ಬಂದು ಇಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಹೋಗಲಿಕ್ಕೆ ಅನುಕೂಲವಾಗುತ್ತದೆ ಎಂದು ಅವರು ಅರೇಂಜ್ ಮಾಡಿದ ಫಂಕ್ಷನ್. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಇನ್‌ವೈಟ್ ಮಾಡಿದ್ದರು. ಅವರಿಗೆ ಬೇಕಾದವರಿಗೆ ಕೊಟ್ಟಿರಬಹುದು. ಅದು ಸರ್ಕಾರಿ ಫಂಕ್ಷನ್ ಅಲ್ಲ. ಅದಕ್ಕೆ ನಮಗೆ ಏಕೆ ಕರೆಯಲಿಲ್ಲವೆಂದರೆ ಹೇಗೆ? ಮಾನ್ಯ ಅನಂತ ಕುಮಾರ್‌ರವರಿಗೇ ಎದುರುಗಡೆ ಕೂರಿಸಿದ್ದರು. ಅವರಿಗೇನು ಸ್ಟೇಜ್ ಮೇಲೆ ಕೂರಿಸಿದ್ದಿರಾ ಅವರ ಮತ ಕ್ಷೇತ್ರದಲ್ಲಿ ಆಗಿದ್ದು. ಇವರು ಶೆಟ್ಟರ್‌ರವರು ನಾವು ಒಂದೇ ಕಡೆ ಕೂತಿದ್ದೆವು. ಅದಕ್ಕೆ ಎಲ್ಲರೂ ನಮಗೆ ಕರೆದಿಲ್ಲವೆಂದರೆ ಹೇಗೆ?

ಶ್ರೀ ಕೆ. ಎನ್.ಸುಬ್ಬಾರೆಡ್ಡಿ : ನೀವು ಕರೆದಿದ್ದರೂ ನಾವು ಬರುತ್ತಿರಲಿಲ್ಲ. ನಾವು ಮಾನ್ಯ ವಾಜಪೇಯಿಯವರಿಗೆ ನೋಡುವುದಕ್ಕೆ ಏರ್‌ಪೋರ್ಟಿಗೇ ಹೋಗಿದ್ದೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಪ್ರಧಾನ ಮಂತ್ರಿಗಳು ಬಂದು ಹೋದ ಮೇಲೆ ಬಿಜೆಪಿ ಮುಖಂಡರು ಬಹಳ ಸ್ಫೂರ್ತಿಯಿಂದ ಇದ್ದಾರೆ.

ಶ್ರೀ ಡಿ. ವಿ. ಸದಾನಂದಗೌಡ: ತಾವು ಸಂತೋಷ ಪಡಬೇಕು. ಕರ್ನಾಟಕ ರಾಜ್ಯಕ್ಕೆ ಪ್ರಧಾನ ಮಂತ್ರಿಗಳು ಆಗಾಗ ಬಂದರೆ ನಮಗೆ ಮಾತ್ರವಲ್ಲ, ಇಡೀ ಕರ್ನಾಟಕದ ಜನತೆಗೆ ಒಳ್ಳೆಯದು ಎಂದು ತಾವು ಸ್ವಾಗತ ಮಾಡಬೇಕು.

ಶ್ರೀ ಎ. ರಾಮದಾಸ್ : ತಾವು ಒಂದು ಕಾರ್ಯಕ್ರಮ ಹೇಳಿದಿರಿ, ಅದು ಒಳ್ಳೆಯ ವಿಚಾರ. ಭಾಷಾಂತರ ಮಾಡಿ ಒಳ್ಳೆಯ ಪುಸ್ತಕಗಳನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿಂದ ಪ್ರಿಂಟ್ ಆಗಿರುವ ಇನ್‌ವಿಟೇಷನ್‌ನಲ್ಲಿ ಒಂದೇ ಸಭೆಗೆ ಇಬ್ಬರು ಅಧ್ಯಕ್ಷತೆ ವಹಿಸತಕ್ಕಂಥಾದ್ದು ಪ್ರಿಂಟ್ ಆಗಿದೆ. ಯಾವುದೇ ಒಂದು ಸಭೆಗೆ ಇಬ್ಬರು ಅಧ್ಯಕ್ಷರಾಗುವುದಕ್ಕೆ ಸಾಧ್ಯ ಇದೆಯಾ? ಇದು ಆಗಬಾರದು.

ಅಧ್ಯಕ್ಷರು: You have not understood the point. ನನಗೆ ಸಭಾಧ್ಯಕ್ಷರಾಗಿ ಮೆನ್‌ಷನ್ ಮಾಡಿದ್ದಾರೆ. ಲೈಬ್ರರಿ ಕಮಿಟಿ ಅಧ್ಯಕ್ಷರು ಕೌನ್ಸಿಲ್ ಛೇರ್ಮನ್ ಆಗಿರುತ್ತಾರೆ. ಆ ರೀತಿ ಮಾಡಿದ್ದಾರೆ. ಸಭಾಧ್ಯಕ್ಷರಿಂದ ಭಾಷಣ ಎಂದರೆ, ಅಧ್ಯಕ್ಷರು, Myself. Library Committee Chairman is the legislative Council Chairman. Library Committee is arranging that function, not myself.

ಟೆಕ್ನಿಕಲ್ಲಾಗಿ ನಾನು ಈ ಸಭೆಯ ಅಧ್ಯಕ್ಷ, ಅವರು ಲೈಬ್ರರಿ ಕಮಿಟಿ ಅಧ್ಯಕ್ಷರು. ಇದು ಟೆಕ್ನಿಕಾಲಿಟಿ.

Those are all small matters. Why should we waste our time?

8. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

ಶ್ರೀ ವೈ. ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಿಂತ ಮೊದಲು ನಾನು ಬಹಳ ನೊಂದುಕೊಂಡಿದ್ದೇನೆ. ನಾನು ಆಗಲೇ ಹೇಳಿದ್ದೇನೆ, ನನ್ನ ಮಿತಿ ಏನೆಂದು ನನಗೆ ಅರಿವು ಇದೆ. ಅದಕ್ಕಾಗಿ ನಾನು ಯಾವುದು ಹೇಳಬೇಕೋ ಅಷ್ಟೇ ಹೇಳುತ್ತೇನೆ. ನನಗೆ ಬೇರೆಯವರ ವಿಷಯ ಬೇಕಾಗಿಲ್ಲ. ಯಾವ ನ್ಯಾಯಾಧೀಶರ ನಡತೆ ಬಗ್ಗೆಯಾಗಲೀ, ಅವರ ವೈಯಕ್ತಿಕ ಜೀವನದ ಸೊಬಗಾಗಲಿ ನನಗೆ ಬೇಕಾಗಿಲ್ಲ. ನನಗೆ ಬೇಕಾಗಿರುವುದು ಇಷ್ಟೆ. ಪ್ರತಿಯೊಬ್ಬ ಶಾಸಕರ ಅಧ್ಯಕ್ಷತೆಯಲ್ಲಿ ಅವನ ಮತ ಕ್ಷೇತ್ರದ ಸರ್ಕಾರಿ ಸಭೆ ಸಮಾರಂಭಗಳು ನಡೆಯಬೇಕು ಎಂದು ಹೇಳುವುದು ಕೂಡ ಖಚಿತವಾಗಿ ಸರ್ಕಾರ ನಿರ್ಧಾರ ಮಾಡಿದ ನಿಯಮ. ಆ ನಿಯಮಕ್ಕೆ ಯಾರಾದರೂ ಹೊರತಾದರೆ ಆ ಸಭೆಗಳನ್ನು ರದ್ದು ಮಾಡುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಒಬ್ಬರು ನ್ಯಾಯಾಧೀಶರು ಆ ನಿಯಮವನ್ನು ಪಾಲನೆಮಾಡಿದಾಗ ಅವರನ್ನು ನೀವು ಬೇರೆಯವರಿಗಿಂತ ಹೊರತಾಗಿ ಏಕೆ ಕಾಣುತ್ತೀರ? ಅವರನ್ನು ಬೇರೆಯವರಿಗಿಂದ ದೊಡ್ಡದಾಗಿ ಏಕೆ ಕಾಣುತ್ತೀರಿ? ಅದೇ ಒಬ್ಬರು ಡೆಪ್ಯುಟಿ ಕಮಿಷನರ್ ಅಥವಾ ಡಿವಿಷನಲ್ ಕಮಿಷನರ್ ಮಾಡಿದ್ದೆ ನೀವು ಸುಮ್ಮನೆ ಬಿಡುತ್ತಿದ್ದಿರಾ? ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಸರ್ಕಾರ ನಿರೂಪಣೆ ಮಾಡಿದ ನಿಯಮಗಳ ಪ್ರಕಾರ ಆ ಕ್ಷೇತ್ರದ ಶಾಸಕರು ಆ ಸಮಾರಂಭಗಳಲ್ಲಿ ಭಾಗವಹಿಸಬೇಕಾದುದು ಕಾನೂನು ನಿಯಮ ಮತ್ತು ನಾವು ಅನುಸರಿಸಿಕೊಂಡು ಬಂದ ಪರಂಪರೆ ಕೂಡ. ಇದು ಒಂದು ಪ್ರಿಸಿಡೆಂಟ್. ಇದಕ್ಕೆ ಹೊರತಾಗಿ ನಡೆದಾಗ ಅಷ್ಟೇ ಅಲ್ಲ, ಆ ವಿಷಯ ಚರ್ಚೆಗೆ ಬಂದಾಗ ಅತ್ಯಂತ ಅವಹೇಳನಕಾರಿಯಾಗಿ ಶಾಸಕರ ಬಗ್ಗೆ ಮಾತನಾಡುವ ಮಾಡು

ಬಂದಾಗ ನಮಗೆ ಮನಸ್ಸು ನೋಯಿಸಿದೆ. ನಾವು ಶಾಸಕರಾಗಿ ಕೆಲಸ ಮಾಡುವುದಕ್ಕೆ ನಮ್ಮ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಅಡ್ಡಿ ತರುತ್ತಿದ್ದಾರೆ ಎನ್ನುವ ವಿಷಯಕ್ಕೆ ಅಷ್ಟೇ ಸೀಮಿತವಾಗಿ ನಾನು ವಿಷಯ ಪ್ರಸ್ತಾಪ ಮಾಡಿದ್ದೇನೆ. ಈ ವಿಷಯಕ್ಕೆ ನೀವು ಮತ್ತು ಸಂಸದೀಯ ಸಚಿವರು ಚರ್ಚೆ ಮಾಡಿ, ರಾಜಿ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದು ನನ್ನ ಭಾವನೆ. We have a Law Secretary. I want to make a suggestion to th4e government. We have Law' Secretary. Write a letter to the Chief Justice asking as to whether he has taken such a decision or not. If he confirms, you must say with all dareness "No, he cannot make such things." ಅವರು ಅದನ್ನು ಮಾಡುವುದಾದಲ್ಲಿ, ನಾವು ಹೇಳದೆ ಇದ್ದರೆ ಮುನಿಸಿಪಾಲಿಟಿಯವರು ಹೋಗಿ ಕೋರ್ಟ್ ಪ್ರಿಮಿಸಿನ್ ಕಸ ಹೊಡೆಯುವುದಿಲ್ಲ. ನೀವು ಹೇಳದೇ ಚಿಂತಾಮಣಿ ಮುನಿಸಿಪಾಲಿಟಿಯವರು ಹೋಗಿ ಅವರ ಬಿಲ್ಡಿಂಗ್‌ಗೆ ಸುಣ್ಣ ಹೊಡೆಯುತ್ತಾರಾ? ಈ ಎಲ್ಲ ಸಮಸ್ಯೆಗಳು ಬರುವುದಕ್ಕಿಂತ ಮೊದಲು ಸನ್ಮಾನ್ಯ ಕಾನೂನು ಸಚಿವರಲ್ಲಿ ಅನೂನ್ಯ ಪ್ರಾರ್ಥನೆ ಮಾಡುತ್ತೇನೆ. ಗೌರವಾನ್ವಿತ ಮುಖ್ಯ ನ್ಯಾಯಾಧೀಶರಿಗೆ ತಾವು ತಮ್ಮ ಕಾರ್ಯದರ್ಶಿಗಳ ಮೂಲಕ ಈ ವಿಷಯದಲ್ಲಿ ಕಾಗದ ಬರೆಸತಕ್ಕದ್ದು. ಅವರಿಂದ ಏನು ಉತ್ತರ ಬರುತ್ತದೆ ಎಂದು ನೋಡಿ. ಅವರು ಅಚಾತುರ್ಯದಿಂದ ನಡೆಯಿತು ಎಂದು ಹೇಳಿದರೆ ಕೈ ಬಿಡೋಣ. ನಾವು ಹಾಗೇ ಮಾಡುವುದು ತಂದು ಹೇಳುವುದಾದರೆ ನೀವು ಹೇಳುವುದಾದರೆ ನೀವು ಅವರಿಗೆ ಬುದ್ಧಿ ಹೇಳಬೇಕಾಗುತ್ತದೆ. ಸರಿಮಾಡುವುದಕ್ಕೆ ಆಗದೆ ಇದ್ದರೆ ನಾವೆಲ್ಲಾ ಸೇರಿಕೊಂಡು ಏನು ಬೇಕೋ ತೀರ್ಮಾನ ತೆಗೆದು ಕೊಳ್ಳೋಣ. If the House, if the government, if the Chairman, does not protect, it is our privilage. We know how to protect our privilege. We will protect. ಇಷ್ಟು ಹೇಳಿ ಈ ವಿಷಯವನ್ನು ಅಂತ್ಯಗೊಳಿಸುತ್ತೇನೆ. ಕೊನೆಯದಾಗಿ ಪ್ರಾರ್ಥನೆ ಮಾಡುತ್ತೇನೆ, ಅವರಿವರ ಘನತೆ ಗೌರವ, ಮಾನ ಮರ್ಯಾದೆ ಬಗ್ಗೆ ಇರುವ ಕಾಳಜಿ ಅಷ್ಟೇ ನಮ್ಮ ಮಾನ ಮರ್ಯಾದೆ ಬಗ್ಗೆ ಇರಲಿ ಎಂದು ಹೇಳಿ ಈ ವಿಷಯದಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಎನ್.ಸುಬ್ಬಾರೆಡ್ಡಿ : ಮುಖ್ಯ ನ್ಯಾಯಾಧೀಶರ ಬಗ್ಗೆ ಇಂತಹ ಅನೇಕ ಇನ್‌ಸಿಡೆಂಟ್‌ಗಳಾಗಿವೆ. ಅವರ ಹೆಸರು ಹೇಳುವುದು ಬೇಡ. ಮುಖ್ಯ ನ್ಯಾಯಾಧೀಶರು ಶಾಸಕರು ಬಂದರೆ ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು ಎಂದು ಹಿಂದೆ ನಿಯಮ ಮಾಡಿದ್ದರು ಅದು ನಮ್ಮ ಗಮನಕ್ಕೂ ಕೂಡ ಬಂದಿದೆ. ಆದಾಗ್ಯೂ ಈಗ ನಮ್ಮ ಕಾನೂನು ಸಚಿವರು ಈ ವಿಷಯದ ಬಗ್ಗೆ ನೀವು ಒಂದು ವಿಷಯವನ್ನು ಕೇಳಿದ್ದೀವು, ಶ್ರೀ ಮಾನ್ ಚಂದ್ರೇಗೌಡರು ಹೈಕೋರ್ಟ್‌ಗೆ ಬರೆದರು ಅಲ್ಲಿಂದ ಕೊಡುವುದಕ್ಕಾಗುವುದಿಲ್ಲವೆಂದು ಉತ್ತರ ಬಂದಿತು. ಇದರ ಬಗ್ಗೆ ತಾವೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇದು ನಮ್ಮ ಶಾಸಕರ ಹಕ್ಕು ಏನಿದೆ ಅದರ ಬಗ್ಗೆ ಶ್ರೀ ಮಾನ್ ಚಂದ್ರೇಗೌಡರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಬಂದಿರುವ ಪತ್ರ ನನಗೆ ತೋರಿಸಿದರು ಅದು ಬಿಟ್ಟು ಇದರ ಬಗ್ಗೆ ಡಿಸ್ಕಷನ್ ಆಗಿಲಿ, ಏನೂ ಮಾಡಲಿಲ್ಲ. ಹೀಗಾಗಿ ನಮ್ಮ ಹಕ್ಕುಭಾದ್ಯತೆ ಯನ್ನು ನಮ್ಮ ಹೇಗೆ ಕಾಪಾಡಿಕೊಳ್ಳುವುದು, ಇದನ್ನು ಕಾನೂನು ಸಚಿವರು ಮಾಡಲಿಲ್ಲ. ಈ ರೀತಿ ನಡೆದಾಗ ಹಿಂದಿನ ಇನ್‌ಸಿಡೆಂಟ್ಸ್ ಇವೆ, ಆ ಇನ್‌ಸಿಡೆಂಟ್ಸ್‌ನಲ್ಲಿ ಇದರಲ್ಲಿ ಏನಾದರೂ ಇದೆಯಾ?

Mr.SPEAKER : Let us not go to the details, please. ತಾವು ಸಭೆಗೆ ನಿಧಾನವಾಗಿ ಬಂದಿದ್ದೀರಿ, ಅದನ್ನು ಹೊಸದಾಗಿ ಪ್ರಾರಂಭ ಮಾಡುತ್ತಿದ್ದೀರಿ. ಇದಕ್ಕೆ ಮೊದಲು ಸುಮಾರು 25 ರಿಂದ 30 ಜನ ಸದಸ್ಯರು ಅವರ ಕಳಕಳಿ ಹೇಳಿದ್ದಾರೆ. ಹಿಂದಿನಿಂದ ನಡೆದಕೊಂಡು ಬಂದ ವಿಚಾರ. ಆಯಾ ಕ್ಷೇತ್ರಗಳಲ್ಲಿ ಕೋರ್ಟ್ ಬಿಲ್ಡಿಂಗ್ ಪ್ರಾರಂಭ ಮಾಡುವಾಗ ಮೊದಲನಿಂದ ಏನು ನಡೆದುಕೊಂಡು ಬಂದಿದೆ ಅದರ ಪ್ರಕಾರ ನಮಗೆ ಇನ್‌ವೈಟ್ ಮಾಡಿಲ್ಲ. ನಮಗೆ ಅವಮಾನವಾಗಿದೆ ಎಂದು ಹೇಳಿದರು. ಈಗಾಗಲೇ ಈ ವಿಷಯ ನನಗೆ ಗೊತ್ತಾಗಿದೆ. ಚಂದ್ರೇಗೌಡರ ಹತ್ತಿರ ಮೊದಲನೇ ಸುತ್ತಿನ ಮಾತುಕತೆ ನಾನು ಮಾಡಿದ್ದೇನೆ. ಇದನ್ನೂ ಸಹ ಮಾತನಾಡೋಣ. ಅದು ಬಗೆಹರಿಸುವುದಕ್ಕಾಗಲಿಲ್ಲವೆಂದರೆ ಈ ಸಭೆಯಲ್ಲಿ ಬಂದು ನಾವು ಹೇಳುತ್ತೇವೆ.

ಶ್ರೀ ಕೆ. ಎನ್.ಸುಬ್ಬಾರೆಡ್ಡಿ : ಆ ವಿಷಯದ ಬಗ್ಗೆ ಏನು ಮಾಡಬೇಕೆಂದು ಕಾನೂನು ಸಚಿವರು ಹೇಳಬೇಕು. ಅ ಪ್ರಿಸಿಡೆಂಟ್ ಪ್ರಕಾರ ನಾವು ಹೋಗಬೇಕಾಗುತ್ತದೆ. ಅದನು ಕಾನೂನು ಸಚಿವರು ನಮಗೆ ಹೇಳಬೇಕು.

Mr. SPEAKER : We are discussing.

ಫಸ್ಟ್ ರೌಂಡ್ ಮಾತುಕತೆ ಆಗಿದೆ. ಮೊನ್ನೆ ನಾನು ಹಾಗೂ ಮಾನ್ಯ ಚಂದ್ರೇಗೌಡರು ಮಾತನಾಡಿದ್ದೇವೆ. ಯಾವ ರೀತಿ ಸಾಲ್ವ್ ಮಾಡುವುದು ಎಂಬ ಬಗ್ಗೆ ಮಾತನಾಡಿದ್ದೇವೆ. ಅದು ಅಷ್ಟು ಸುಲಭವಾಗಿ ಸಾಲ್ವ್ ಆಗುತ್ತದಾ? Let us wait and see for one or two weeks. ಮಾನ್ಯ ಸಂಸದೀಯ ಸಚಿವರು ಇದರ ಬಗ್ಗೆ ಏನಾದರೂ ಹೇಳುತ್ತೀರಾ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಶ್ನೆ ಮಾಡುತ್ತಿದ್ದೇನೆ. ಈಗ ಕಡೂರ್‌ದು ಈ ತಿಂಗಳ ಕೊನೆಯಲ್ಲಿ ಪ್ರಾರಂಭೋತ್ಸವ ಇದೆ. ಇದೇ ರೀತಿ ಮುಂದುವರಿದರೆ ನಾವೊಂದು ಸಾರಿ ಪ್ರಾರಂಭ ಮಾಡುತ್ತೇವೆ. ಅವರೊಂದು ಸಾರಿ ಪ್ರಾರಂಭ ಮಾಡುತ್ತಾರೆ. ಸಂಘರ್ಷ ಆಗುತ್ತದೆ. ತಾವೊಂದು ಆದೇಶ ಕೊಟ್ಟಿದ್ದೀರಿ. ಇವೆಲ್ಲ ತೀರ್ಮಾನ ಆಗುವತನಕ ಯಾವ ಕೋರ್ಟ್ ಬಿಲ್ಡಿಂಗೂ ಉದ್ಘಾಟನೆ ಆಗಬಾರದು, ಅದು ಪರ್ಟಿಕ್ಯುಲರ್ ಆಗಿ ಕಡೂರ್ ಕೋರ್ಟಿನ ಹೊಸ ಬಿಲ್ಡಿಂಗ್ ಉದ್ಘಾಟನೆ ಮಾಡುವುದಿಲ್ಲ ಎಂದು ಹೇಳುತ್ತೇನೆಂದು ಹೇಳಿದ್ದೀರಿ. ದಯಮಾಡಿ ಆದರ ಬಗ್ಗೆ ತಾವು ಸೂಚನೆ ಕೊಡಬೇಕಾಗುತ್ತದೆ. ಇಲ್ಲ ಎಂದರೆ ನಾವೊಂದು ಫಾರ್ಮಲ್ ಆಗಿ ಫಂಕ್ಷನ್ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಈ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯ ಏನು ಇದೆ ನೋಡಿ. ನಾನು ಬೇಕಾದರೆ ಪ್ರೊಸೀಡಿಂಗ್ಸ್ ಕಳಿಸಿಕೊಡುತ್ತೇನೆ. ನಾಳೆಯೇ ನಿಮಗೆ ಪ್ರೊಸೀಡಿಂಗ್ಸ್ ಕಳಿಸಿ ಕೊಡುತ್ತೇನೆ. ಅದರ ಬಗ್ಗೆ ಮಾನ್ಯ ಸದಸ್ಯರ ಕಳಕಳಿ ಏನು ಇದೆ, ನಿನೋವು ಸ್ವಲ್ಪ ಗಮನ ಹರಿಸಬೇಕು. ನಾವು ನೀವು ಸೇರಿ ಆದಷ್ಟು ಬೇಗನೇ ಇದನ್ನು ಇತ್ಯರ್ಥಗೊಳಿಸಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ನಮ್ಮ ಕಡೂರಿನಲ್ಲಿ ಲಾ ಅಂಡ್ ಆರ್ಡರ್ ಸಮಸ್ಯೆ ಬರುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡರ : ಕಡೂರು ಒಂದೇ ಕಡೆ ಅಲ್ಲ, ಎಲ್ಲ ಕಡೆ ಸಮಸ್ಯೆ ಬರುತ್ತದೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಅಷ್ಟೇ ಗಂಭೀರವಾದಂತಹ ವಿಚಾರ ಕೂಡ ಇದೆ. ನ್ಯಾಯಾಂಗದ

ಜೊತೆಗೆ ಸಂಘರ್ಷಕ್ಕೆ ಇಳಿಯಬೇಕು ಎನ್ನತಕ್ಕದ್ದು ಶಾಸಕರ ಉದ್ದೇಶ ಅಲ್ಲ ಎನ್ನುವುದನ್ನು ನಾನು ಮೊದಲು ಸ್ಪಷ್ಟಪಡಿಸುತ್ತೇನೆ. ಆದರೆ ಶಾ ಸಭೆ ಸದಸ್ಯರಿಗೂ ಕೆಲವು ಹಕ್ಕುಗಳು ಬಾಧ್ಯತೆಗಳು ಇದ್ದಾವೆ. ಎರಡೂ ಸಂಸ್ಥೆಗಳು in dispensation of justice. ಯಾರೂ ಇಂಟರ್‌ಫಿಯರ್ ಮಾಡುವುದಕ್ಕೆ ಹೋಗುವುದಿಲ್ಲ. Articles 211 and 212 are very clear. ಆದ್ದರಿಂದ ಇಲ್ಲಿ ಚರ್ಚೆ ಮಾಡಿ ಇದು ಪರಿಹಾರ ಆಗುವುದು ಸಮಸ್ಯೆ ಅಲ್ಲ. ಸಾಧಾರಣವಾಗಿ ಹಿಂದಿನಿಂದ ನಡೆದುಕೊಂಡು ಬಂದಿರುವಂತಹ ಪದ್ಧತಿ ಏನು ಅಂದರೆ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ನ್ಯಾಯಾಧೀಶರನ್ನು, ಮುಖ್ಯ ನ್ಯಾಯಾಧೀಶರು ಮಾನ್ಯ ಮುಖ್ಯಮಂತ್ರಿಗಳನ್ನು ಕನಿಷ್ಠ ತಿಂಗಳಿಗೆ ಒಂದು ಸಾರಿ ಭೇಟಿ ಮಾಡುತ್ತಾರೆ. ಇಲ್ಲ ಅವರು ಇವರ ಮನೆಗೆ ಬರುತ್ತಾರೆ. ಇವರು ಅವರ ಮನೆಗೆ ಬರುತ್ತಾರೆ. ಕೆಲವು ಆಡಳಿತಾತ್ಮಕವಾದಂತಹದ್ದನ್ನು ಇವರು ಬಂದಾಗ ಚರ್ಚೆ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಇಂತಹ ಸಮಸ್ಯೆಗಳನ್ನು ಚರ್ಚೆ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಇಂತಹ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಇದಕ್ಕಿಂತ ಒಳ್ಳೆಯ ವೇದಿಕೆ ಏನೂ ಇಲ್ಲ. ನಾನು ಸಾಧ್ಯವಾದರೆ ಅಂತಹ ವೇದಿಕೆಯನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಮಾನ್ಯ ರಾಮಯ್ಯನವರು ಏನು ಹೇಳಿದ್ದಾರೆ. ಶಾಸಕರನ್ನು ಕೋರ್ಟ್‌ಗಳ ಉದ್ಘಾಟನೆ ಮಾಡಲಿಕ್ಕೆ ಹೊರತು ಪಡಿಸಬೇಕಾದಂತಹ ಅಗತ್ಯ ಏನೂ ಇಲ್ಲ. ಕೋರ್ಟ್‌ಗಳು ಎಂದರೆ ನೀವು ಡಿಸ್ಟ್ರಿಕ್ಟ್‌ಗಳನ್ನು ಹೊರತು ಪಡಿಸಬೇಕಾದಂತಹ ಅಗತ್ಯ ಏನೂ ಇ್ಲ. ಕೋರ್ಟ್‌ಗಳು ಎಂದರೆ ನೀವು ಡಿಸ್ಟ್ರಿಕ್ಟ್‌ಗಳನ್ನು ಮಾಡಿ ಹೋಗಿದ್ದೀರಲ್ಲ. ಕೋಟ್‌ರಗಳನ್ನು ನಾವು ಮಾಡಬೇಕಲ್ಲ. ಕೋರ್ಟ್ ಉದ್ಘಾಟನೆ ಸಹ ಇದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ: ನಾವು ಡಿಸ್ಟ್ರಿಕ್ಟ್‌ಗಳನ್ನು ಮಾಡಿದ್ದೇ ಅಪರಾಧವೇ?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಕೋರ್ಟುಗಳು ಇಲ್ಲ ಎಂದು ಹೇಳಿದ್ದರಿಂದ ನಾನು ಹೇಳಬೇಕಾಯಿತು.

ಶ್ರೀ ಸಿ. ಬೈರೇಗೌಡ : ನೀವು ಕೋರ್ಟುಗಳು ಇಲ್ಲ ಎಂದು ಹೇಳಿದ್ದರಿಂದ ನಾನು ಹೇಳಬೇಕಾಯಿತು.

ಶ್ರೀ ಸಿ. ಬೈರೇಗೌಡ: ಈಗ ನಡೆಯುತ್ತಿರತಕ್ಕಂಥಹ ಚರ್ಚೆ ಕಟ್ಟಡದ ಉದ್ಘಾಟನೆ ಬಗ್ಗೆ.

ಶ್ರೀ ಡಿ.ಬಿ.ಚಂದ್ರೇಗೌಡ: ಕೋರ್ಟ್‌ನ ಉದ್ಘಾಟನೆಯೂ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಜಿಲ್ಲೆಗಳನ್ನು ಮಾಡಿದ್ದು ದೊಡ್ಡ ಅಪರಾಧ ಆಯಿತಾ?

ಶ್ರೀ ಡಿ.ಬಿ.ಚಂದ್ರೇಗೌಡ: ಅದನ್ನು ಗಮನಕ್ಕೆತಂದೆ. ನೀವು ಹೇಳಿದ ರೀತಿಯಿದೆಯಲ್ಲಾ ಅದು ಸ್ವಲ್ಪ ಇರಿಟೇಟಿಂಗ್ ಆಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಇರಿಟೇಟಿಂಗ್ ಏನು ಇದೆ?

ಶ್ರೀ ಸಿ. ಬೈರೇಗೌಡ : ನೀವು ಏಳು ಜಿಲ್ಲೆಗಳನ್ನು ಮಾಡಿಬಿಟ್ಟು ಹೋಗಿದ್ದೀರಲ್ಲ ಎಂದು ಹೇಳಿದರೆ ಏನು ಉತ್ತರ ಹೇಳಬೇಕು? ಅದೇನು ಅಪರಾಧವಾಯಿತೇನು?

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಹೇಳಿದ ಮೇಲೆ ನಾನು ಹೇಳಿದ್ದು, ಅದಕ್ಕೆ ಮುಂಚೆ ಹೇಳಲಿಲ್ಲ. ನೀವು ಕೋರ್ಟುಗಳು ಎಂದು ಹೇಳಬೇಡಿ, ಕಟ್ಟಡ ಎನ್ನಿ ಎಂದು ಹೇಳಿದಿರಿ.

ಶ್ರೀ ಸಿ.ಬೈರೇಗೌಡ : ಚರ್ಚೆ ನಡೆದಿರತಕ್ಕದ್ದು ರಾಮನಗರದ್ದು. ರಾಮನಗರದಲ್ಲಿ ನಡೆದಿರತಕ್ಕ ಕಟ್ಟಡ ಉದ್ಘಾಟನೆ ವಿಚಾರದ ಬಗ್ಗೆ ಚರ್ಚೆ ನಡೆದಿರುವುದು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ರೈತರ ವಿಚಾರ ಆದರೆ ಹೇಳಿ ನೀವು, ನಾನು ಒಪ್ಪಿಕೊಂಡು ಬಿಡುತ್ತೇನೆ. ಇದು ಕೋರ್ಟಿನ ಬಗ್ಗೆ. ಸೀನಿಯರ್ ಸಿವಿಲ್ ಜಡ್ಜ್ ಕೋರ್ಟ್ ಹೊಸದಾಗಿ ಆಗುತ್ತಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಕೋರ್ಟ್‌ಗೆ ಹೋಗುವುದಕ್ಕೆ ಯಾರೂ ಅಡ್ಡಿ ಇಲ್ಲ. ಎಲ್ಲರೂ ಹೋಗಬಹುದು.

ಅಧ್ಯಕ್ಷರು : ಅವರೇನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ: ಆಯಿತು ಸ್ವಾಮಿ, ತಾವು ಸಲಹೆ ಕೊಟ್ಟ ಹಾಗೆ ನಾನು ಬರೆಯುವುದಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮುಖ್ಯ ನ್ಯಾಯಾಧೀಶರ ಜೊತೆಗೆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಬೇಕು.

Mr.SPEAKER : Not on this matter. This subject is over.

ಶ್ರೀ ಗುಂಡಪ್ಪ ವಕೀಲ್ : ನಾನು ಒಂದು ನಿಮಿಷ ಮಾತನಾಡಬೇಕು.

Mr.SPEAKER : Not on this matter, ಎಂದು ಹೇಳುತ್ತಿದ್ದೇವಲ್ಲ. ಬೇರೆ ಸಬ್ಜೆಕ್ಟ್ ಇದ್ದರೆ ಹೇಳಿ.

ಶ್ರೀ ಬಿ.ಸೋಮಶೇಖರ್ : ನಾಳೆ ತಾವು ಖುದ್ದಾಗಿ ಮುಖ್ಯ ನ್ಯಾಯಾಧೀಶರನ್ನು ಆಗಿ. ಈ ಸದನದ ಅನಿಸಿಕೆಗಳನ್ನು ಅವರ ಗಮನಕ್ಕೆ ತಂದು ಇದು ಬೇರೆ ರೀತಿ ತಿರುಗಬಾರದು. ದಯವಿಟ್ಟು ಈ ಬಗ್ಗೆ ಒಂದು ತೀರ್ಮಾನ ಆಗುವ ತನಕ ಈ ಸಮಾರಂಭಗಳನ್ನು ಮುಂದಕ್ಕೆ ಹಾಕಬೇಕು. ಏಕೆಂದರೆ ಕಡೂರು ಒಂದೇ ಅಲ್ಲ, ಅನೇಕ ತಾಲ್ಲೂಕುಗಳಿಗೆ ಈ ಸಮಸ್ಯೆಗಳು ಇವೆ. ಈ ತಿಂಗಳೊಳಗಾಗಿ ಹೊಸ ಕಟ್ಟಡಗಳನ್ನು ಉದ್ಘಾಟನೆ ಮಾಡುವುದು ಇದೆ. ಹೊಸ ನ್ಯಾಯಾಲಯಗಳನ್ನು ಓಪನ್ ಮಾಡತಕ್ಕದ್ದು ಇದೆ. ಈ ಎಲ್ಲ ಸಮಾರಂಭಗಳನ್ನು ಸ್ವಲ್ಪ ಮುಂದಕ್ಕೆ ಹಾಕುವುದು ಒಳ್ಳೆಯದು ಎಂದು ತಾವು ಸಲಹೆ ಕೊಡುವುದು ಒಳ್ಳೆಯದು ಎಂದು ನನ್ನ ಸಲಹೆ. ಮುಖ್ಯ ನ್ಯಾಯಾಧೀಶರನ್ನು ತಾವೇ ಭೇಟಿ ಮಾಡಿ. ತಾವು ಭೇಟಿ ಮಾಡಬೇಕು.

ಅಧ್ಯಕ್ಷರು : ಒಳ್ಳೆಯ ಸಲಹೆ ಎಂದು ಹೇಳುತ್ತಿದ್ದಾರಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಭೇಟಿ ಮಾಡುತ್ತೇನೆ, ಒಳ್ಳೆಯ ಸಲಹೆ.

ಶ್ರೀ ಗುಂಡಪ್ಪ ವಕೀಲ್ : ಹಕ್ಕುಚ್ಯುತಿ ವಿಷಯ ಬಂದಿದೆ. ಅದು ಅವರಿಗೆ ಆಗಿರುವಂತಹ ಅವಮಾನ. ಒಂದು ನಿಮಿಷ ಅವಕಾಶ ಕೊಡಿ.

Mr.SPEAKER : No, I am very sorry. Again you are re-opening the entire issue. ಅದರ ತೀರ್ಮಾನ ಆಗಿರುವ ಬಗ್ಗೆ ,again you are re-opening it.

ಶ್ರೀ ಗುಂಡಪ್ಪ ವಕೀಲ್ : ನಾನು ಏನು ಹೇಳುತ್ತಿದ್ದೇನೆ ಎಂದುದನ್ನಾದರೂ ತಾವು ಕೇಳಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ನಾವು ಮೀಟ್ ಮಾಡಿ ಎಲ್ಲ ಇತ್ಯರ್ಥಪಡಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಗುಂಡಪ್ಪ ವಕೀಲ್ : ನಾನು ಏನು ಹೇಳುತ್ತಿದ್ದೇನೆ ಎಂದರೆ

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಅವರೂ ವಕೀಲರು, ಏನು ಹೇಳುತ್ತಾರೋ ಅವರ ಅಭಿಪ್ರಾಯ ಅವರು ಹೇಳಲಿ.

ಶ್ರೀ ಗುಂಡಪ್ಪ ವಕೀಲ್ : ನಾನು ಏನು ಹೇಳುತ್ತಿದ್ದೇನೆಂದು ತಾವು ಕೇಳಿದರೆ ಗೊತ್ತಾಗುತ್ತದೆ ತಾನೇ. ನಾನು ಏನು ಹೇಳುತ್ತಿದ್ದೇನೆ?

ಅಧ್ಯಕ್ಷರು : ಆಗಲೆ ಎಲ್ಲವನ್ನೂ ಹೇಳಿದ್ದಾರೆ. ಎಲ್ಲಾ ಸದಸ್ಯರೂ ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿದ್ದಾರೆ. ಇಲ್ಲಿ ಹೊಸದಾಗಿ ಏನು ಹೇಳುತ್ತೀರಿ?

ಶ್ರೀ ಗುಂಡಪ್ಪ ವಕೀಲ್ : ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ನಾನು ಮಾತನಾಡುವುದನ್ನು ಸ್ವಲ್ಪ ದಯವಿಟ್ಟು ಕೇಳಿ. ನಾನು ಏನು ಮಾತನಾಡುತ್ತಿದ್ದೇನೆಂದರೆ ನಾವು ಹೋಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಅವರ ಮನೆಯಲ್ಲಿ ಇವರು, ಇವರ ಮನೆಯಲ್ಲಿ ಅವರು ಹೋಗಿ ಕಾಲಿಗೆ ಬಿದ್ದು ಬೇಡಿಕೊಳ್ಳುವುದು. ಬೇಡಿಕೊಂಡು ನಮ್ಮ ಈ ಸದಸ್ಯರಿಗೆ ಇಂತಹ ಅವಮಾನ ಮಾಡಬೇಡಿ ಸ್ವಾಮಿ ಎಂದು ಹೇಳತಕ್ಕಂಥಹ ಪರಿಸ್ಥಿತಿ ಈ ಸದನಕ್ಕೆ ಬಂದಿದೆ ಎಂದರೆ ನಮ್ಮ ಚಂದ್ರೇಗವಡರು ಹೋಗಿ ಆ ಅವಕಾಶವನ್ನು ಉಪಯೋಗ ಮಾಡಿಕೊಂಡು ಆ ರೀತಿ ಕೇಳಬೇಕು. ಮಾನ್ಯ ಚಂದ್ರೇಗೌಡರು ಇದು ಬಹಳ ಸೀರಿಯಸ್ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ : ಇದು ಸಂಪ್ರದಾಯ ಎಂದು ಹೇಳಿದೆ. ಕಾಲಿಗೆ ಬೀಳುವುದು ಅಲ್ಲ. ಕೆಲವು ಫಾರ್ಮಾಲಿಟೀಸ್ ಇವೆ.

Mr.SPEAKER :There are some formalities to approach Chief Justice.

ಶ್ರೀ ಗುಂಡಪ್ಪ ವಕೀಲ್ : ಸೀರಿಯಸ್ ಆದಂತಹ ವಿಚಾರ ಇದೆ, ತಾವು ದಯವಿಟ್ಟು ಕೇಳಬೇಕು. ಇಲ್ಲಿ ಸುಮಾರು 80 ನೋಟಿಫಿಕೇಷನ್ಸ್ ಆಗಿವೆ. ಮೆಂಬರ್ಸ್‌ಗೆ ಏನು ಹಕ್ಕು ಇದೆ? ಏನು ರೈಟ್ಸ್ ಇದೆ? ಏನು ಲಯಬಿಲಿಟೀಸ್ ಇದೆ? ಮಾನ ಮರ್ಯಾದೆ ಏನು ಇದೆ? 80 ನೋಟ್‌ಫಿಕೇಷನ್ಸ್ ಮಾಡಿದ್ದಾರೆ. ಎಲ್ಲರಿಗೆ ಬುಕ್ ಸಪ್ಲೈ ಮಾಡಿದ್ದೀರಿ. ಆ ಬುಕ್‌ನಲ್ಲಿ ಏನು ಇದೆ? ನನ್ನ ಕ್ಷೇತ್ರದಲ್ಲಿ ನಾನು ನಂಬರ್ ಒನ್ ಪ್ರಜೆ. ನಾನು ನನ್ನ ಕ್ಷೇತ್ರ ಬಿಟ್ಟು ಯಾವುದೇ ಕೋರ್ಟ್‌ಗೆ ಹೋಗುತ್ತಿಲ್ಲ. ಹೈಕೋರ್ಟ್‌ಗೆ ಹೋಗುತ್ತಿಲ್ಲ, ಯಾರ ಮನೆಗೂ ಹೋಗುತ್ತಿಲ್ಲ. ನಾನು ಆ ರೀತಿ ಮಾಡಿದರೆ ನನಗೆ ಅವರು ಅಲ್ಲಿ ಗೌರವ ಕೊಡಲಿ, ಕೊಡಲಾರದೇ ಇರಲಿ, ಆ ಪ್ರಶ್ನೆ ಬೇರೆ. ನನ್ನ ಕ್ಷೇತ್ರಕ್ಕೆ ಬಂದಾಗ ಕಾನೂನು ಏನು ಹೇಳುತ್ತದೆ? ಅದನ್ನು ಪಾಲನೆ ಮಾಡತಕ್ಕಂತಹ ವ್ಯವಸ್ಥೆ ಆಗಬೇಕು. ಅದು ಹೈಕೋರ್ಟ್ ಜಡ್ಜ್ ಇರಲಿ ಅಥವಾ ಯಾವುದೇ ಮತ್ತೊಬ್ಬ ನ್ಯಾಯಾಧೀಶರು ಇರಲಿ. ಅವರೂ ಕಾನೂನು ಪ್ರಕಾರ ನಡೆದುಕೊಳ್ಳಬೇಕು. ನಾವು ಕಾನೂನು ಪ್ರಕಾರ ನಡೆದುಕೊಳ್ಳಬೇಕು. ಅದು ಪ್ರಶ್ನೆ.

Mr.SPEAKER : I am very sorry. You are going into detail. Sri.Ramaiah, Please continue. I cannot allow it.

ಶ್ರೀ ಗುಂಡಪ್ಪ ವಕೀಲ್ : ನಾನು ಡೀಟೇಲ್‌ಗೆ ಹೋಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ರಾಮಯ್ಯನವರೇ, ನೀವು ಕಂಟಿನ್ಯೂ ಮಾಡಿ.

ಶ್ರೀ ಗುಂಡಪ್ಪ ವಕೀಲ್ : ನಾನು ಡೀಟೇಲ್‌ಗೆ ಹೋಗುತ್ತಿಲ್ಲ.

ಅಧ್ಯಕ್ಷರು : ನಿಮ್ಮ ಕ್ಷೇತ್ರಕ್ಕೆ ಬಂದಿದ್ದೀರಿ. ಇನ್ನೇನು ಹೇಳುತ್ತೀರೋ ಯಾರಿಗೆ ಏನು ಗೊತ್ತು!? ಎಲ್ಲಾ ಸದಸ್ಯರದ್ದೂ ವಿಚಾರ ಕೇಳಿದ್ದೇನೆ. ಅದಕ್ಕೆ ಅವರು ಇತ್ಯರ್ಥವಾಗಿ ಹೇಳಿದ್ದಾರೆ. ನಾವು ಹೋಗಿ ಮಾತನಾಡುತ್ತೇವೆಂದು ಹೇಳಿದ್ದಾರೆ. Again you are re-opening it.

ಶ್ರೀ ಗುಂಡಪ್ಪ ವಕೀಲ್ : ಒಂದು ನಿಮಿಷ ಯೀಲ್ಡ್ ಆಗಬೇಕು. ನಾನು ಮುಗಿಸುತ್ತೇನೆ.

ಅಧ್ಯಕ್ಷರು : ರಾಮಯ್ಯನವರೇ ನೀವು ಮಾತನಾಡಿ. ಇನ್ನು ಹತ್ತು ನಿಮಿಷ ಇದೆ. 5.30ರವರೆಗೆ ನಾವು 5.30ಕ್ಕೆ ಸಭೆಯನ್ನು ಅಡ್ಜರ್ನ್ ಮಾಡುತ್ತಿದ್ದೇವೆ.

ಶ್ರೀ ಗುಂಡಪ್ಪ ವಕೀಲ್ : ಒಂದು ನಿಮಿಷ ಯೀಲ್ಡ್ ಆಗಿ.

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರು ಅಪ್ಪಣೆ ಕೊಡುತ್ತಿಲ್ಲವಲ್ಲ.

Mr.SPEAKER : I don't want to hear anything. Sri. Ramaiah, Please talk. When I am allowing you, you must talk. ಎಲ್ಲ ಮುಗಿದ ಮೇಲೆ ತಿರುಗಿ ಮೊದಲಿನಿಂದ ಎತ್ತಿಕೊಳ್ಳುತ್ತೀದ್ದೀರಲ್ಲ. ರಾಮಯ್ಯನವರೇ, ನೀವು ದಯವಿಟ್ಟು ಸ್ಟಾರ್ಟ್ ಮಾಡಿ.

ಶ್ರೀ ಗುಂಡಪ್ಪ ವಕೀಲ್ : ಇದು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು: ಮಾನ್ಯ ರಾಮಯ್ಯನವರೇ ತಾವು ಮಾತನಾಡಿ, ಇಲ್ಲದಿದ್ದರೆ ನಾನು ಮಾನ್ಯ ಸಭಾಪತಿಯವರನ್ನು ಮಾತನಾಡಲು ಕರೆಯುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಆಡಳಿತದ ವ್ಯವಸ್ಥೆ ಬಗ್ಗೆ ರಾಜ್ಯಪಾಲರು ಮಾಡಿರುವಂತಹ ಪ್ರಸ್ತಾಪಗಳ ಬಗ್ಗೆ ನನಗೆ ಪ್ರಾಮಾಣಿಕವಾಗಿ ಆಗಿರುವಂತಹ ಅನಿಸಿಕೆಗಳನ್ನು ಇಷ್ಟು ಹೊತ್ತಿನವರೆಗೆ ಪ್ರಸ್ತಾಪ ಮಾಡಿದ್ದೇನೆ. ಇನ್ನು ಮುಂದೆ ಈ ನಾಡಿನ ಅಭಿವೃದ್ಧಿ ವಿಚಾರ. ಕಳೆದ ವರ್ಷ ಹೇಗೆ ನಡೆಯಿತು ಎನ್ನುವುದರ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಬಂದಂತಹ ಸವಾಲುಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಮುಂದೆ ಈ ರಾಜ್ಯದ ಜನರ ಕಲ್ಯಾಣಕ್ಕಾಗಿ ತೆಗೆದುಕೊಳ್ಳುವಂತಹ ಅಭಿವೃದ್ಧಿ ಕೆಲಸದ ಬಗ್ಗೆ ಅವರೇನು ಪ್ರಸ್ತಾಪ ಮಾಡಿದ್ದಾರೋ ಅದನ್ನು ನಾನು ಪ್ರಸ್ತಾಪ ಮಾಡಬೇಕು ಎಂದು ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಕಾರ ಮೂರು ರಾಷ್ಟ್ರೀಯ ಸಮಸ್ಯೆಗಳ ನಮ್ಮ ಮುಂದೆ ಇದೆ. ಒಂದು ಶಿಕ್ಷಣ, ಶಿಕ್ಷಣ ಎಂದರೆ,

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ಒಂದು ವಿಚಾರ ಹೇಳಬೇಕು.

ಶ್ರೀ ವೈ.ಕೆ. ರಾಮಯ್ಯ: ನಾನು ಮುಗಿಸಿ ಬಿಡುತ್ತೇನೆ. ಆ ನಂತರ ನೀವು ಮಾತನಾಡಿ ನೀವೇನು ಹೇಳುತ್ತೀರಿ ಎಂದು ಗೊತ್ತು. ನಿಮ್ಮ ಮೇಲೆ. ನಾನೇನೂ ಮಾತನಾಡಿಲ್ಲ.

ಶ್ರೀ ಸಿ. ಬೈರೇಗೌಡ : ಕೃಷಿ ಇಲಾಖೆಯ ಮೇಲೆ ಮಾತನಾಡಿದಂತಹ ಮಾನ್ಯ ರಾಮಯ್ಯನವರು ಕೃಷಿ ಇಲಾಖೆಯಲ್ಲಿ ಏನೇನೋ ಬಹಳ ಪ್ರಕರಣಗಳು ನಡೆದು ಹೋಗಿ ಬಿಟ್ಟಿದೆ ಎಂದು ಹೇಳಿದ್ದಾರಂತೆ. ಅದಕ್ಕಾಗಿ ತಾವು ಸ್ವಲ್ಪ ದಯಮಾಡಿ ಕುಳಿತುಕೊಳ್ಳಿ.

5.20 ಪಿ.ಎಂ.

ಶ್ರೀ ವೈ.ಕೆ. ರಾಮಯ್ಯ : ನಾನು ಹೇಳಿದ ಮೇಲೆ ನೀವು ಮಾತನಾಡಿ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಬೈರೇಗೌಡರು ಪ್ರೊಸೀಡಿಂಗ್ಸ್ ತೆಗೆದುಕೊಂಡು ಓದಲಿ. ನಾನು ಏನು ಹೇಳಿದ್ದೇನೆ ಎನ್ನುವುದನ್ನು ಇನ್ನೊಂದು ಬಾರಿ ಹೇಳುತ್ತೇನೆ. ಅದರಲ್ಲಿ ಏನಾದರೂ ಅಪವಾದ ಇದ್ದರೆ ನಾನಾಗಲೇ ಹೇಳಿದ್ದೇನೆ, ಬೈರೇಗೌಡರ ಬಗ್ಗೆ ಆಪಾದನೆ ಮಾಡುವಷ್ಟು ಅಪಕ್ವವಾದಂತಹ ಬುದ್ಧಿಯುಳ್ಳ ರಾಜಕಾರಣಿ ನಾನಲ್ಲವೆಂದು ಕೂಡ ಹೇಳಿದ್ದೇನೆ. ಅವರು ಪ್ರೊಸೀಡಿಂಗ್ಸ್ ಓದಲಿ. ನಾನು ಏನು ಹೇಳಿದ್ದೇನೆ ಎನ್ನುವುದನ್ನು ರಿಪೀಟ್ ಮಾಡುತ್ತೇನೆ. ಅವರು ಈಗ ಏನಾದರೂ ಇದ್ದರೆ ಪ್ರಸ್ತಾಪ ಮಾಡಲಿ.

ಅಧ್ಯಕ್ಷರು : ನೀವು ಹೇಳಿದ್ದೀರಲ್ಲ ಅದು ಪ್ರೊಸೀಡಿಂಗ್ಸ್ ನಲ್ಲಿ ಇದೆ. ನಾನು ಅವರಿಗೆ (ಮಾನ್ಯ ರಾಮಯ್ಯನವರಿಗೆ) ಹೇಳಿದ್ದೇನೆ, ನೀವು ನೋಟೀಸ್ ಕೊಟ್ಟು ಮಾತನಾಡಬೇಕು ಎಂದು.

ಶ್ರೀ ವೈ.ಕೆ. ರಾಮಯ್ಯ: ನಾನು ಮಾನ್ಯ ಬೈರೇಗೌಡರ ಬಗ್ಗೆ ಮಾತನಾಡಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಆ ತೀರ್ಮಾನಕ್ಕೆ ಬಂದಿದ್ದರೆ ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಸ್ನೇಹಿತರು ಕೂಡ ಈ ಕಡೆಯಿಂದ ಬಹಳ ತೀವ್ರತರವಾದಂತಹ ಪ್ರತಿರೋಧವನ್ನು ವ್ಯಕ್ತ ಮಾಡಿದ್ದಾರೆ.

ಅಧ್ಯಕ್ಷರು : ತಾವು ಪ್ರೊಸೀಂಡಿಂಗ್ಸ್ ನಲ್ಲಿ ನೋಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನನಗೆ ಪ್ರೊಸೀಡಿಂಗ್ಸ್ ಕೊಡಿ ಎಂದು ಕೇಳಿದ್ದೇನೆ. ನನಗೆ ಇವತ್ತೆ ಪ್ರೊಸೀಡಿಂಗ್ಸ್ ಕೊಡಿಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿಸಬೇಕು.

ಅಧ್ಯಕ್ಷರು: ಅವರ ಹೆಸರು ಹೇಳಿರುವಾಗ ಜವಾಬ್ದಾರಿ ಇರುತ್ತದೆ. ಪ್ರೊಸೀಡಿಂಗ್ಸ್ ನೋಡಿ.

ಶ್ರೀ ವೈ.ಕೆ. ರಾಮಯ್ಯ: ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ನಾಳೆ ಪತ್ರಿಕೆಯಲ್ಲೇ ಇದೇ ತಲೆಬರಹದಲ್ಲೆ ಬರತಕ್ಕಂಥ ಸಂದರ್ಭ ಕೂಡ ಇದೆ. ಆದುದರಿಂದ ಅದರ ಬಗ್ಗೆ ನಿಜಾಂಶ ಏನು ಎನ್ನುವುದಕ್ಕೆ ಎಂದು ಹೇಳುವುದಕ್ಕೆ ಪ್ರೊಸಿಡಿಂಗ್ಸ್ ಕೇಳುತ್ತಿದ್ದೇನೆ. ಮತ್ತೆ ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಅವಕಾಶ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ: ಒಂದು ಕಡೆ ಅವರು ಮಾಡಿರತಕ್ಕಂಥ ಆಪಾದನೆ ಇದೆ. ಅದಕ್ಕೆ ತಾವು ಏನೂ ಪ್ರತಿಕ್ರಿಯೇ ಇಲ್ಲ ಎಂದರೆ ನನ್ನ ವೈಯಕ್ತಿಕ ವರ್ಚಸ್ಸಿಗೆ ಧಕ್ಕೆ ಉಂಟಾಗುತ್ತದೆ.

ಅಧ್ಯಕ್ಷರು : ಅದಕ್ಕೋಸ್ಕರ ತಾವು ಉತ್ತರ ಕೊಡುವುದಕ್ಕೆ ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೀನಲ್ಲ.

ಶ್ರೀ ಸಿ. ಬೈರೇಗೌಡ: ನನ್ನ ಮೇಲೆ ಆಪಾದನೆಗಳು ಬಂದಮೇಲೆ ಅದಕ್ಕೆ ನಾನು ಉತ್ತರ ಕೊಡುವುದು ಎಷ್ಟರಮಟ್ಟಿಗೆ ಸಮಂಜಸವಾಗುತ್ತದೆ?

ಅಧ್ಯಕ್ಷರು : ಈಗ ಮಾನ್ಯ ರಾಮಯ್ಯನವರು ಉತ್ತರ ಹೇಳಿ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಿದ್ದೇನೆ ಎನ್ನುವುದನ್ನು ಮತ್ತೆ ರಿಪೀಟ್ ಮಾಡುತ್ತೇನೆ.

ಅಧ್ಯಕ್ಷರು : ಅವರ ಸ್ನೇಹಿತರು ಅವರಿಗೆ ಹೇಳಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ : ನಾನು ಅದೇ ಮಾತನ್ನು ಹತ್ತು ಸಲ ಹೇಳುತ್ತೇನೆ. ನಾನು ಹೇಳಿದ್ದನ್ನು ಕೇಳಿ ಆಮೇಲೆ ಅವರು ಹೇಳಲಿ. ನಾನು ಯೀಲ್ಡ್ ಆಗಿಲ್ಲ.

ಶ್ರೀ ಸಿ. ಬೈರೇಗೌಡ : ತಾವು ಹೇಳಿ ಸ್ವಾಮಿ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರು ಯಾರ್‍ಯಾರು ಏನೇನು ಹೇಳಿದ್ದಾರೆ ನನಗೆ ಗೊತ್ತಿಲ್ಲ. ನಾನು ಹಿಂದಿನ ಸರ್ಕಾರ ಇದ್ದಾಗ ಕೃಷಿ ಇಲಾಖೆಯಲ್ಲಿ ನಡೆದಂತಹ ಭ್ರಷ್ಟತನದ ಬಗ್ಗೆ ಹೇಳಿದ್ದೇನೆ. ಆ ಭ್ರಷ್ಟತನ ಮಾಡಿದಂತಹ ಅಧಿಕಾರಿ ಬಗ್ಗೆ ಎನ್‌ಕ್ವೈರಿಗೆ ಆರ್ಡರ್ ಮಾಡಿರುವಂತಹ ವಿಷಯವನ್ನು ಹೇಳಿದ್ದೇನೆ. ಆ ಎನ್‌ಕ್ವೈರಿ ಮಾಡಬೇಕೆಂದು ಸನ್ಮಾನ್ಯ ಬೈರೇಗೌಡರು ಆರ್ಡರ್ ಮಾಡಿದ್ದಾರೆ. ಅಂದಿನ ಕೃಷಿ ಸಚಿವರಾದಂತಹ ತಾವು ಮಾಡಿದ್ದೀರೆಂದು ಹೇಳಿದ್ದೇನೆ. ನಾನು ಒಂದು ಪ್ರಶ್ನೆ ಕೇಳಿದ್ದೇನೆ. ಆ ಭ್ರಷ್ಟತನದ ಬಗ್ಗೆ ಸಿ. ಓ. ಟಿ. ಎನ್‌ಕ್ವೈರಿ ಮಾಡುವಂತಹ ಸಂದರ್ಭದಲ್ಲಿ ಪ್ರೈಮ್ ಫೆಸಿ ಇಲ್ಲದೆ ಎನ್‌ಕ್ವೈರಿ ಮಾಡುವುದಕ್ಕೆ ಆಗುವುದಿಲ್ಲ. ಆ ಎನ್‌ಕ್ವೈರಿ ಮಾಡುವುದಕ್ಕೆ ಆರ್ಡರ್ ಮಾಡಿದಂತಹ ಸಂದರ್ಭದಲ್ಲಿ ಆ ಅಧಿಕಾರಿ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಅಷ್ಟೇ ಅಲ್ಲ, ಜಲಾನಯನ ಪ್ರದೇಶದ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೂ ಹಾಗೂ ಕೃಷಿ ಇಲಾಖೆಗೂ ಕೂಡ ಕಿತ್ತಾಟ ಬಂದು ಆ ಯೋಜನೆ ನಮ್ಮ ಸರ್ಕಾರದಿಂದ ಕೈತಪ್ಪಿ ಹೋಯಿತೆಂದು ಹೇಳಿದ್ದೇನೆ. ಮಾನ್ಯ ಬೈರೇಗೌಡರು ಕೈಯಾಡಿಸಿದರು ಎಂದು ಹೇಳುವುದಿಲ್ಲ. ನಾನು ಹೇಳಿರುವುದು ಇಷ್ಟೇ. ಇವತ್ತಿಗೂ ಮಾನ್ಯ ಬೈರೇಗೌಡರು ಬದುಕುವಂತಹ ರೀತಿ ನೀತಿ ನನಗೆ ಗೊತ್ತಿದೆ. ನಾನು ಬದುಕುವ ರೀತಿ ಅದನ್ನು ಕೂಡ ಹೇಳಿದ್ದೇನೆ. ಮಾನ್ಯ ಬೈರೇಗೌಡರು ಭ್ರಷ್ಟರು ಎಂದು ಹೇಳುವಷ್ಟು ಅಥವಾ ಶಾಮೀಲಾಗಿದ್ದಾರೆ ಎಂದು ಹೇಳುವಷ್ಟು ನಾನು ಅಪಕ್ವವಲ್ಲವೆಂದು ಹೇಳಿದ್ದೇನೆ. ತಾವು ಪ್ರೊಸೀಡಿಂಗ್ಸ್ ಅನ್ನು ಓದಿ. ಬೈರೇಗೌಡರು ಭ್ರಷ್ಟತನ ಮಾಡಿದ್ದಾರೆ. ಆಸ್ತಿ ಹೊಡೆದಿದ್ದಾರೆ, ದುಡ್ಡು ತೆಗೆದುಕೊಂಡಿದ್ದಾರೆ, ಟ್ರಾನ್ಸ್‌ಫರ್‌ಗೆ ದುಡ್ಡು ಹೊಡೆದಿದ್ದಾರೆ ಎಂದು ಏನಾದರೂ ಆಪಾದನೆ ಇದ್ದರೆ, ನೀವು ನನಗಿಂತ ಹಿರಿಯರಿದ್ದೀರಿ, ತಾವು ಬರೀ ಎಕ್ಸ್‌ಪ್ಲೈನ್ ಮಾಡುವುದಲ್ಲ, ಸಾರ್ವತ್ರಿಕವಾಗಿ ನಾನು ನಿಮ್ಮನ್ನು ಕ್ಷಮೆ ಕೇಳುತ್ತೇನೆ. ತಾವು ಪ್ರೋಸಿಡಿಂಗ್ಸ್ ತೆಗೆದು ನೋಡಿ. ಆಮೇಲೆ ತಾವು ಮಾತನಾಡಿ. ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಕಾರ ಮೂರು ರಾಷ್ಟ್ರೀಯ ಸಮಸ್ಯೆಗಳು ನಮ್ಮ ಮುಂದಿವೆ. ಮೊದಲನೆಯದು ಶಿಕ್ಷಣ, ಎರಡನೆಯದಾಗಿ ಪರಿಸರ ಹಾಗೂ ಮೂರನೆಯದಾಗಿ ಜನಸಂಖ್ಯೆ ನಿಯಂತ್ರಣ.

ಅಧ್ಯಕ್ಷರು : ರಾಮಯ್ಯನವರೇ ಒಂದು ನಿಮಿಷ ತಾಳಿ. ನಾವು ಸದನವನ್ನು ಐದೂವರೆಗೆ ಮುಗಿಸುವುದರಿಂದ ನೀವೇನು ಅವರ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿದಿರಿ, ಅದರ ಬಗ್ಗೆ ಉತ್ತರ ಹೇಳಿಬಿಡಲಿ. ಇವತ್ತು ನೀವು ಮಾತನಾಡುವುದು, ಅದು ನಾಳೆ ಪತ್ರಿಕೆಯಲ್ಲಿ ಬರುವುದು. ಆಮೇಲೆ ಅದಕ್ಕೆ ಉತ್ತರ ಹೇಳುವುದು ಸರಿ ಎನಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಪ್ರೊಸಿಡಿಂಗ್ಸ್ ಕೇಳಿದ್ದೇನೆ. ಆದರೆ ಈಗ ಮಾನ್ಯ ರಾಮಯ್ಯನವರು ಏನು ಹೇಳಿದ್ದಾರೆ ಅಷ್ಟಕ್ಕೆ ಸೀಮಿತವಾಗಿ ಉತ್ತರ ಕೊಡುವ ಅವಶ್ಯಕತೆ ಇದೆ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೂ ಸಿ. ಓ. ಡಿ. ಎನ್‌ಕ್ವೈಟರಿಗೆ ಕಳುಹಿಸಿದ್ದಾರೆ ಎಂದು ಸಹ ಅವರೇ ಹೇಳಿದ್ದಾರೆ. ಇನ್ನು ಏನು ಮಾಡಬೇಕಾಗಿತ್ತು? ಅನುಮಾನ ಬಂದಮೇಲೆ ಇದರ ಬಗ್ಗೆ ವಿಚಾರಣೆಯಾಗಬೇಕು. ವಿಚಾರಣೆಯಾಗದೆ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವರು ವಕೀಲರಿದ್ದಾರೆ, ಇಷ್ಟೊತ್ತು ಕೂಡ ನ್ಯಾಯಾಂಗದ ಬಗ್ಗೆ ನ್ಯಾಯಾಧೀಶರು ಯಾವರೀತಿ ಇರಬೇಕು? ಇವರ ಹಕ್ಕುಗಳೇನು? ಅವರ ಹಕ್ಕುಗಳೇನು? ಎನ್ನುವುದರ ಬಗ್ಗೆ ಬಹಳ ಪ್ರತಿಪಾದನೆ ಮಾಡಿರತಕ್ಕಂಥ ಮಾನ್ಯ ರಾಮಯ್ಯನವರು ಯಾವುದೇ ಒಬ್ಬ ಅಧಿಕಾರಿ, ಅವನು ಏನಾದರೂ ತಪ್ಪು ಮಾಡಿರಬಹುದು ಎನ್ನುವ ಅನುಮಾನ ಬಂದಾಗ ನಾವು ಅದನ್ನು ವಿಚಾರಣೆ ನಡೆಸದೆ, ಅವನ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ : ಅದಕ್ಕೆ ಉತ್ತರ ಹೇಳುತ್ತೇನೆ. ಅವರಿಗೆ ಗೊತ್ತಾದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು.

ಶ್ರೀ ಸಿ. ಬೈರೇಗೌಡ : ಅದಕ್ಕಿಂತ ಮೊದಲಿಗೆ ಈ ಸರ್ಕಾರ ಬಂದಮೇಲೆ ಅದಕ್ಕೆ ಉತ್ತರವನ್ನು ಇವರು ಹೇಳಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ನನಗೆ ಮಾನ್ಯ ಸುರೇಶ್ ಕುಮಾರ್ ರವರ ಒಂದು ಪ್ರಶ್ನೆ ಬಂತು. ಅದು ಲೋಕಾಯುಕ್ತಕ್ಕೆ ಹೋಗಿದೆ, ಅವರು ಭ್ರಷ್ಟರು ಎನ್ನುವುದು ಸಾಬೀತಾಗಿದೆ. ಅವರನ್ನು ಏಕೆ ಅಮಾನತ್ತಿನಲ್ಲಿ ಇಡಲಿಲ್ಲವೆಂದು ಕೇಳಿದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಏನು ಹೇಳಬೇಕು ಸ್ವಾಮಿ? ಇದರ ಬಗ್ಗೆ ನಾವು ವಿಚಾರಣೆಗೋಸ್ಕರ ಸಿ. ಓ. ಡಿ. ಗೆ ಕಳುಹಿಸಿರುವುದು. ಅವರ ಪ್ರಕಾರೇ ಅದು ಯಾವ ವಿಚಾರ ಏನು ಎಂದು ನಾನು ಕಡತ ನೋಡಿ ಹೇಳಬೇಕಾಗುತ್ತದೆ. ಅವರ ಪ್ರಕಾರವೆ ವಿಚಾರಣೆಗೋಸ್ಕರ ಸಿ. ಓ. ಡಿ. ಗೆ ಹೋಗಿರುವುದು. ವಿಚಾರಣೆಯಾಗಿ, ಲೋಕಾಯುಕ್ತಕ್ಕೆ ಹೋಗಿ, ಲೋಕಾಯುಕ್ತದವರು, ಇವರು ಅಪರಾಧ ಮಾಡಿದ್ದಾರೆ ಎನ್ನುವ ವರದಿ ಕೊಟ್ಟಮೇಲೆ ಅವರ ಮೇಲೆ ಅನೇಕ ಸಂದರ್ಭದಲ್ಲಿ ಕ್ರಮ ತೆಗೆದುಕೊಂಡಿಲ್ಲ. ಹಾಗೂ ಅವರನ್ನು ಅಮಾನತ್ತಿನಲ್ಲಿ ಇಡತಕ್ಕಂಥ ಕೆಲಸ ಕೂಡ ಆಗಿಲ್ಲ. ಅಷ್ಟೇ ಅಲ್ಲ ಇದನ್ನು ರಾಮಯ್ಯನವರು ಏಕೆ ಹೇಳುತ್ತಿದ್ದಾರೆ ಎಂದು ಕೂಡ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಬೈರೇಗೌಡರೆ, ನಿಮ್ಮ ಪರ್ಸನಲ್ ಬಗ್ಗೆ ಅವರು ಏನೂ ಹೇಳಲಿಲ್ಲ. ನೀವು ಏಕೆ ಹೇಳುವುದಕ್ಕೆ ಹೋಗುತ್ತೀರಿ? ಬೇಡ. ಆದರಿಂದ ಬೇರೆ ಕಂಟ್ರಾವರ್ಸಿ ಪ್ರಾರಂಭವಾಗುತ್ತದೆ.

ಶ್ರೀ ವೈ. ಕೆ. ರಾಮಯ್ಯ : ಅಧಿಕಾರಿಗೂ ನನಗೂ ಏನಾದರೂ ಶಾಮೀಲು ಇದೆಯಾ ಎಂದು ಹೇಳಿ.

ಅಧ್ಯಕ್ಷರು: ಇನ್ನು ನಮ್ಮ ಮುಂದೆ ಮೂರು ನಿಮಿಷ ಇದೆ. ತಾವು ಉತ್ತರ ಕೊಡುವುದಿದ್ದರೆ ಕೊಡಿ. ಐದೂವರೆಗೆ ಹೌಸ್ ಅಡ್ಜರ್ನ್ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ: ಆಮೇಲೆ ಇನ್ನೊಂದು ಜರ್ಮನ್ ಡೆವಲಪ್‌ಮೆಂಟ್, ಅದರ ಹೆಸರು ನನಗೆ ಮರೆತು ಹೋಗಿದೆ. ಅದು ಜ್ಞಾಪಕ ಇಲ್ಲ. ನನಗೆ ಜ್ಞಾಪಕದ ಪ್ರಕಾರ ಹೇಳಬೇಕಾದರೆ ಅಲ್ಲೆ ಕೆಲವು ನಿಬಂಧನೆಗಳು ಇದ್ದವು. ಆ ನಿಬಂಧನೆಗಳನ್ನು ನಾನು ಒಪ್ಪಿರಲಿಲ್ಲ. ಆ ನಿಬಂಧನೆಗಳಿಗೆ ಒಪ್ಪಿದರೆ ಅವರು ಹೇಳುವ ರೀತಿಯಲ್ಲೆ ಕುಣಿಯುವುದಕ್ಕೆ ಅಲ್ಲ ನಮ್ಮ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ಬಂದಿರುವುದು. ಇನ್ನೊಂದು ದೇಶ ಹೇಳಿದ ರೀತಿಯಲ್ಲೆ ನಾವು ಅದನ್ನು ಆಳವಡಿಸಬವೇಕು ಆ ರೀತಿಯಿಂದ ಇರಬೇಕೆಂದು ಅಲ್ಲಿ ನಮ್ಮ ಸ್ಥಳೀಯವಾಗಿ ಇರುವುದು ನಮ್ಮ ಆಡಳಿತಾತ್ಮಕ ವಿವೇಚನೆಗೆ ಬೆಟ್ಟಂತಹ ರೀತಿಯಲ್ಲೆ ನಾವು ಆಡಳಿತ ನಡೆಸಬೇಕಾಗಿರತಕ್ಕಂಥಾದ್ದು ಅದಕ್ಕೋಸ್ಕರ ಸರ್ಕಾರ ಇರುವುದು. ಯಾರೋ ಇನ್ನೊಂದು ದೇಶ ಅಥವಾ ಸರ್ಕಾರ ಹೇಳಿದಂತೆ ಅದರ ಕೈಗೊಂಬೆಯಾಗಿ ವರ್ತಿಸಬೇಕು ಎಂದರೆ ಅದಕ್ಕೆ ನನ್ನ ಒಪ್ಪಿಗೆ ಇಲ್ಲ. ಅವರು ನೆರವು ಕೊಡುತ್ತಾರೆ ಎಂದು ಅವರು ಹೇಳಿದ ರೀತಿಯಲ್ಲೆ ನಡೆದುಕೊಳ್ಳಬೇಕು, ಕಾರ್ಯಗತ ಮಾಡಬೇಕು ಎಂದರೆ ಅದು ಸಾಧ್ಯವಿಲ್ಲ. ಈ ವಿಚಾರವನ್ನು ನಾನು ಒಂದು ಸಾರಿ ಅಲ್ಲ ಅನೇಕ ಬಾರಿ ಅಂದಿನ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿ, ಅಭಿವೃದ್ಧಿ ಆಯುಕ್ತರ ಜೊತೆ ಚರ್ಚೆ ಮಾಡಿ, ಇಲ್ಲ ಈ ರೀತಿ ಹೋಗುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಕೂಡ ಹೇಳಿದ್ದೇನೆ. ತಾವು ಇಷ್ಟೆಲ್ಲಾ ಹೇಳುತ್ತಿದ್ದೀರಿ ಅಲ್ಲ, ಮಂಡ್ಯದ ಮೈ ಶುಗರ್ ಸಕ್ಕರೆ ಕಂಪನಿ ವಿಚಾರವಾಗಿ ಇವತ್ತಿನ ಪತ್ರಿಕೆ ಸೇರಿದಂತೆ ಎರಡು ಮೂರು ದಿವಸದಿಂದ ಬರುತ್ತಿದೆ. ಎಲ್ಲಿದೆ ಸ್ವಾಮಿ ಅದು? ಅಲ್ಲೆ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಈ ಸದನದಲ್ಲೆ ಚರ್ಚೆಯಾಗಿದೆ. ಆ ಚರ್ಚೆಯಲ್ಲೆ ನಾನೂ ಸಹ ಭಾಗವಹಿಸಿದ್ದೇನೆ. ಅದರ ಬಗ್ಗೆ ವಿಚಾರಣೆ ಮಾಡುತ್ತೆನೆ ಎಂದು ಕಳೆದ ವಿಧಾನಸಭೆಯಲ್ಲಿ ನಾನು ಆಶ್ವಾಸನೆ ಕೊಟ್ಟಿದ್ದೇನೆ. ಮಾನ್ಯ ಪುಟ್ಟಣ್ಣನವರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲೆ ನಾನು ಸಹ ಅದರಲ್ಲೆ ಭಾಗವಹಿಸಿದ್ದೇನೆ. ಅಂದಿನ ಮಾನ್ಯ ಮುಖ್ಯಮಂತ್ರಿಗಳು ಇದನ್ನು ವಿಚಾರಣೆ ಮಾಡುತ್ತೇವೆ, ಸಿಓಡಿಗೆ ಕಳುಹಿಸುತ್ತೇವೆ ಎಂದು ಹೇಳಿ ಕಳುಹಿಸಿದ್ದಾರೆ. ಆದರೆ ಆ ಸಿ ಓ ಡಿ ವರದಿ ಇವತ್ತಿನವರೆಗೂ ಏನಾಯಿತು? ಸಾವಿರಾರು ಕೋಟಿ ರೂಪಾಯಿ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ನಾವು ಇವತ್ತು ಎದೆ ತಟ್ಟಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಇದ್ದಂತಹ ಕಾಲದಲ್ಲೆ ಯಾರನ್ನು ರಕ್ಷಣೆ ಮಾಡಬಾರದು. ತಪ್ಪು ಮಾಡಿರತಕ್ಕಂಥ ಅಪರಾಧಿಗೆ ಶಿಕ್ಷೆಯಾಗಬೇಕು ಎನ್ನುವ ಕಾರಣಕ್ಕೋಸ್ಕರ ನಾವು ಅದನ್ನು ಸಿ. ಓ. ಡಿಗೆ ಕಳುಹಿಸಿದೆವು. ನಿಮಗೆ ಸಿಓಡಿ ರಿಪೋರ್ಟ್ ತರಿಸುವುದಕ್ಕೆ ಒಂದೂವರೆ ವರ್ಷ ಬೇಕಾ? ಅದನ್ನು ಮುಚ್ಚಿ ಹಾಕತಕ್ಕಂಥ ಪ್ರಯತ್ನ ನಿಮ್ಮ ಸರ್ಕಾರದಲ್ಲೆ ನಡೆಯುತ್ತಾ ಇಲ್ಲವೆ?

ಅದು ರೈತರಿಗೆ ಸಂಬಂಧಪಟ್ಟಂತಹ ಸಮಸ್ಯೆ. ಅಲ್ಲೆ ಲಕ್ಷಾಂತರ ರೈತರು ಇದ್ದಾರೆ, ಅವರಿಗೆ ಕಬ್ಬು ಸರಬರಾಜು ಮಾಡಿದಂತಹ ಮಾಲಿಗೆ ಹಣ ಪಡೆಯಬೇಕಾದರೆ ಮೂರು ತಿಂಗಳಾಗುತ್ತಾ ಬಂತು. ಅದು ಯಾವತ್ತು ನಷ್ಟವಾಯಿತು, ಅಂದಿನಿಮದ ಮುಚ್ಚಿಹೋಗುತ್ತದೆ ಎನ್ನುವ ಅನುಮಾನ ರೈತರಲ್ಲೆ ಮೂಡುತ್ತಾ ಬಂದಿ. ಅದು ಬಹಳ ಹಿಂದೇನೆ ಪ್ರಾರಂಭವಾದಂತಹ ಸಕ್ಕರೆ ಕಾರ್ಖಾನೆ, ಅದು ಇವತ್ತು ಮುಚ್ಚುವಂತಹ ಸ್ಥಿತಿಗೆ ಬಂದಿದೆ. ಅದಕ್ಕೋಸ್ಕರ ನಾವು ಇದನ್ನು ಸರಿಪಡಿಸಬೇಕು ಎನ್ನುವಂತಹ ಕ್ರಮ ತೆಗೆದುಕೊಂಡಿದ್ದಾರೆ, ಇವರು ಇವತ್ತು ಅದನ್ನು ಮುಚ್ಚಿ ಹಾಕತಕ್ಕಂಥ ಕೆಲಸ ಈ ಸರ್ಕಾರದಿಂದ ಆಗುತ್ತಿದೆ.

ನಾನಂತೂವೂ ಅವರು ಮಾತನಾಡುವಾಗ ಇಲ್ಲೆ ಇರಲಿಲ್ಲ. ಈ ಇಲಾಖೆಯ ಚರಿತ್ರೆಯನ್ನು ತರಿಸಿ, ನನ್ನ ಅವಧಿಯಲ್ಲಿ ಆಗಿರುವಂತಹ ಕ್ರಿಮಿನಲ್ ಕೇಸಸ್ ಏನು, ಈ ಇಲಾಖೆ ಎಂದೂ ಪ್ರಾರಂಭವಾಯಿತೋ ಅಂದಿನಿಂದ ಇಂದಿನವರೆಗೂ ಏನು ಆಗಿದೆ ಎಂಬುದನನು ನಾನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಅದನ್ನು ಇವತ್ತು ಹೇಳುವುದಕ್ಕೆ ಹೋಗುವುದಿಲ್ಲ. ಇದು ಮಾನ್ಯ ರಾಮಯ್ಯನವರಿಗೂ ಗೊತ್ತಿದೆ. ಈ ಈಸಿಪಿ ಇಲಾಖೆಯಲ್ಲಿ ಏನು ನಡೆಯುತ್ತಿದೆ, ಏನು ಆಗುತ್ತಿದೆ, ಎಂಬುದನ್ನು ಹೇಳಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಮಾನ್ಯ ವೈ.ಕೆ. ರಾಮಯ್ಯನವರಿಗೆ ಜಾಣ ಮರೆವು ಇದೆ, ತಮಗೆ ಈ ಜಾಣ ಮರೆವು ಬೇಕಾಗಿಲ್ಲ. ಅವರು ಅಲ್ಲಿ ಏನು ನಡೆಯುತ್ತಿದೆ, ಏನು ಆಗಿದೆ ಎನ್ನುವುದನ್ನು ಹೇಳಲಿ ನೋಡೋಣ. ಇವತ್ತು ಕೃಷಿ ಇಲಾಖೆಯಲ್ಲಿ ಆರು ಕೋಟಿ ರೂಪಾಯಿಗಳ ದುರ್ವ್ಯವಹಾರ ನಡೆದಿದೆ ಎಂದು ಅಲ್ಲಿನ ನೌಕರರ ಅಧ್ಯಕ್ಷರಾಗಿರುವವರು ಹೇಳಿದ್ದಾರೆ. ಈ ವಿಚಾರವನ್ನು ಮಾನ್ಯ ರಾಮಯ್ಯನವರು ಏಕೆ ಹೇಳಲಿಲ್ಲ? ಮಾನ್ಯ ಅಧ್ಯಕ್ಷರೆ, ನಾನು ಸರಿಯಾದಂತಹ ಉತ್ತರವನ್ನು ಕೊಡುವುದಕ್ಕೆ ನನಗೆ ಮತ್ತೊಮ್ಮೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00ಗಂಟೆಗೆ ಸೇರುವುದು.

(ಸದನವು ಸಂಜೆ 5 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 13 ನೇ ಮಾರ್ಚ್ ಮಾಹೆ 2001ನೇ ಮಂಗಳವಾರದಂದು ಬೆಳಿಗ್ಗೆ 11.00ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)